Registered with the Registrar of Newspapers in India Under No. 50622/86
'Prasada' Bi-Monthly, Vol. 34 Issue No. 3, May-June 2019




ದೇವನೂರು ಮಠದಲ್ಲಿ ಶ್ರೀ ಗುರುಮಲ್ಲೇಶ್ವರರ 120ನೆಯ ವಾರ್ಷಿಕ ಸಂಸ್ಮರಣ ಹಾಗೂ ನೂತನ ದಾಸೋಹ ಭವನದ ಕಟ್ಟಡವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಶ್ರೀ ಮಲ್ಲಣ್ಣ, ಪ್ರೊ. ಡಿ.ಎಂ. ಶಾಂತಪ್ಪ, ಸೋಮಹಳ್ಳಿ ಶ್ರೀಗಳು, ದೇವನೂರು ಶ್ರೀಗಳು, ಪರಮಪೂಜ್ಯ ಜಗದ್ಗುರುಗಳು, ಶ್ರೀ ಹೊಸಮಠ, ಕನಕಪುರ, ವಾಟಾಳು, ಬರಡನಪುರ, ಮಾದಹಳ್ಳಿ ಮತ್ತು ದಡದಹಳ್ಳಿ ಮಠಗಳ ಪೂಜ್ಯರುಗಳು (20.6.2019)

ಬಿಡಿ ಪ್ರತಿ: ರೂ. 10
e-mail: jsspublications@gmail.com * www.jssonline.org

# ಪ್ರಸಾದ

ದ್ವೈಮಾಸಿಕ

ಸಂಪುಟ 34 ಸಂಚಿಕೆ 3 ಮೇ–ಜೂನ್ 2019



ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು

# ಪ್ರಸಾದ

**ಸಂಪುಟ 34 : ಸಂಚಿಕೆ 3** **ಮೇ-ಜೂನ್ 2019**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

ಮುಖಪುಟ ಚಿತ್ರ

ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಜನ್ಮಶತಾಬ್ದಿ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಶ್ರೀಮತಿ ಪುಷ್ಪಲತಾ ಜಗನ್ನಾಥ್, ಶ್ರೀ ವೈ.ಡಿ. ರಾಜಣ್ಣ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪರಮಪೂಜ್ಯ ಜಗದ್ಗುರುಗಳು, ಶ್ರೀ ಮನು ಬಳಿಗಾರ್, ಡಾ. ಎನ್.ಎಸ್. ತಾರಾನಾಥ (22.6.2019)

## ಪರಿವಿಡಿ


| | |
|---|---|
| ಸಂಪಾದಕೀಯ | 5 |
| ಗುರುವಾಣಿ | 7 |
| ಆಸೆಯೆಂಬುದು ಭವದ ಬೀಜ....<br>**ಪ್ರೊ. ಶಿವಕುಮಾರ ಎಸ್. ಬಳಿಗಾರ** | 9 |
| ಪ್ರಾಣದಲ್ಲಿ ಮಾಯೆಯಿರಲು ಅದೇತರ ನಿರ್ವಾಣ?<br>**ಶ್ರೀ ವೆಂಕಟೇಶ ಕೆ. ಜನಾದ್ರಿ** | 18 |
| ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು<br>**ಪ್ರೊ. ಮೊರಬದ ಮಲ್ಲಿಕಾರ್ಜುನ** | 27 |
| ಶರಣ ಕುಂಬಾರಣ್ಣನ ಸರಸ ದಾಂಪತ್ಯ<br>**ಡಾ. ಕೆ.ಎಸ್. ಮಲ್ಲೇಶ್** | 32 |
| ಹೆಸರುಗಳ ಹೆಣಿಗೆ-ಜನಪದರ ಭಾಷಿಕ ಚಮತ್ಕಾರಗಳು<br>**ಡಾ. ಎನ್.ಎಮ್. ಗಿರಿಜಾಪತಿ** | 47 |
| ಸುತ್ತೂರು ಹೊಳಿದಂಡಿ ಸುತ್ತುಮಲ್ಲಿಗೆ ದಂಡಿ!<br>**ಪ್ರೊ. ಜಿ.ಎಚ್. ಹನ್ನೆರಡುಮಠ** | 54 |
| ವಾರ್ತಾವಿಹಾರ | 55 |

## ತತ್ವಪದ

ಯಾತಕ್ಕೆ ನೀ ಹುಟ್ಟಿದೀ
ಯಾತಕ್ಕೆ ನೀ ಹುಟ್ಟಿದೀ ಮನುಜಾ
ಲೋಕನಾಥನ ಮರತದೀ

ಯಾತಕೆ ಹುಟ್ಟಿ ಭೂತಲದಿ ಕೆಟ್ಟಿ
ಬರಿದೆ ಹೊರುವಿಯಲ್ಲೆ ಮಟ್ಟಿ ಬರಿ ಬಿಟ್ಟಿ

ದ್ವಾರಾ ಒಂಬತ್ತನ್ನು ತೂರಿ ನೋಡದ ಇನ್ನು
ದೂರಾಲೋಚನೆ ಮರೆತುಬಿಟ್ಟೆ ನೀನು ಕೆಟ್ಟಿ

ನಾದ ಒಂದರಿಂದಾಗದು ! ನಾದಕೆ
ದ್ವಿನಾದವು ಕೂಡಿ ಆಡ್ಯಾದೋ
ಮೇದಿನಿಯೊಳು ಬ್ರಹ್ಮನಾದವು ತಿಳಿಯುವ
ಆಧಾರ ಗುರುವಿನ ಬಿಟ್ಟೆ ನೀನು ಕೆಟ್ಟಿ

ಗುರು ಪರಮರ ಗೋಪ್ಯದರುವಿನ ಚರಿತೆಯ
ತ್ವರಿತರಿವುದ ಬಿಟ್ಟಿ ನೀನು ಕೆಟ್ಟಿ

ನಾದಬ್ರಹ್ಮವು ನೋಡದೆ ನಿನ್ನೊಳು
ಆ ನಾದ ಉಭಯವು ಕೂಡಾದೇ
ನಾದ ಉಭಯಿಳಿಗಾಧಾರವಾಗಿ
ಅನಾದಿಯಾದಾತ ಶ್ರೀ ನಾಗಲಿಂಗೇಶನ ಬಿಟ್ಟಿ ನೀನು ಕೆಟ್ಟಿ

- ಶ್ರೀ ನಾಗಲಿಂಗಸ್ವಾಮಿ

**'ಪ್ರಸಾದ' ಚಂದಾ ವಿವರ**

ವಾರ್ಷಿಕ ರೂ. 100 * ದಶವಾರ್ಷಿಕ ರೂ. 500

# ಸಂಪಾದಕೀಯ

ಮೈಸೂರು ನಗರದ ಎಲ್ಲ ವೀರಶೈವ ಸಂಘಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ ಪ್ರತಿ ವರ್ಷವೂ ಬಸವ ಜಯಂತಿ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸುತ್ತದೆ. ಇಂತಹ ಸಮಾಜೋಧಾರ್ಮಿಕ ಸಮಾರಂಭಗಳು ಹೆಚ್ಚಾಗಿ ದಾನಿಗಳ ದೇಣಿಗೆಯಿಂದಲೇ ನಡೆಯುವುದು ವಾಡಿಕೆ. ಒಮ್ಮೆ ಸಮುದಾಯದ ಅಧಿಕಾರಿಯೊಬ್ಬರ ಬಳಿ ದೇಣಿಗೆ ಕೇಳಲು ಹೋದ ಕಾರ್ಯಕರ್ತರ ಗುಂಪಿನಲ್ಲಿ ನಾನೂ ಇರಲೇಬೇಕಾದ ಪರಿಸ್ಥಿತಿ ಎದುರಾಯಿತು. ಬಸವ ಜಯಂತಿ ಕಾರ್ಯಕ್ರಮದ ಸ್ವರೂಪವನ್ನು ವಿವರಿಸಿದ ಕಾರ್ಯಕರ್ತರು ಅವರ ಸಹಕಾರವನ್ನು ಬಯಸಿದರು. ಮರುಕ್ಷಣದಲ್ಲಿಯೇ ಅವರ ಮುಖ ಬಾಡಿಹೋಯಿತು. ತಮ್ಮ ಅನೇಕ ಸಮಸ್ಯೆಗಳನ್ನು ಒಂದೊಂದಾಗಿ ವಿವರಿಸತೊಡಗಿದರು. ಕೊನೆಗೆ ಕಷ್ಟಪಟ್ಟು ನೂರು ರೂಪಾಯಿಗಳನ್ನು ಕೊಟ್ಟು ನಮ್ಮನ್ನು ಸಾಗಹಾಕಿದರು.

ಎಂದೂ ನನ್ನ ಮನೆಗೆ ಬಂದಿರದ ಆ ವ್ಯಕ್ತಿ, ಹೇಗೋ ವಿಳಾಸ ಪತ್ತೆಹಚ್ಚಿ ಒಂದು ದಿನ ನನ್ನ ಮನೆಗೆ ಬಂದಿದ್ದರು. ಇಂದಿನ ರಾಜಕಾರಣ, ಜಾತೀಯತೆ, ವಂಚನೆ, ಮೋಸ, ಭ್ರಷ್ಟಾಚಾರ ಇತ್ಯಾದಿ ಏನೇನೋ ಮಾತನಾಡಿದ ನಂತರ ತಾವು ಬಂದ ಕಾರಣವನ್ನು ತಿಳಿಸಲು ಪ್ರಾರಂಭಿಸಿದರು. ಅದು ಇಷ್ಟೆ: ತಿನ್ನಲು ನಿತ್ಯಹರಿದ್ವರ್ಣದ ಕಾಡಿನಂತಿದ್ದ ಪ್ರಸ್ತುತ ಹುದ್ದೆಯಿಂದ ಅವರನ್ನು ಬೇರೆಡೆಗೆ ವರ್ಗ ಮಾಡುವ ವದಂತಿಗಳು ಹಬ್ಬಿದ್ದವು. ಸಂಬಂಧಪಟ್ಟ ಮಂತ್ರಿಗಳು ನನಗೆ ಆಪ್ತರಾಗಿದ್ದುದನ್ನು ತಿಳಿದಿದ್ದ ಸದರಿ 'ಬಸವ ಭಕ್ತ'ರು ಹೇಗಾದರೂ ಮಾಡಿ ತಮ್ಮನ್ನು ಇರುವ ಜಾಗದಲ್ಲಿಯೇ ಉಳಿಸಲು ಶಿಫಾರಸು ಮಾಡುವಂತೆ ಕೋರಿದರು. ಭ್ರಷ್ಟಾತಿಭ್ರಷ್ಟರೆಂದು ಕುಖ್ಯಾತಿ ಗಳಿಸಿದ್ದ ಈ ವ್ಯಕ್ತಿಯ ಬಗ್ಗೆ ಮಂತ್ರಿಗಳ ಜೊತೆ ಮಾತನಾಡುವುದಾದರೂ ಹೇಗೆ ಎನ್ನುವ ಇಕ್ಕಟ್ಟು ನನ್ನದು. ಸಾಲದ್ದಕ್ಕೆ ಅದು 'ಹಣದ ವಹಿವಾಟು' ದಂಡಿಯಾಗಿಯೇ ನಡೆಯುವ ಇಲಾಖೆ ಬೇರೆ! ಆಗ ನಾನು 'ಇದನ್ನು ಮಾಡುವುದು ಕಷ್ಟವಾಗುತ್ತದೆ' ಎಂದು ನೇರವಾಗಿಯೇ ಹೇಳಿ ಅವರನ್ನು ಗೌರವಯುತವಾಗಿ ಬೀಳ್ಕೊಟ್ಟೆ. ಕೊನೆಗೆ ಐದು ಲಕ್ಷ ರೂಪಾಯಿಗಳ 'ಕಾಣಿಕೆ' ಯನ್ನು ಮಧ್ಯವರ್ತಿಗಳಿಗೆ ನೀಡಿ ಅವರು ಅಲ್ಲಿಯೇ ಉಳಿದುಕೊಂಡ ವಿಷಯ ಅನಂತರ ತಿಳಿದುಬಂತು.

'ಬಸವ ಜಯಂತಿ'ಯಂತಹ ಕಾರ್ಯಕ್ರಮದ ವಿಷಯದಲ್ಲಿ ಕನಿಷ್ಠ ಧಾರಾಳತನವನ್ನು ತೋರಿಸದ ಆ ವ್ಯಕ್ತಿ ತನ್ನ ವರ್ಗಾವಣೆಗಾಗಿ ಐದು ಲಕ್ಷ ರೂ.ಗಳನ್ನು

ತೆರಲು ಸಿದ್ಧವಾದದ್ದನ್ನು ಕೇಳಿ 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ' ಎಂಬ ಅಣ್ಣನವರ ಮಾತು ನೆನಪಿಗೆ ಬಂತು.

ಇದನ್ನು ಏಕೆ ಹೇಳಬೇಕಾಯಿತೆಂದರೆ ದಿನಾಂಕ 20.6.2019 ರಂದು ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿ ಶ್ರೀಮಠದ ಭಕ್ತಾದಿಗಳ ಕಾಣಿಕೆಯಿಂದ ಸುಮಾರು 6 ಕೋಟಿ ರೂ.ಗಳಲ್ಲಿ ನಿರ್ಮಿಸಿದ 'ದಾಸೋಹ ಭವನ'ದ ಪ್ರಾರಂಭೋತ್ಸವ ನಡೆಯಿತು. ಆ ಸಂದರ್ಭದಲ್ಲಿ ಹೆಚ್ಚಿಗೆ ದೇಣಿಗೆ ಕೊಟ್ಟ ಕೆಲವರ ಹೆಸರಗಳನ್ನು ವೇದಿಕೆಯಲ್ಲಿದ್ದವರು ಘೋಷಿಸುತ್ತಾ, 'ಸಗಣಿ ಕಾಯಕದ ಗುರುಸ್ವಾಮಿಗಳು' ಒಂದು ಲಕ್ಷ ರೂಪಾಯಿಗಳ ದೇಣಿಗೆಯನ್ನು ಕೊಟ್ಟಿದ್ದನ್ನು ತಿಳಿಸಿದಾಗ ಇಡೀ ಸಭೆಯಲ್ಲಿ ಚಪ್ಪಾಳೆಯ ಧ್ವನಿ ಮುಗಿಲು ಮುಟ್ಟುವಂತಿತ್ತು; ಶ್ರೀ ಗುರುಸ್ವಾಮಿ ಎನ್ನುವವರು ಕಳೆದ ಅನೇಕ ದಶಕಗಳಿಂದ ಶ್ರೀಮಠದ ಕೊಟ್ಟಿಗೆಯನ್ನು ಶುಚಿ ಮಾಡಿ, ಸಗಣಿಯನ್ನು ಆಚೆಗೆ ಹಾಕುವ ಕೆಲಸ ಮಾಡುತ್ತಿದ್ದಾರೆ. ಸ್ವಲ್ಪ ವಿಶೇಷ ನಡೆನುಡಿಯ ಗುರುಸ್ವಾಮಿಗಳನ್ನು ನೋಡುತ್ತಿದ್ದ ಭಕ್ತರು ತಾವಾಗಿಯೇ ಅವರಿಗೆ ಒಂದಿಷ್ಟು ಕಾಣಿಕೆ ನೀಡುತ್ತಿದ್ದರು. ಆ ಎಲ್ಲ ಹಣವನ್ನು ಜೋಪಾನವಾಗಿ ಇಟ್ಟುಕೊಂಡಿದ್ದ ಈ ಧನ್ಯ ಕಾಯಕಜೀವಿ, ಅಷ್ಟನ್ನೂ ದಾಸೋಹಭವನದ ನಿರ್ಮಾಣಕ್ಕಾಗಿ ದೇಣಿಗೆ ನೀಡಿದ್ದರು. ಇದನ್ನು ಕೇಳಿ 'ನಾನು ಅಷ್ಟು ಕೊಟ್ಟೆ, ಇಷ್ಟು ಕೊಟ್ಟೆ' ಎಂದು ಹೇಳಿಕೊಂಡು ತಿರುಗಾಡುತ್ತಿದ್ದ ನನ್ನಂತಹವರಿಗೆ ನಿಜಕ್ಕೂ ಸಂಕೋಚಪಡುವಂತಾಯಿತು. ಅವರಿಗೆ ಬೇರೆಯವರಂತೆ ಲಕ್ಷಗಟ್ಟಳೆ ಸಂಬಳವಾಗಲಿ, ಪಿಂಚಣಿಯಾಗಲಿ, ಬ್ಯಾಂಕ್ ಬ್ಯಾಲೆನ್ಸ್ ಆಗಲಿ, ಅಥವಾ ದಂಡಿಯಾಗಿ ಹಣ ಸಂಪಾದಿಸುವ ಮಕ್ಕಳಾಗಲಿ ಇಲ್ಲ. ಅಥವಾ, ಅವರ 'ದೇಣಿಗೆ' ಅಕ್ರಮ ಸಂಪತ್ತೂ ಅಲ್ಲ. 'ಕೆರೆಯ ನೀರನು ಕೆರೆಗೆ ಚೆಲ್ಲುವ' ಮಾದರಿಯ ಅವರ ಹೃದಯವೈಶಾಲ್ಯದ ಮುಂದೆ ನಾವೆಲ್ಲರೂ ಕುಬ್ಜರಾಗಿಹೋದೆವು. ಸತ್ಯಶುದ್ಧ ಕಾಯಕದ ಮೂಲಕ ನಡೆಸಬೇಕಾದ ದಾಸೋಹಕ್ಕೆ ಅಲ್ಲಿ ಹೊಸ ವ್ಯಾಖ್ಯಾನ ಲಭಿಸಿತು. ಸುಳ್ಳು ಪ್ರತಿಷ್ಠೆಗಾಗಿ, ಶ್ರೀಮಂತಿಕೆಯ ಪ್ರದರ್ಶನಕ್ಕಾಗಿ, ಅರ್ಥಹೀನ ಖಾಸಗಿ ಸಮಾರಂಭಗಳಿಗಾಗಿ ಲೆಕ್ಕವಿಲ್ಲದಷ್ಟು ಹಣವನ್ನು ವ್ಯಯ ಮಾಡಿ ಸಂಭ್ರಮಿಸುವವರಿಗೆ ಇದೊಂದು ಪಾಠವಾಗಬೇಕು. ಇಷ್ಟಾಗಿಯೂ ಆ ಸಮಾರಂಭದಲ್ಲಿ ಅವರು ಎಲ್ಲಿಯೂ ಕಾಣಲಿಲ್ಲ. ಇಂತಹ 'ಮಹಾಮಹಿಮ'ರನ್ನು ನೋಡುವ ಆಸೆಯಿಂದ 'ಅವರೆಲ್ಲಿ' ಎಂದು ಅಲ್ಲೇ ಇದ್ದ ಕಾರ್ಯಕರ್ತರನ್ನು ಕೇಳಿದೆ. ಸ್ವಾಮಿಗಳು ದನದ ಕೊಟ್ಟಿಗೆಯಲ್ಲಿ ಏನೋ ಮಾಡುತ್ತಿರುತ್ತಾರೆ ಎಂದು ತಿಳಿದು ನನಗೆ ಮತ್ತಷ್ಟು ಅಚ್ಚರಿಯಾಯಿತು. ಅವರು ಕೇವಲ ಕೊಟ್ಟಿಗೆ ಸಗಣಿಯನ್ನು ತೆಗೆದು ಶುದ್ಧಿಮಾಡುವವರಾಗಿರದೆ ನಮ್ಮ ಸಂಪತ್ತಿನ ಸಂಗ್ರಹದ ದುರ್ಮೋಹದ ಸಗಣಿಯನ್ನೂ ಶುದ್ಧಗೊಳಿಸುವವರಾಗಿದ್ದಾರೇನೋ ಎನಿಸಿತು. 'ಸಗಣಿ ಕಾಯಕದ' ಈ ಗುಪ್ತ ಶರಣರಿಗೆ ನನ್ನ ನೂರ್ಮಮನಗಳು.

**ಮಳೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

2015 ರಿಂದ ಪ್ರತಿ ವರ್ಷ ಜೂನ್ 21ರಂದು "ವಿಶ್ವ ಯೋಗ ದಿನ"ವನ್ನಾಗಿ ಆಚರಿಸಲಾಗುತ್ತಿದೆ. 2014 ಡಿಸೆಂಬರ್ 11ರಂದು ವಿಶ್ವಸಂಸ್ಥೆಯಲ್ಲಿ ಭಾರತವು ಮಂಡಿಸಿದ ಪ್ರಸ್ತಾವಕ್ಕೆ ಎಲ್ಲ ನೂರೆಪ್ಪತ್ತೇಳು ಸದಸ್ಯ ರಾಷ್ಟ್ರಗಳೂ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ 'ವಿಶ್ವ ಯೋಗ ದಿನ' ಘೋಷಣೆಯಾದದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವು ಸಾಧಿಸಿದ 'ಸಾಂಸ್ಕೃತಿಕ' ಗೆಲುವಾಗಿದೆ. ಯೋಗವು ಮನೋದೈಹಿಕ ಆರೋಗ್ಯಸಾಧನೆಗೆ ಸಂಬಂಧಿಸಿದ ಒಂದು ಮಾರ್ಗ. ಮನುಷ್ಯನಿರ್ಮಿತವಾದ ಯಾವುದೇ ಧರ್ಮಕ್ಕೂ, ಇದಕ್ಕೂ ಯಾವ ಸಂಬಂಧವೂ ಇಲ್ಲ. ಎಲ್ಲ ಧರ್ಮಗಳ ಭಾವಸಂಬಂಧಿಯಾದ ಅಂಶಗಳನ್ನು ಒಳಗೊಂಡ 'ಜೀವನಧರ್ಮ' ಇದು. ಮೊತ್ತಮೊದಲು ಪತಂಜಲಿ ಮಹರ್ಷಿಗಳು ಈ ಯೋಗಕ್ಕೆ ನಿರ್ದಿಷ್ಟರೂಪ ಕೊಟ್ಟರು. ಆದ್ದರಿಂದ ಇದು 'ಪಾತಂಜಲ ಯೋಗ' ಎಂದು ಕರೆಯಲ್ಪಟ್ಟಿತು. ಈ ಶಾಸ್ತ್ರದ ಮೂಲಕರ್ತೃ ಹಿರಣ್ಯಗರ್ಭ ಎಂದು ಋಗ್ವೇದ ಉಲ್ಲೇಖಿಸುತ್ತದೆ. ದೈವಸಾಕ್ಷಾತ್ಕಾರ ಮಾಡಿಕೊಳ್ಳಲು ಯಜ್ಞಯಾಗಾದಿಗಳ ಬದಲಾಗಿ ಅನೇಕರು ಯೋಗವನ್ನು ಆಶ್ರಯಿಸುತ್ತಿದ್ದರು ಎನ್ನುವ ಮಾತೂ ಅಲ್ಲಿದೆ. ಅನಂತರ ಬಂದ ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ವಿಷ್ಣುಪುರಾಣ ಮುಂತಾದ ಕೃತಿಗಳು ಈ ಯೋಗಶಾಸ್ತ್ರದ ಉಪಯುಕ್ತತೆಯನ್ನು ತುಂಬ ಸಮರ್ಥವಾಗಿ ಪ್ರತಿಪಾದಿಸಿದವು. ಭಗವದ್ಗೀತೆಯಲ್ಲಿ ಯೋಗವನ್ನು ಅದರ ಪೂರ್ಣ ರೂಪದಲ್ಲಿ ವಿವರಿಸಲಾಗಿದೆ.

'ಯೋಗಃ ಚಿತ್ತವೃತ್ತಿನಿರೋಧಃ' ಎಂದು ಪತಂಜಲಿ ಮಹರ್ಷಿಗಳು ಹೇಳಿದ್ದಾರೆ. ಮನುಷ್ಯನ ಪರಿಪೂರ್ಣ ವ್ಯಕ್ತಿತ್ವ ಎಂದರೆ, ದೇಹ ಮತ್ತು ಮನಸ್ಸುಗಳ ಸಮನ್ವಯದ ಹದವಾದ ಬೆಸುಗೆಯೇ ಆಗಿದೆ. ಆದರೆ ಅದು ಅಷ್ಟು ಸುಲಭವಾಗಿ ಸಾಧಿತವಾಗುವ ಅಂಶವಲ್ಲ. ಪ್ರಶಾಂತವಾದ ಕೊಳದ ನೀರಿಗೆ ಒಂದು ಸಣ್ಣ ಕಲ್ಲನ್ನು ಹಾಕಿದಾಗ ಅದು ಹೇಗೆ ನೀರಿನ ಸಮಸ್ಥಿತಿಯನ್ನು ಕೆಡಿಸಿ, ಅನೇಕ ತರಂಗಗಳನ್ನು ಎಬ್ಬಿಸುತ್ತದೆಯೋ ಹಾಗೆ, ಮನಸ್ಸಿನೊಳಗೆ ಹೊಕ್ಕ ಯಾವುದೇ ಒಂದು ಸಣ್ಣ ಸಂಗತಿ ಮನಸ್ಸೆಂಬ ಸರೋವರವನ್ನು ಬಗ್ಗಡಗೊಳಿಸಿಬಿಡುತ್ತದೆ. ಆಗ ದೇಹದ ಕ್ರಿಯೆಗಳು ಸಮತೋಲನ ಕಳೆದುಕೊಂಡು, ವ್ಯಕ್ತಿಯ ಚಟುವಟಿಕೆಗಳು ಅಸ್ತವ್ಯಸ್ತವಾಗುತ್ತವೆ. ಇಂತಹ ಸ್ಥಿತಿಯಿಂದ

ಹೊರಬಂದು 'ಸಹಜ ಜೀವನ ಮಾರ್ಗ'ದಲ್ಲಿ ಸಾಗಲು ಯೋಗ ಸಹಕಾರಿಯಾಗುತ್ತದೆ. ಯೋಗವೆಂದರೆ ಕೇವಲ ಪ್ರಾಣಾಯಾಮ ಮತ್ತು ಆಸನಗಳು ಮಾತ್ರವಲ್ಲ. 'ಪ್ರಾಣಾಯಾಮ' ದೇಹದ ಸೂಕ್ಷ್ಮಾತಿಸೂಕ್ಷ್ಮ ಅಂಗಗಳಿಗೆ ಪ್ರಾಣವಾಯುವನ್ನು ತಲುಪಿಸುವ ತಂತ್ರವಾದರೆ, ಆಸನಗಳು ಅಂಗಾಂಗಗಳ ಬಿಗಿಕಟ್ಟು ಸಡಿಲಗೊಂಡು ಬಾಧೆಗಳಿಂದ ಮುಕ್ತವಾಗುವ ತಂತ್ರ. ಈ ಎರಡೂ ಪ್ರಕ್ರಿಯೆಗಳು ಯೋಗದ ಪ್ರಾಥಮಿಕ ಅಂಶಗಳು ಮಾತ್ರ. ಯೋಗದ ಪರಿಕಲ್ಪನೆ ಪರಿಪೂರ್ಣವಾಗಬೇಕಾದರೆ ಯಮ, ನಿಯಮ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಯೋಗದ ಅಷ್ಟಾಂಗಗಳು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಕೊನೆಯದಾದ ಆನಂದಮಯಕೋಶಗಳೊಡನೆ ಪರಸ್ಪರ ಅಂತಸ್ಸಂಬಂಧವನ್ನು ಹೊಂದಬೇಕು. ಮನೋದೈಹಿಕ ಖಾಯಿಲೆಗಳಿಗೆ ಉಗಮಸ್ಥಾನವೇ ವಿಜ್ಞಾನಮಯ ಹಾಗೂ ಮನೋಮಯಕೋಶ. ಅನೇಕ ಒತ್ತಡಗಳು, ಅರಿಷಡ್ವರ್ಗಗಳ ಉಪಟಳ ಇವೆಲ್ಲವೂ ಇಲ್ಲಿ ಮೊದಲಿಗೆ ವ್ಯಕ್ತವಾಗಿ ಅನಂತರ ಇತರ ಕೋಶಗಳ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಇವೆಲ್ಲವನ್ನೂ ಸಮನ್ವಯಗೊಳಿಸಿ ಸಮಸ್ಥಿತಿಗೆ ತರಬೇಕು. ಅಂತರಂಗದ ಚಿಂತನೆ, ಬಹಿರಂಗದ ಕ್ರಿಯೆಗಳು ಆತ್ಮಸಾಕ್ಷಿಗೆ ಅನುಗುಣವಾಗಿ ಇಲ್ಲದಿದ್ದರೆ, ಕೇವಲ ಯಮನಿಯಮಗಳು ನಿಷ್ಫಲವಾಗುತ್ತವೆ. ಯೋಗದಿಂದ ನಿಜವಾಗಿ ದಕ್ಕುವ ಫಲವೇ 'ಶಿವಯೋಗ'.

ಶಿವಯೋಗವಾದಲ್ಲಿ ಸಂಸಾರಯೋಗ ಮಾಬುದಯ್ಯಾ
ಸಂಸಾರಯೋಗವಾದಲ್ಲಿ ಭಕ್ತಾನುಗ್ರಹಯೋಗವಯ್ಯಾ
ಭಕ್ತಾನುಗ್ರಹಯೋಗವಾದಲ್ಲಿ ಲಿಂಗಾನುಗ್ರಹಯೋಗವಯ್ಯಾ
ಲಿಂಗಾನುಗ್ರಹಯೋಗವಾದಲ್ಲಿ ಜಂಗಮಾನುಗ್ರಹಯೋಗವಯ್ಯಾ
ಜಂಗಮಾನುಗ್ರಹಯೋಗವಾದಲ್ಲಿ ಪ್ರಸಾದಾನುಗ್ರಹಯೋಗವಯ್ಯಾ
ಪ್ರಸಾದಾನುಗ್ರಹಯೋಗವಾದಲ್ಲಿ ತ್ರಿವಿಧ ಸನುಮತಯೋಗವಯ್ಯಾ
ತ್ರಿವಿಧ ಸನುಮತಯೋಗವಾದಲ್ಲಿ ಮನಮಗ್ನಯೋಗವಯ್ಯಾ
ಮನಮಗ್ನಯೋಗವಾದಲ್ಲಿ ಕೂಡಲಚೆನ್ನಸಂಗನಲ್ಲಿ ಲಿಂಗಸಂಯೋಗವಯ್ಯಾ

- ಚನ್ನಬಸವಣ್ಣನವರು

ಸಂಸಾರದಲ್ಲಿದ್ದೂ ನಿಸ್ಸಂಸಾರಿಯಾಗುವ, ಕಾಯವಿದ್ದೂ ನಿಃಕಾಯದ ಪ್ರಜ್ಞೆ ಬೆಳೆಸಿಕೊಂಡು 'ಬ್ರಹ್ಮ'ದಲ್ಲಿ ಬೆರೆತು ಬಯಲಾಗುವ ಪ್ರಕ್ರಿಯೆಯೇ ನಿಜವಾದ ಶಿವಯೋಗ. ಇಂದು ಜಗತ್ತಿನಾದ್ಯಂತ ಪ್ರಸರಿಸುತ್ತಿರುವ 'ಯೋಗ'ಪ್ರಜ್ಞೆ-'ಶಿವಯೋಗ'ಪ್ರಜ್ಞೆ ಜಾಗೃತವಾಗಬೇಕಾಗಿದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಆಸೆಯೆಂಬುದು ಭವದ ಬೀಜ....

ಪ್ರೊ. ಶಿವಕುಮಾರ ಎಸ್. ಬಳಿಗಾರ

**ಪೀಠಿಕೆ**

ಶರಣರ ವಿಚಾರಗಳು ಸಂಪೂರ್ಣ ಜೀವನ ನಿಷ್ಠವಾಗಿವೆ. ಅವು ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಗುರಿಯ ಸಮನ್ವಯ ಸೂತ್ರವನ್ನೊಳಗೊಂಡಿವೆ. ಯಾವುದೇ ಪಕ್ಷಪಾತ ದೃಷ್ಟಿಯಿಲ್ಲದೆ ಸಕಲ ಜೀವಿಗಳ ಹಿತಕ್ಕಾಗಿ ರೂಪಿಸಿದ ನೈತಿಕ ಮೌಲ್ಯಗಳಾಗಿವೆ. ವೈಚಾರಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಸತ್ಯ ದರ್ಶನ ಮಾಡಿಸಿ ಮಾನವನಿಗೆ ಶಾಶ್ವತ ಸುಖ ಪಡೆಯಲು ಪಥದರ್ಶಿಗಳಾಗಿವೆ. ಇಂದು ಹಲವು 'ಇಸ್ಲಾಂ' ಪಂಥಗಳ ವಿಚಾರಗಳ ಪ್ರಭಾವದಿಂದ ಮಾನವನು ಸಂದಿಗ್ಧತೆಗೊಳಗಾಗಿದ್ದಾನೆ. ಎಲ್ಲಿ ನೋಡಿದರೂ ದುಡ್ಡಿಗಾಗಿ ಜ್ಞಾನ/ಮೋಕ್ಷದ ಮಾತನಾಡುತ್ತಾ, ಜನರನ್ನು ಸುಲಿಗೆ ಮಾಡುವುದು ಕಂಡುಬರುತ್ತದೆ. ಆಧುನಿಕ ಪ್ರಪಂಚದ ಎಲ್ಲಾ ಆಕರ್ಷಣೆಗಳಿಂದ ವಿಷಯಲೋಲುಪತೆ ಹೆಚ್ಚಾಗಿ ಮಾನವ ಆಸೆಯೆಂಬ ಮಾಯಾಮೃಗದ ಬೆನ್ನುಹತ್ತಿ ಯಾವುದರಲ್ಲೂ ಶಾಶ್ವತ ಸುಖ ಸಿಗದೇ ಅತೃಪ್ತಿ, ಅಶಾಂತಿಯಲ್ಲಿ ತೊಳಲಾಡುವಂತಾಗಿದೆ. ಆದ್ದರಿಂದ ಬಸವಾದಿ ಶರಣರ ವಿಚಾರಗಳು ಆಧುನಿಕ ಮಾನವನಿಗೆ ಸರಿ ದಾರಿ ತೋರಲು ಅತ್ಯಾವಶ್ಯಕವಾಗಿದೆ.

**ವಿಷಯ : ಆಸೆ/ಬಯಕೆ/ಬೇಡಿಕೆ**

ಪ್ರಕೃತಿಯ ಶಿಶುವಾದ ಮಾನವನಿಗೆ ನಿಸರ್ಗದತ್ತವಾದ ಕೆಲವು ಬಯಕೆಗಳಿರುವುದು ಸಹಜ. ಇಂದ್ರಿಯಗಳಿಚ್ಛೆ ಪೂರೈಸಲು ಹಲವು ವಸ್ತುಗಳನ್ನು ಪಡೆಯಬೇಕೆಂಬ ಹಂಬಲ ಅನಿವಾರ್ಯವಾದದ್ದು.

ಮಾನವನ ಬಯಕೆಗಳು ಅನಂತವಾಗಿವೆ. ಬಯಕೆಯನ್ನು ಪೂರೈಸಲು ಲಭ್ಯವಿರುವ ಸಂಪನ್ಮೂಲಗಳು ನಿಯಮಿತವಾಗಿವೆ. ಆದ್ದರಿಂದ ಬಯಕೆಗಳಲ್ಲಿ ಆದ್ಯತೆ ಪಡೆಯುವ ಪೈಪೋಟಿ ಇದೆ. ತನ್ನ ಅನಿಯಮಿತ ಬಯಕೆಗಳನ್ನೆಲ್ಲ ಮಾನವ ಏಕಕಾಲಕ್ಕೆ ತೃಪ್ತಿಪಡಿಸುವುದು ಸಾಧ್ಯವಿಲ್ಲ. ಒಂದು ನಿರ್ದಿಷ್ಟ ಸಮಯದಲ್ಲಿ ಅಗತ್ಯ ಬಯಕೆಗಳನ್ನು ಈಡೇರಿಸಬಹುದು. ಆಸೆಯನ್ನು ಪೂರೈಸುವ ವಸ್ತು ಕೊಳ್ಳಲು ಹಣ ಮತ್ತು ಅದನ್ನು ಕೊಳ್ಳುವ ಮನಸ್ಸು ಮಾಡಿದಾಗ ಅದು ಬೇಡಿಕೆಯಾಗುತ್ತದೆ. ಒಂದು ಆಸೆ/ಬಯಕೆ

ಪೂರೈಸಲು ಹಲವು ಪರ್ಯಾಯ ಸಾಧನಗಳಿರುತ್ತವೆ. ಕೆಲವು ಬಯಕೆಗಳು ಮರುಕಳಿಸುತ್ತವೆ. ವಸ್ತುವನ್ನು ಸತತವಾಗಿ ಬಳಸುವ ಅಭ್ಯಾಸ ಮಾಡಿಕೊಂಡರೆ ಅದು ಚಟವಾಗಿ ಪರಿಣಮಿಸುತ್ತದೆ. ಚಟ ವ್ಯಸನವಾಗಿ ವ್ಯಕ್ತಿ ಮನೋರೋಗಿಯಾಗುತ್ತಾನೆ. ಆಧುನಿಕ ಸಂಪರ್ಕ ಮತ್ತು ಪ್ರಚಾರ ಮಾಧ್ಯಮಗಳಿಂದ ಆಸೆಗಳು ದಿನೇದಿನೇ ಹೆಚ್ಚಾಗುತ್ತವೆ. ಈ ಹಂಬಲ ವ್ಯಕ್ತಿಯಿಂದ ವ್ಯಕ್ತಿಗೆ, ಸ್ಥಳದಿಂದ ಸ್ಥಳಕ್ಕೆ ಮತ್ತು ಸಮಯದಿಂದ ಸಮಯಕ್ಕೆ ಬದಲಾಗುತ್ತದೆ. ಒಬ್ಬ ವ್ಯಕ್ತಿಗೆ ತನ್ನೆಲ್ಲ ಬಯಕೆಗಳ ಪಟ್ಟಿ ಮಾಡಲು ತಿಳಿಸಿದರೆ, ಅದು ಅವನು ಸಾಯುವವರೆಗೆ ಪೂರ್ಣವಾಗುವುದಿಲ್ಲ.

**ಮಹತ್ವ**

ಮಾನವನ ಎಲ್ಲಾ ಪ್ರಯತ್ನಗಳಿಗೆ ಕಾರಣ 'ಆಸೆ'. ಅದು ಮಾನವನ ಕ್ರಿಯಾಶೀಲತೆಗೆ ಸಂಜೀವಿನಿ. ಬದುಕಿನಲ್ಲಿ ನಿರ್ದಿಷ್ಟ ಗುರಿ ಮತ್ತು ಆಸೆಯಿಲ್ಲದಾಗ ವ್ಯಕ್ತಿ ಜಡಜೀವಿಯಾಗುತ್ತಾನೆ. ಆಶಾಜೀವಿ ಕಾರ್ಯತತ್ಪರತೆಯಿಂದ ಸಮಾಜದ ಸಮುನ್ನತಿಗೆ ಕಾರಣನಾಗುತ್ತಾನೆ. ಅವನು ಸಮಾಜದಲ್ಲಿ ಸ್ವಾವಲಂಬಿಯಾಗಿ ಎಲ್ಲರ ಗೌರವಕ್ಕೂ ಪಾತ್ರನಾಗುತ್ತಾನೆ. ಜಡಜೀವಿ ಸಮಾಜಕ್ಕೆ ಹೊರೆಯಾಗಿ ಬದುಕುತ್ತಾನೆ. ಅವನಿಗೆ ಯಾರೂ ಮನ್ನಣೆ ನೀಡುವುದಿಲ್ಲ. ಆದ್ದರಿಂದ ಆಸೆ ಮಾನವನ ಎಲ್ಲಾ ಸಾಧನೆಗೆ ಪ್ರೇರಕ ಮತ್ತು ಪೂರಕವಾಗಿದೆ, ಚಲನಶೀಲವಾದದ್ದು ಬೆಳೆಯುತ್ತದೆ. ಸ್ಥಗಿತಗೊಂಡದ್ದು ಕೊಳೆಯುತ್ತದೆ. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಮನದ ಚೇಷ್ಟೆಗೆ ಆಸೆಯೇ ಬೀಜ.

**ಸ್ವರೂಪ/ವೈವಿಧ್ಯತೆ**

ಮಾನವನ ಬಯಕೆಗಳು ವಿವಿಧ ಸ್ವರೂಪದಲ್ಲಿ ಮಾನವನನ್ನು ಕಾಡುತ್ತವೆ. 'ಆಸೆ' ಅರಿಷಡ್ವರ್ಗವಾಗಿ ತಳೆಯುವ ರೂಪವನ್ನು ಗಮನಿಸಬಹುದು :

ಆಸೆ ನಿಸರ್ಗಸಹಜವಾಗಿ ಸ್ತ್ರೀ ಪುರುಷರಲ್ಲಿ ಆಕರ್ಷಣೆಯಾಗಿ ಕಾಮವಾಗುತ್ತದೆ
ಆಸೆ ಈಡೇರಿಸುವ ಪ್ರಯತ್ನದಲ್ಲಿ ವ್ಯತ್ಯಯವಾದಾಗ ಕ್ರೋಧವಾಗುತ್ತದೆ
ಆಸೆ ಧನಕನಕ ಪ್ರಾಪ್ತಿಯ ಒತ್ತಡದಿಂದ ಲೋಭವಾಗುತ್ತದೆ
ಆಸೆ ಸತಿ ಸುತ ಮಿತ್ರ ಕಳತ್ರ ಸಂಬಂಧದಲ್ಲಿ ಮೋಹವಾಗುತ್ತದೆ
ಆಸೆ ಅಂದುಕೊಂಡದ್ದೆಲ್ಲ ದೊರೆತಾಗ ಅಹಂಭಾವದಿಂದ ಮದವಾಗುತ್ತದೆ
ಆಸೆ ತನ್ನದು ಈಡೇರದೆ ಬೇರೆಯವರಿಗೆ ದೊರೆತಾಗ, ಸಹಿಸದೇ ಮತ್ಸರವಾಗುತ್ತದೆ
ಆಸೆ ತನ್ನ ಸ್ವಾರ್ಥಕ್ಕೆ ಬೇರೆಯವರನ್ನು ಬಲಿಕೊಡುವಲ್ಲಿ ಆಮಿಷವಾಗುತ್ತದೆ
ಆಸೆ ಅಧ್ಯಾತ್ಮಸಿದ್ಧಿಯ ಪ್ರಯತ್ನದಲ್ಲಿ ಭಕ್ತಿಸ್ವರೂಪ ಪಡೆಯುತ್ತದೆ.

**ಶರಣರ ದೃಷ್ಟಿಕೋನ**

ಮಾನವನ ಪ್ರಾಪಂಚಿಕ ಮತ್ತು ಪರಮಾರ್ಥ ಸಾಧನೆಗೆ ಆಸೆಯೇ ಕಾರಣ.

ಪ್ರಾಪಂಚಿಕ ಸಾಧನೆಯಲ್ಲಿ ತೊಡಗಿದ ಮಾನವನ ಆಸೆಯ ಸ್ವರೂಪ ಪರಮಾರ್ಥ ಸಾಧನೆಯ ಆಸೆಯ ಸ್ವರೂಪಕ್ಕೆ ಭಿನ್ನವಾಗಿರುತ್ತದೆ. ಲೌಕಿಕ ಬದುಕಿನಲ್ಲಿ ಸುಖಮಯ ನಾಗರಿಕ ಜೀವನಕ್ಕಾಗಿ ಮಾನವನು ಅವಶ್ಯಕ ವಸ್ತುಗಳನ್ನು ಆಯ್ದು ಪಡೆಯಲೇಬೇಕು. ಆದರೆ ಮರವೆಯಿಂದ ಇದು ಬಂಧನಕಾರಿಯಾಗಬಾರದು. ತನ್ನ ಆತ್ಮತೃಪ್ತಿಗಾಗಿ ಅರಿವಿನಿಂದ ಆಸೆಯನ್ನು ದೇವರೊಲುಮೆ ಪಡೆಯಲು ಭಕ್ತಿಯ ಏಣಿಯಾಗಿಸಬಹುದು. ಇದಕ್ಕೆ ಶರಣರ ಜೀವನವೇ ನಿದರ್ಶನ. ಅದಕ್ಕಾಗಿಯೇ ಬಸವೇಶ್ವರರು ಕೂಡಲಸಂಗನಲ್ಲಿ ಬಿನ್ನವಿಸಿಕೊಂಡಿದ್ದಾರೆ.

> ಆಸೆ, ಆಮಿಷ, ತಾಮಸ, ಹುಸಿ ವಿಷಯ
> ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯ,
> ಇವನೆನ್ನ ನಾಲಿಗೆಯ ಮೇಲಿನಿಂದತ್ತ ತೆಗೆದು ಕಳೆಯಯ್ಯಾ
> ಅದೇಕೆಂದಡೆ ನಿಮ್ಮತ್ತಲೆನ್ನಬರಲೀಯವು,
> ಇದು ಕಾರಣ ಇವೆಲ್ಲವ ಕಳೆದು
> ಎನ್ನ ಪಂಚೈವರ ಭಕ್ತರ ಮಾಡು ಕೂಡಲಸಂಗಮದೇವಾ

ಶರಣರ ವಚನಗಳಲ್ಲಿ ಆಸೆಯ ಮೂಲ ಕಾಮ. ಸ್ವರೂಪ, ವೈವಿಧ್ಯತೆ, ಭಕ್ತಿ, ಮಾರ್ಗದಲ್ಲಿ ಮಹತ್ವ ಮತ್ತು ಭವಬಂಧನವಾಗುವ ಆಸೆ ಲಿಂಗಾಂಗಸಾಮರಸ್ಯಕ್ಕೆ ಅನುವಾಗುವ ಪರಿಯನ್ನು ಬಹಳ ಸ್ಪಷ್ಟ ಮತ್ತು ಸುಂದರವಾಗಿ ಅಭಿವ್ಯಕ್ತಿಸಲಾಗಿದೆ.

**ಉಗಮ**

ಪಂಚಭೂತಗಳಿಂದಾದ ಮಾನವನ ಒಡಲು ಇಂದ್ರಿಯಗಳಿಚ್ಛೆಗೆ ಮಣಿದು ಆಸೆಗಳ ಕಡಲಾಗುತ್ತದೆ. ಅಲ್ಲಮಪ್ರಭುಗಳ ವಚನ ಆಸೆಗೆ ಮೂಲ ಕಾರಣವನ್ನು ಸೊಗಸಾಗಿ ನಿವೇದಿಸಿದೆ.

> ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು
> ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು
> ಭೃಂಗನು ಗಂಧೇಂದ್ರಿಯದಿಂದ ಬಂದನವಡೆದಳಿಯಿತ್ತು
> ಕುರಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು
> ಮತ್ಸ್ಯನು ರಸನೇಂದ್ರಿಯದಿಂದ ಬಂಧನವಡೆದಳಿಯಿತ್ತು
> ಇಂತೀ ಒಂದು ಇಂದ್ರಿಯೋದ್ರೇಕದಿಂದ
> ಒಂದೊಂದು ಪ್ರಾಣಿಯ ಪ್ರಳಯವಾಯಿತು
> ಪಂಚೇಂದ್ರಿಯಂಗಳ ಒಂದು ಘಟದಲ್ಲಿ ತಾಳಿದ
> ಮನುಷ್ಯ ಪ್ರಾಣಿಗಳಿಗೆ
> ಮರವೆ ಎಡೆಗೊಂಡು, ದೇಹಭ್ರಾಂತು ಮುಸುಕಿ
> ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಾ! ಗುಹೇಶ್ವರ

ಮನದ ಮುಂದಣ ಆಸೆಯೇ ಮಾಯೆಯಿಂದ ಅಲ್ಲಮಪ್ರಭುಗಳು ಇಂದ್ರಿಯ ಚಾಪಲ್ಯವೇ ಆಸೆಗೆ ಮೂಲ ಕಾರಣವೆಂದರುಹಿದ್ದಾರೆ. ಪ್ರಾಣಿಗಳಿಗೂ ಮಾನವನಿಗೂ ಇರುವ ವ್ಯತ್ಯಾಸವನ್ನು ತಿಳಿಸಿದ್ದಾರೆ. ಪಂಚೇಂದ್ರಿಯಗಳು ಒಟ್ಟಾಗಿ ದೇಹಭ್ರಾಂತಿ ಕವಿದು ಮಾನವ ಮಾಯೆಗೆ ತುತ್ತಾಗುವುದು ಚೋದ್ಯವೇ ? ಎಂದು ಗುಹೇಶ್ವರಂಗೇ ಪ್ರಶ್ನಿಸಿ? ಉತ್ತರಿಸಿದ್ದಾರೆ !

ಶರಣ ಜೇಡ ದಾಸಿಮಯ್ಯನವರು ನಿರಾಕಾರ ದೇವರಿಗೆ ಒಡಲಿಚ್ಛೆಯಿಂದ, ಕಳವಳಗೊಳ್ಳುವ, ಮಾನವನ ಮನಸ್ಥಿತಿಯನ್ನು ನಿವೇದಿಸಿ, ಒಮ್ಮೆ ಒಡಲು ಧರಿಸಿ ನೋಡು ? ಎಂಬ ಸವಾಲು ಹಾಕುತ್ತಾರೆ.

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ನೀನನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

ಮಾನವನ ಆಸೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಅದಕ್ಕೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಪರಿಸರವೂ ಕಾರಣ. ಸಿದ್ಧರಾಮೇಶ್ವರರು ಈ ವಚನದಲ್ಲಿ ವಿವಿಧ ವ್ಯಕ್ತಿಗಳ ಬಯಕೆಗಳ ವೈವಿಧ್ಯತೆ ಹೀಗೆ ದರ್ಶಿಸಿದ್ದಾರೆ:

ದರಿದ್ರಂಗೆ ಧನದಾಸೆ, ಶೂರಂಗೆ ಹಣದಾಸೆ,
ಕಾಮಿಗೆ ಸ್ತ್ರೀಯಾಸೆ, ನೀಚಂಗೆ ಕಲಹದಾಸೆ,
ಪಂಡಿತಂಗೆ ಸಭೆಯಾಸೆ, ಕೋಗಿಲೆಗೆ ವಸಂತದಾಸೆ,
ಪತಿವ್ರತೆಗೆ ಗಂಡನು ಮುನಿದಿಹನು ಬಹನೆಂಬಾಸೆ
ಎನಗೆ ಶ್ರೀಗುರು ಚೆನ್ನಬಸವ ಸ್ವಾಮಿಗಳ ಪಾದೋದಕದಾಸೆ
ಕಪಿಲಸಿದ್ಧ ಮಲ್ಲಿಕಾರ್ಜುನಾ

ಭವಿ ಮತ್ತು ಭಕ್ತರ ಆಶೆಯ ಸ್ವರೂಪವನ್ನು ಇಲ್ಲಿ ಕಾಣಬಹುದು. ಅದೇ ರೀತಿ ಬಯಕೆಗಳು ಅನಂತವಾಗಿವೆ. ಒಂದು ಆಸೆ ಪೂರೈಸಿದಾಗ ಇನ್ನೊಂದು ಆಸೆ ಉದ್ಭವಿಸುತ್ತದೆ. ಪ್ರಪಂಚದಲ್ಲಿ ಆಸೆಗೆ ಕೊನೆಯಿಲ್ಲ. ಭವಪಾಶದಲ್ಲಿ ಸಿಲುಕಿದ ಮಾನವನ ಆಸೆ ಚಿಂತೆಯಾಗಿ ಕಾಡುವ ಪರಿಯ ಅಭಿವ್ಯಕ್ತಿ ಶರಣ ಅಂಬಿಗರ ಚೌಡಯ್ಯನವರ ವಚನದಲ್ಲಿದೆ:

ಬಡತನಕ್ಕೆ ಉಂಬುವ ಚಿಂತೆ
ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ
ಇಡಲಾದರೆ ಹೆಂಡಿರ ಚಿಂತೆ

ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ
ಕೇಡಾದರೆ ಮರಣದ ಚಿಂತೆ
ಇಂತೀ ಹಲವು ಚಿಂತೆಯಲ್ಲಿಪ್ಪವರ ಕಂಡೆನು
ಶಿವನ ಚಿಂತೆಯಲ್ಲಿದ್ದವರನೊಬ್ಬರನೂ ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಒಂದು ಬಯಕೆಯನ್ನು ಈಡೇರಿಸಲೇಬೇಕೆಂಬ ಅದಮ್ಯ ತುಡಿತ ವ್ಯಸನವಾಗುತ್ತದೆ, ಚಿನ್ಮಯಜ್ಞಾನಿ ಚೆನ್ನಬಸವಣ್ಣನವರು ಮಾನವನಿಗಿರುವ ಸಪ್ತ ವ್ಯಸನಗಳನ್ನು ಪರಿಚಯಿಸಿ, ಭವಬಂಧನಕ್ಕೀಡುಮಾಡುವ ಈ ವ್ಯಸನಗಳನ್ನು ತ್ಯಜಿಸಿ 'ಲಿಂಗ ವ್ಯಸನಿ'ಯಾಗಿ ಬಂಧಮುಕ್ತರಾಗಲು ಮಾರ್ಗದರ್ಶನ ನೀಡಿದ್ದಾರೆ:

ತನು ವ್ಯಸನ, ಮನ ವ್ಯಸನ, ಧನ ವ್ಯಸನ, ರಾಜ್ಯ ವ್ಯಸನ, ವಿಶ್ವ ವ್ಯಸನ,
ಉತ್ಸಾಹ ವ್ಯಸನ, ಸೇವಕ ವ್ಯಸನ ಇಂತೀ ಸಪ್ತ ವ್ಯಸನಂಗಳ ವಿವರ.
ತನು ವ್ಯಸನ ವಸ್ತ್ರಾಭರಣ, ವೀಳೆಯ, ಲೇಪನಾದಿಗಳ ಬಯಸುವುದು
ಮನ ವ್ಯಸನ ಹುಸಿ, ಕಳವು, ಪರದಾರವ ಬಯಸುವುದು,
ಧನ ವ್ಯಸನ ಆನೆ, ಕುದುರೆ ಸೇನೆ ಬಯಸುವುದು
ಉತ್ಸಾಹ ವ್ಯಸನ ಪುತ್ರ, ಮಿತ್ರ, ಕಳತ್ರಾದಿಗಳ ಬಯಸುವುದು
ಸೇವಕ ವ್ಯಸನ ಗಳಿಸಲಾರೆ, ಗೆಯ್ಯಲಾರೆ, ಗೆತ್ತಲಾರೆ,
ಕೊಡಲಾರೆ, ಕೊಳಲಾರೆ ಎನ್ನತಿಪ್ಪುದು,
ಇಂತೀ ಸಪ್ತ ವ್ಯಸನಗಳ ಬಿಟ್ಟು ಲಿಂಗವ್ಯಸನಿಯಾಗಿರಬಲ್ಲಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಆತನೇ ಪ್ರಾಣಲಿಂಗಸಂಬಂಧಿ.
ಆಸೆಯೇ ದಾಸತ್ವ, ನಿರಾಸೆಯೇ ಈಶತ್ವ

ಲೌಕಿಕ ಬದುಕಿನಲ್ಲಿ ಆಸೆ ಮಾನವನನ್ನು ಭವಚಕ್ರಕ್ಕೆ ಸಿಲುಕಿಸುತ್ತದೆ. ಇಂದ್ರಿಯ ಚಪಲತೆಯಿಂದ ಸುಖ ಪಡೆಯುವ ಪ್ರಯತ್ನದಲ್ಲಿ ಮಾನವ ದುಃಖ ಪಡೆವುದೇ ಜಾಸ್ತಿ. ಆಸೆಗಳು ಅನಿಯಂತ್ರಿತವಾಗಿ ಹೆಚ್ಚುತ್ತಾ ಹೋಗುವುವು. ಅವುಗಳನ್ನು ತೃಪ್ತಿಪಡಿಸಲು ಯೋಚಿಸುತ್ತಾ ಮಾನವ ತನ್ನಂತರಂಗದಲ್ಲಿರುವ ಚಿರಶಾಂತಿಯ ನೆಲೆಯನ್ನೇ ಮರೆತು ಬಿಡುತ್ತಾನೆ. ಬೌದ್ಧಿಕ ವಸ್ತುಗಳಿಂದ ಸಿಗುವ ಸುಖ ಕ್ಷಣಿಕವಾದದ್ದು. ಮತ್ತದೇ ಬಯಕೆಗಳು ಮರುಕಳಿಸುತ್ತದೆ. ಸಂಸಾರವೆಂಬ ಹೆಣ ಬಿದ್ದರೆ ತಿನ್ನಲು ಬಂದ ನಾಯಿಯ ಜಗಳವ ನೋಡಿರೇ ಎಂದು ಶರಣರು ಪಂಚೇಂದ್ರಿಯಗಳಿಚ್ಛೆಯ ಪರಿ ತಿಳಿಸಿದ್ದಾರೆ. ಅದಕ್ಕಾಗಿಯೇ ಶರಣರು ಲೌಕಿಕಪ್ರಪಂಚದ ಕ್ಷಣಭಂಗುರತೆಯನ್ನು ದರ್ಶಿಸಿ ಲಿಂಗದೊಲುಮೆಗೆ ಭಕ್ತಿ ಪಥವಿಡಿದು ಆಶೆಗೆ ಮಿತಿ ಹಾಕಿ ಬಯಕೆಗಳನ್ನು ಉದಾತ್ತೀಕರಿಸಲು ತಿಳಿಸಿದ್ದಾರೆ. ಕಾಯಕ+ದಾಸೋಹ ತತ್ವಗಳು ಈ ದಿಸೆಯಲ್ಲಿ ಮಹತ್ವ

ಪಡೆಯುತ್ತವೆ. ಶರಣೆ ಆಯ್ದಕ್ಕಿ ಲಕ್ಕಮ್ಮ ತಮ್ಮ ಪತಿ ಅವಶ್ಯಕತೆಗಿಂತ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದಾಗ ನುಡಿದ ವಚನ ಶರಣರ ನಿಲುವಿಗೆ ನಿದರ್ಶನವಾಗಿದೆ.

ಆಸೆಯು ಎಂಬುದು ಅರಸಂಗಲ್ಲದೆ ಶಿವಭಕ್ತರಿಗೆ ಉಂಟೇ ಅಯ್ಯಾ
ರೋಷವೆಂಬುದು ಯಮದೂತಂಗಲ್ಲದೆ ಅಜಾತಗೆ ಉಂಟೇ ಅಯ್ಯಾ
ಈಸಕ್ಕಿ ಆಸೆ ನಿಮಗೇಕೆ ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಅದು ದೂರ.

ಆಧುನಿಕ ಮಾನವ ವಿವಿಧ ಮಾಧ್ಯಮಗಳ ಪ್ರಭಾವದಿಂದ ಹೆಚ್ಚು ಹೆಚ್ಚು ವಸ್ತುಗಳನ್ನು ಪಡೆಯಲು ಹವಣಿಸುತ್ತಾನೆ. ಶರಣ ಸಾತ್ವಿಕ ನಿಲುವಿನ ಮರ್ಮವನರಿಯದೇ ವಸ್ತುಸಂಗ್ರಹದಲ್ಲಿ ಸುಖವೆಂಬ ಭ್ರಾಂತಿಗೊಳಗಾಗಿದ್ದಾನೆ.

ಮಾನವನ ಕೊಳ್ಳುಬಾಕ ಸಂಸ್ಕೃತಿಯ ಪರಿಣಾಮವನ್ನು ಬಸವಣ್ಣನವರ ವಚನ ಮಾರ್ಮಿಕವಾಗಿ ತಿಳಿಸುತ್ತದೆ.

ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲವಯ್ಯಾ!
ಬೆರಣಿಯನಾಯಲಲ್ಲದೆ ಅಟ್ಟುಣ್ಣಲು ವ್ಯವಧಾನವಿಲ್ಲವಯ್ಯಾ
ಇದೆಂತೋ ಲಿಂಗ ತಂದೆ ! ಇದೆಂತಯ್ಯಾ ಎನ್ನ ಪೂರ್ವಲಿಖಿತ?
ನೀನೇ ಕರುಣಿಸಾ ಕೂಡಲಸಂಗಮದೇವಾ.

'ಬೆರಣಿಯನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲವಯ್ಯಾ' ಎಂಬ ನುಡಿ ಕೊಳ್ಳುಬಾಕ ಸಂಸ್ಕೃತಿಯ ಸಶಕ್ತ ಅಭಿವ್ಯಕ್ತಿಯಾಗಿದೆ. ಅಡಿಗೆ ಬೇಯಿಸಲು ಕುಳ್ಳುಗಳನ್ನು ಆಯ್ದು ಕೂಡಿಡುವ ಮಾನವ ಅದರಲ್ಲೇ ಕಾಲ ಕಳೆಯುತ್ತಾ ಹೋದರೆ ಅಟ್ಟುಣ್ಣಲು ತೆರಹಿಲ್ಲದಂತಾಗುತ್ತದೆ. ಮಾನವನ ಆಯುಷ್ಯವಿರುವುದು ಸ್ವಲ್ಪ ಮಾತ್ರ. ತನಗೆ ದೊರೆತ ಮಾನವನ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಾದರೆ ಮಾನವ ಅಗತ್ಯ ಬಯಕೆಗಳು ಈಡೇರಿಸಲು ಕಾಯಕ ಮಾಡಿ ಮಿಕ್ಕಿದ್ದನ್ನು ಗುರುಲಿಂಗ ಜಂಗಮರಿಗೆ ಸಮರ್ಪಿಸಿ ಕೃತಾರ್ಥನಾಗಬೇಕು. ಅದು ಬಿಟ್ಟು ಕೂಡಿಡುತ್ತಾ ಹೋದರೆ ಅದನ್ನು ಬಳಸಲು ಅವಕಾಶವಿಲ್ಲದಂತೆ ಮಾನವ ಲಿಂಗೈಕ್ಯವಾಗಬಹುದು. ಶರಣರು ಅದಕ್ಕಾಗಿಯೇ ಆಶೆಯೇ ದಾಸತ್ವ ನಿರಾಶೆಯೇ ಈಶತ್ವ ಎಂದಿದ್ದಾರೆ. ಅಂದರೆ ಆಸೆಗಳನ್ನು ಅವಶ್ಯಕತೆಗೆ ತಕ್ಕಂತೆ ಮಿತಿಗೊಳಿಸಿ ಶಾಶ್ವತ ಸುಖದ ಲಿಂಗವ್ಯಸನಿಯಾಗಬೇಕು. ಆದರೆ ಪಂಚೇಂದ್ರಿಯಗಳಿಂದಾದ ಈ ಒಡಲು ಸದಾ ತನ್ನಿಚ್ಛೆಗೆ ಮನವನ್ನು ಕ್ರಮಿಸುವುದುಂಟು. ಈ ಪಂಚೇಂದ್ರಿಯಂಗಳಲ್ಲಿ ವಿಹರಿಸುವ ಮನವ ನಿಯಂತ್ರಿಸಿ ಲಿಂಗಾಂಗ ಸಾಮರಸ್ಯಕ್ಕೆ ಅಣಿಗೊಳಿಸುವಂತೆ ದೇವರಲ್ಲಿ ಶರಣರು ಮೊರೆಯಿಡುತ್ತಾರೆ.

ಆಶೆಯೆಂಬ ಪಾಶದಲ್ಲಿ ಭವಬಂಧನನಾಗಿರ್ದೆನಯ್ಯಾ;
ಸಕೃತು ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯಾ!
ಕರುಣಾಕರ, ಅಭಯಕರ, ವರದ ನೀ ಕರುಣಿಸಯ್ಯಾ;
ಸಂಸಾರಬಂಧನವನು ಮಾಣಿಸಿ ಎನಗೆ ನೀ ಕೃಪೆ ಮಾಡಿ
ನಿಮ್ಮ ಶ್ರೀಪಾದಪದ್ಮದಲ್ಲಿ ಭ್ರಮರನಾಗಿರಿಸು
ಭಕ್ತಜನಮನೋವಲ್ಲಭ ಕೂಡಲಸಂಗಮದೇವಾ.

ಆಸೆ ಬಂಧನಕ್ಕೆ ಕಾರಣ. ಆಸೆ ಮಾನವನನ್ನು ದಾಸನನ್ನಾಗಿಸುತ್ತದೆ. ಆಸೆಗೊಳಗಾದವನು ಲೋಕಕ್ಕೇ ಆಳು ಎಂಬ ಮಾತಿದೆ. ಅದಕ್ಕಾಗಿಯೇ ಶರಣರು ಆಸೆಯ ಪರಿಣಾಮವನ್ನು ತಿಳಿಸಿ ಮಾನವನಿಗೆ ಈಶತ್ವಕ್ಕೆ ದಾರಿ ಅರುಹಿದ್ದಾರೆ.

ಶರಣ ಶ್ರೀ ಉರಿಲಿಂಗ ಪೆದ್ದಿಗಳು ಈಶ ಪದವಿ ಪಡೆಯಲು ಆಸೆಯ ದಾಸತ್ವ ನೀಗಬೇಕೆಂದಿದ್ದಾರೆ.

ಆಶೆಯುಳ್ಳನ್ನವರ ಆಶ್ರಯಿಸುವ ಆಶ್ರಯವು ದಾಸಿಯಿಂದ ಕರಕಷ್ಟ ಕಾಣಿರೋ
ಆಸೆಯೇ ದಾಸಿ ಕಾಣಿರೋ ಅಯ್ಯಾ
ನಿರಾಶೆಯೇ ಈಶತ್ವ ಕಾಣಿರಣ್ಣಾ
ದಾಸತ್ವದ, ಈಶತ್ವದ ಅನುವನು ವಿಚಾರಿಸಿ
ಆಸೆ ಅಡಗಿದಡೆ ಅದೇ ಈಶಪದ
ತಪ್ಪದಯ್ಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಇದೇ ಭಾವವನ್ನು ಶರಣ ಅಂಬಿಗರ ಚೌಡಯ್ಯನವರು ಹೀಗೆ ಅಭಿವ್ಯಕ್ತಿಸಿದ್ದಾರೆ:

ಆಸೆಯುಳ್ಳಾತನೊಬ್ಬರಾಧೀನದಲ್ಲಿಪ್ಪನು
ಆಸೆಯ ಮನದ ಕೊನೆಯನರಿದಾತ
ಕೈಲಾಸದಾಚೆಯಲ್ಲಿಪ್ಪನೆಂದಾತ
ನಮ್ಮ ಅಂಬಿಗರ ಚೌಡಯ್ಯ

**ಪರಿಹಾರ**

ಮಾನವನ ಬದುಕಿನಲ್ಲಿ ಆಸೆ ಅನಿವಾರ್ಯ. ಅದು ಅವನ ಆಧ್ಯಾತ್ಮಸಾಧನೆಗೆ ತೊಡಕಾಗದಂತೆ ಅನುವಾಗುವ ಪರಿಯನ್ನು ಶರಣರು ತಮ್ಮ ಜೀವನಾನುಭವ ಮತ್ತು ಅನುಭಾವದ ನೆಲೆಯಲ್ಲಿ ಕಂಡುಕೊಂಡು ವಚನಗಳ ರೂಪದಲ್ಲಿ ನಮಗೆ ಬಳುವಳಿಯಾಗಿ ಕೊಟ್ಟಿದ್ದಾರೆ. ಆಸೆ, ಆಮಿಷ, ವಿಷಯಕ್ಕೆಳೆಸುವ ಮನವನ್ನು ಅಂತರ್ಮುಖಿಗೊಳಿಸಿ ಭವಪಾಶದಿಂದ ಮುಕ್ತಗೊಳಿಸಿ ನಿತ್ಯ ಸುಖ ಪಡೆಯುವ ರೀತಿಯನ್ನು ಶರಣರ ವಚನಗಳಲ್ಲಿ ಕಂಡುಕೊಳ್ಳಬಹುದು:

ಆಸೆಯುಳ್ಳನ್ನಕ್ಕ ರೋಷ ಬಿಡದು
ಕಾಮವುಳ್ಳನ್ನಕ್ಕ ಕಳವಳ ಬಿಡದು
ಕಾಯಗುಣವುಳ್ಳನ್ನಕ್ಕ ಜೀವನ ಬುದ್ಧಿ ಬಿಡದು
ಭಾವವುಳ್ಳನ್ನಕ್ಕ ಬಯಕೆ ಸವೆಯದು
ನಡೆವುಳ್ಳನ್ನಕ್ಕ ನುಡಿಗೆಡದು
ಇವೆಲ್ಲವೂ ಮುಂದಾಗಿದ್ದು, ಹಿಂದನರಿದೆನೆಂಬ
ಸಂದೇಹಿಗಳೆಲ್ಲಾ ನೀವು ಕೇಳಿರೋ
ನಮ್ಮ ಶರಣರು ಹಿಂದೆ ಹೇಗೆ ಅರಿದರೆಂದಡೆ
ಆಶೆಯನಳಿದು ರೋಷ ಹಿಂಗಿದರು,
ಕಾಮವ ಸುಟ್ಟರು, ಕಳವಳ ಹಿಂಗಿದರು
ಕಾಯಗುಣವಳಿದರು, ಜೀವನ ಬುದ್ಧಿಯ ಹಿಂಗಿದರು
ಭಾವ ಬಯಲು ಮಾಡಿದರು, ಬಯಕೆ ಸವೆದರು
ಹಿಂದನರಿದು ಮುಂದೆ ಲಿಂಗವೇ ಗೂಡಾದ ಶರಣರ
ಈ ಸಂದೇಹಿಗಳೆತ್ತ ಬಲ್ಲರು ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ
- ಹಡಪದ ಲಿಂಗಮ್ಮ

ವ್ಯಕ್ತಿ ಕಾಯ ಗುಣವಳಿದು ಭವ ಬಯಲು ಮಾಡಬೇಕಾದರೆ ಶರಣನಾಗಿ ತಳೆಯಬೇಕಾದ ಭಾವದ ಬಿಂಬ ಚೆನ್ನಬಸವಣ್ಣನವರ ವಚನದಲ್ಲಿದೆ:

ಎನ್ನ ಘ್ರಾಣದ ಬಾಗಿಲಲ್ಲಿದ್ದು ಸುವಾಸನೆಯ
ಸುಖಂಗಳ ಭೋಗಿಸುವಾತ ನೀನಯ್ಯಾ
ಎನ್ನ ನೇತ್ರದ ಬಾಗಿಲಲಿರ್ದು ಸುರೂಪು
ಸುಖಂಗಳ ಭೋಗಿಸುವಾತ ನೀನಯ್ಯಾ
ಎನ್ನ ತ್ವಕ್ಕಿನ ಬಾಗಿಲಲಿರ್ದು ಸುಸ್ಪರ್ಶನವ ಮಾಡಿ
ಆ ಸ್ಪರ್ಶಸುಖವ ಸುಖಿಸುವಾತ ನೀನಯ್ಯಾ
ಎನ್ನ ಮನದ ಬಾಗಿಲಲಿರ್ದು
ಪಂಚೇಂದ್ರಿಯಂಗಳನರಿದು
ಸುಖಿಸುವ ಅರಿವಿನಿ ಮೂರ್ತಿ
ನೀನಯ್ಯಾ
ಅದೇನು ಕಾರಣವೆಂದರೆ
ನೀಡಿಸುವ ಜಂತ್ರದ ಬೊಂಬೆ ನಾನೆಂದರಿದ ಕಾರಣ
ನಿಮ್ಮ ಕರಣಂಗಳೇ ಎನ್ನ ಹರಣಂಗಳಾಗಿ
ಕೂಡಲ ಚೆನ್ನಸಂಗಮದೇವಾ ನೀನಾಡಿಸಿದಂತೆ ನಾನಾಡಿದೆನಯ್ಯಾ

**ಉಪಸಂಹಾರ**

ಭೌತಿಕ ಸಂಪತ್ತು ಸಾಧನಗಳಿಂದ ಮಾನವನು ಪರಮ ಸಂತೃಪ್ತಿ ಪಡೆಯಲಾರ. ಆಸೆಯೆಂಬ ಮಾಯಾಮೃಗದ ಬೆನ್ನುಹತ್ತಿರುವ ಮಾನವ ಅಜ್ಞಾನದಿಂದ ತನ್ನ

ಜೀವನವನ್ನು ವ್ಯರ್ಥಮಾಡಿಕೊಳ್ಳುತ್ತಾನೆ. ಶರಣರ ಅರಿವಿನ ಬೆಳಕಿನಲ್ಲಿ ತನು ಮನ ಕರಣೇಂದ್ರಿಯಂಗಳನ್ನು ಲಿಂಗಮಯಗೊಳಿಸಬೇಕು. ಆಗ ಆಸೆಯೆಂಬ ಪಾಶ ಹರಿದು ಭವಬಂಧನದಿಂದ ಮುಕ್ತಿ ದೊರಕುತ್ತದೆ. ಆಸೆಯೆಂಬ ಕುದುರೆಯನ್ನು ನೈತಿಕತೆಯ ಲಗಾಮಿನಿಂದ ನಿಯಂತ್ರಿಸಿ ಶಿವಜ್ಞಾನಸಂಪನ್ನರಾಗಿ ಬಾಳಪಥದಲ್ಲಿ ಮುನ್ನಡೆದಾಗ ಲಿಂಗಾಂಗ ಸಾಮರಸ್ಯದಿಂದ ನಿಸ್ಸೀಮ ಸುಖ ಪ್ರಾಪ್ತವಾಗುತ್ತದೆ. ಇದೇ ಶಿವಮಯ ಬದುಕು. ಶರಣರು ಬಯಸುವ ಪರಮ ಸಂತೃಪ್ತಿಯ ಸಾರ್ಥಕ ಬದುಕು. ಶರಣರ ಅರಿವಿನ ಕಿರಣಗಳಿಂದ ನಮ್ಮ ಬಾಳಿಗೆ ಬೆಳಕಾಗಲಿ, ಆಸೆಯ ದಾಸತ್ವ ನೀಗಿ ಈಶತ್ವ ಪ್ರಾಪ್ತವಾಗಲಿ, ಮತ್ತು ಸಕಲ ಜೀವಿಗಳಿಗೆ ಲೇಸಾಗಲಿ.

□

ನಾದದ ಉತ್ಪತ್ತಿ ಸ್ಥಿತಿ ಲಯವನು
ಹೇಳಿದಡೇನು ಕೇಳಿದಡೇನು, ಎಲೆ ಮರುಳೆ !
ಬಿಂದು ದಳದ ಉತ್ಪತ್ತಿ ಸ್ಥಿತಿ ಲಯವನು
ಹೇಳಿದಡೇನು ಕೇಳಿದಡೇನು, ಎಲೆ ಮರುಳೆ !
ಮಧ್ಯದಳದ ಉತ್ಪತ್ತಿ ಸ್ಥಿತಿ ಲಯವನು
ಹೇಳಿದಡೇನು ಕೇಳಿದಡೇನು, ಎಲೆ ಮರುಳೆ !
ಮುಗಿಲಗಲದ ಅಂಬರ ವಾಯು ಅಗ್ನಿ ಜಲ ಧರೆಯ
ಹೊತ್ತುಕೊಂಡು
ಅವ ಹೇಳಿದಡೇನು ಕೇಳಿದಡೇನು, ಎಲೆ ಮರುಳೆ !
ಗುಹೇಶ್ವರಲಿಂಗದ ಬಾರಿಗೊಳಗಾಗಿ
ಇವೆಲ್ಲವನುಂಟುಮಾಡಲಜಿಯೆನಾಗಿ
ಎನಗಿಲ್ಲವೆನುತ್ತಿದ್ದೆನಯ್ಯಾ.

- ಅಲ್ಲಮಪ್ರಭು

# ಪ್ರಾಣದಲ್ಲಿ ಮಾಯೆಯಿರಲು ಅದೇತರ ನಿರ್ವಾಣ?

**ಶ್ರೀ ವೆಂಕಟೇಶ ಕೆ. ಜನಾದ್ರಿ**

"ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು ಏತರ ಮನ, ಇದೇತರ ನಿರ್ವಾಣ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಹಾರಿಯೆಂಬನಲ್ಲದೇ ಸಜ್ಜನೆಯೆಂದು ಕೈವಿಡೆವನಲ್ಲ ಕೇಳಾ ಮರುಳೆ" ಎಂದು ಅಕ್ಕಮಹಾದೇವಿಯನ್ನು ಪ್ರಶ್ನಿಸುವ ಮೂಲಕ ಆಕೆಯ ಮಾನಸಿಕ ಸ್ಥಿರತೆಯನ್ನೇ ಪರೀಕ್ಷಿಸುವ ಹೊಣೆಹೊತ್ತ ಶರಣ ಕಿನ್ನರಿ ಬೊಮ್ಮಯ್ಯ ಬಸವಾದಿ ಪ್ರಮಥರಲ್ಲಿಯೇ ಬಹಳ ವಿಶಿಷ್ಟ ಬಗೆಯ ವೈಚಾರಿಕ ಚಿಂತಕ. ಅಷ್ಟೇ ದಿಟ್ಟ ನಿಲುವಿನ ಶರಣ. ಈತನ ಈ ಬಗೆಯ ನೇರ ನಡೆ-ನುಡಿಗೆ ಮೆಚ್ಚಿದ ಬಸವಣ್ಣ ಬಸವಕಲ್ಯಾಣದ ಅನುಭವ ಮಂಟಪಕ್ಕೆ ಬರುವ ಹೊಸ ಹೊಸ ಶರಣರನ್ನು ಪರೀಕ್ಷಿಸಿ ಅವರ ಗುರುತಿನ ವಿವರಗಳನ್ನು ಕೊಡುವ ಹೊಣೆಗಾರಿಕೆಯನ್ನು ವಹಿಸಿದ್ದರು. ಅದಕ್ಕಾಗಿಯೇ ಇರಬೇಕು ಅನುಭವ ಮಂಟಪವೆಂಬುದು ಶರಣ ಶ್ರೇಷ್ಠರ ನೆಲೆಯಾಗಿತ್ತು. ಶರಣರ ಚಿಂತನೆಯ ಅಲೆಗಳ ಅನುಭಾವದ ಆಗರವಾಗಿತ್ತು. ಅನುಭವ ಮಂಟಪ ತನ್ನ ಸ್ಥಾವರತೆಯೊಳಗೇ ಜಂಗಮತ್ವವನ್ನು ಉಸಿರಾಗಿಸಿಕೊಂಡಿತ್ತು. ಇಡೀ ಅನುಭವ ಮಂಟಪದಲ್ಲಿ ಬಯಲಾದ ನುಡಿಗಳೆಲ್ಲವೂ ಅವರ ನಡೆಯಾಗಿದ್ದವು.

ಅಕ್ಕಮಹಾದೇವಿ ಶಿವಮೊಗ್ಗದ ಉಡತಡಿ (ಬಟ್ಟೆ ಉಡುವುದನ್ನು ಕಡೆದ ಊರು) ಯಿಂದ ಬಸವಕಲ್ಯಾಣದತ್ತ ಬರುತ್ತಿದ್ದಾಗ ಕಲ್ಬುರ್ಗಿ ಹತ್ತಿರದ ಮಹಾಗಾಂವದಲ್ಲಿ ಒಂದೆರಡು ದಿನ ತಂಗಿ ಬಸವಕಲ್ಯಾಣಕ್ಕೆ ತೆರಳಲಿರುವ ಅಕ್ಕಮಹಾದೇವಿಯನ್ನು ತಡೆದು ಪರೀಕ್ಷಿಸಿದ ಸ್ಥಳ ಒಂದಿದೆ. ಅದುವೇ ಬೀದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕಿನ ಹಳ್ಳಿಖೇಡನ ಹತ್ತಿರ ಕಿಣ್ಣಿ ಎಂಬ ಗ್ರಾಮವಿದೆ. ಕಿಣ್ಣಿ ಎಂಬುದು ಬೊಮ್ಮಯ್ಯನ ಕಿನ್ನರಿ ಶಬ್ದದಿಂದಲೇ ಪರಿವರ್ತಿತವಾಗಿ ಕಿನ್ನರಿ, ಕಿಣ್ಣರಿ, ಕಿಣ್ಣ, ಕಿಣ್ಣಿಯಾಗಿರಬಹುದೆಂಬುದು ನನ್ನ ಅಂದಾಜು. ಈ ಕಿಣ್ಣಿಯ ಹತ್ತಿರ ಕಿನ್ನರಿ ಬೊಮ್ಮಯ್ಯ ಶರಣರು ಅಕ್ಕಮಹಾದೇವಿಯನ್ನು ತಡೆದು ನಿಲ್ಲಿಸಿ ಆಕೆಯ ವೈರಾಗ್ಯವನ್ನು ಒರೆಹಚ್ಚಿ ನೋಡಬೇಕಾದಾಗ, ಕಿನ್ನರಿ ಬೊಮ್ಮಯ್ಯನಿಗೆ ಆಕೆಯ ಭಕ್ತಿ, ವೈರಾಗ್ಯದ ಕುರಿತಾಗಿ ಮತ್ತು ಚೆನ್ನಮಲ್ಲಿಕಾರ್ಜುನನೆಂಬ ಅರಿವಿನ ದೇವನನ್ನೇ ತನ್ನ ಪತಿಯಾಗಿಸಿಕೊಂಡಂಥ

ಅವಳ ಧೋರಣೆಯನ್ನು ಪರೀಕ್ಷಿಸುವಾಗ ಸಹಜವಾಗಿ ಮೇಲಿನಂತೆ "ಪ್ರಾಣದಲ್ಲಿ ಮಾಯೆಯಿರಲು ಆದೇತರ ನಿರ್ವಾಣ" ಎಂಬ ತನ್ನ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

ಕಾಯವೆಂಬ ದೇಹದಲ್ಲಿ ಕಳವಳವನ್ನು ಹೊಂದಿದ್ದರೆ ಅದೆಂಥ ನಿರ್ಮಲ ಮನ?, ಪ್ರಾಣದಲ್ಲಿಯ ಮಾಯೆಯೆಂಬ ಪಾಶವನ್ನು ಹೊಂದಿದ್ದಾಗ ಅದೆಂಥ ವೈರಾಗ್ಯದ ನಿರ್ವಾಣ? ಇರಲು ಸಾಧ್ಯವೆಂಬ ಅಂಶವನ್ನು ತಾನು ಗುರಿತಿಸಿದವನಂತೆ ನಟಿಸಿ ಹೀಗಿದ್ದರೆ ಇದೆಂಥ ಮನ ನಿನ್ನದು, ಇದೆಂಥ ನಿರ್ವಾಣ? ನಿನ್ನದು ಹೀಗಿದ್ದರೆ ಮಹಾಲಿಂಗವೆಂಬ ತ್ರಿಪುರಾಂತಕ ಅಂಗ ನಿನ್ನನ್ನು ಸಂಹಾರಿ ಎನ್ನಲ್ಲನೇ ಹೊರತು "ಸಜ್ಜನೆ" ಎನ್ನಲಾರ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಅಕ್ಕ ಸಮರ್ಥವಾಗಿಯೇ ತನ್ನ ವೈರಾಗ್ಯದ ಧೋರಣೆಯನ್ನು ತನ್ನ ಮನದೊಳಗಣ ಪತಿ ಆ ದೇವ ಚೆನ್ನಮಲ್ಲಿಕಾರ್ಜುನನ ಬಗೆಗೆ ಮಾರ್ಮಿಕವಾಗಿ ಉತ್ತರಿಸುತ್ತಾಳೆ.

ಇಲ್ಲಿ ಒಂದು ವಿಷಯ ಸಂಶೋಧನೆಗೊಳಪಡಬೇಕಾಗಿದೆ-ಕೆಲವು ಜನಪದರ ದೃಷ್ಟಿಯಲ್ಲಿ ಕಿನ್ನರಿ ಬೊಮ್ಮಯ್ಯ ಅಕ್ಕಮಹಾದೇವಿಯ ಪ್ರೀತಿಯನ್ನು ಬಯಸಿದ್ದ, ಪ್ರೀತಿಯ ಭಾವದಲ್ಲಿದ್ದ ಎಂಬುದನ್ನು ಅಭಿವ್ಯಕ್ತಿಸುತ್ತಾರೆ. ಆದರೆ ನನ್ನ ಅಂದಾಜಿನ ಪ್ರಕಾರ ಬೊಮ್ಮಯ್ಯನವರಿಗೆ ಅಕ್ಕಮಹಾದೇವಿ ಬಗೆಗೆ ಪ್ರೀತಿಯ ಮೋಹವಿರದೇ ಕೇವಲ ಬಸವಣ್ಣನವರು ವಹಿಸಿದ ಹೊಣೆಗಾರಿಕೆಯನ್ನು ನಿಭಾಯಿಸುವ ಅಂದರೆ ಆಕೆಯ ವೈರಾಗ್ಯವನ್ನು ಪರೀಕ್ಷಿಸಿ ಆಕೆ ವೈರಾಗ್ಯನಿಧಿ ಎಂಬುದನ್ನು ನಿರೂಪಿಸಬೇಕಿತ್ತು. ಇಷ್ಟಾದರೂ ಮುಂದೆ ಆಕೆ ಅನುಭವ ಮಂಟಪದಲ್ಲಿ ಮತ್ತೆ ಅಲ್ಲಮಪ್ರಭುವಿನಿಂದ ಪರೀಕ್ಷೆಗೊಡಿಕೊಳ್ಳುವ ಮೂಲಕ "ವೈರಾಗ್ಯ ನಿಧಿ"ಗೆ ಭಾಜನಳಾಗುತ್ತಾಳೆ. ಹಾಗಾಗಿ ಇಲ್ಲಿ ಬೊಮ್ಮಯ್ಯನವರಿಗೆ ಮಹಾದೇವಿ ಕೇವಲ ಸಹೋದರಿ ಸಮಾನಳಾಗಿದ್ದಳೆನಿಸುತ್ತದೆ. ಹೀಗೆ ಬೊಮ್ಮಯ್ಯ ಅಕ್ಕನನ್ನು ಪರೀಕ್ಷಿಸುವಾಗ

"ಮಸ್ತಕವ ಮುಟ್ಟಿ ನೋಡಿದಡೆ, ಮನೋಹರದಳಿವು ಕಾಣಬಂದಿತ್ತು ಮುಖಮಂಡಲವ ಮುಟ್ಟಿ ನೋಡಿದಡೆ ಮೂರ್ತಿಯ ಅಳಿವು ಕಾಣ ಬಂದಿತ್ತು. ಕೊರಳ ಮುಟ್ಟಿ ನೋಡಿದಡೆ, ಗರಳಧರನ ಇರವು ಕಾಣ ಬಂದಿತ್ತು, ತೋಳುಗಳ ಮುಟ್ಟಿ ನೋಡಿದಡೆ ಶಿವನಪ್ಪುಗೆ ಕಾಣ ಬಂದಿತ್ತು, ಉರಸ್ಥಲವ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಣ ಬಂದಿತ್ತು, ಬಸಿರ ಮುಟ್ಟಿ ನೋಡಿದಡೆ ಶಿವನಪ್ಪುಗೆ ಕಾಣ ಬಂದಿತ್ತು, ಉರಸ್ಥಲದ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಮ ಬಂದಿತ್ತು, ಬಸಿರ ಮುಟ್ಟಿ ನೋಡಿದಡೆ, ಬ್ರಹ್ಮಾಂಡವ ಕಾಣ ಬಂದಿತ್ತು, ಗುಹ್ಯವ ಮುಟ್ಟಿ ನೋಡಿದಡೆ ಕಾಮದಹನ ಕಾಣ ಬಂದಿತ್ತು ಮಹಾಲಿಂಗ ತ್ರಿಪುರಾಂತಕದೇವಾ ಮಹಾದೇವಿಯಕ್ಕನ ನಿಲುವನರಿಯದೆ ಅಳುಪಿ ಕೆಟ್ಟೆನು"

ಎಂಬ ಬೊಮ್ಮಯ್ಯನ ವಚನವನ್ನಿಲ್ಲಿ ಗಮನಿಸಬಹುದು. ಈ ವಚನವನ್ನು ಅವಲೋಕಿಸಿದಾಗ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಪರೀಕ್ಷಿಸುವಾಗ ಕಂಡುಕೊಂಡ ಬೆರಗು ಮತ್ತು ನಿಷ್ಠೆಯನ್ನು ಬಿಂಬಿಸುತ್ತಾನೆ. ಆಕೆಯ ನೆತ್ತಿಯನ್ನು ಮುಟ್ಟಿದಾಗ ಐಹಿಕ ಜಗತ್ತಿನಿಂದ ಆಕೆ ವಿಮುಖವಾಗಿದ್ದನ್ನು ಗುರುತಿಸುತ್ತಾರೆ. ಮುಖ ಮುಟ್ಟಿ ನೋಡಿದಾಗ ನಿರಾಕಾರ ಸ್ಥಿತಿಯಲ್ಲಿದ್ದ ಆಕೆಯ ನಿರ್ಲಿಪ್ತ ಮನೋಭಾವ ಗೋಚರಿಸುತ್ತದೆ. ಕೊರಳನ್ನು ಮುಟ್ಟಿದಾಗ ಅಲ್ಲಿ ನೀಲಕಂಠನ ಇರುವಿಕೆ ಅರಿವಿಗೆ ಬರುತ್ತದೆ. ತೋಳುಗಳನ್ನು ಮುಟ್ಟಿದಾಗ ಅಲ್ಲಿ ಚೆನ್ನಮಲ್ಲಿಕಾರ್ಜುನನೇ ಆವರಿಸಿಕೊಂಡಿದ್ದು ಕಂಡುಬರುತ್ತದೆ, ಎದೆ ಮುಟ್ಟಿದಾಗ ಅಲ್ಲಿ ಪರಶಿವನಿರುವಿಕೆ ತೋರುತ್ತದೆ. ಹೊಟ್ಟೆ ಮುಟ್ಟಿದಾಗ ಅಲ್ಲಂತೂ ಬ್ರಹ್ಮಾಂಡದ ಬೆರಗು ಕಾಣುತ್ತದೆ, ಗುಪ್ತಾಂಗ ಮುಟ್ಟಿದಾಗ ಕಾಮದಹನವಾದಂತೆ ವಿಸ್ಮಯತೆ ಅರಿವಾಗುತ್ತದೆ, ಓ ದೇವರೆ ಮಹಾದೇವಿಯಕ್ಕನ ದಿವ್ಯತೆ ಅರ್ಥೈಸಿಕೊಳ್ಳದೆ ಪರೀಕ್ಷಿಸಿ ನಾ ಕೆಟ್ಟೆ ಎಂದು ಪಶ್ಚಾತ್ತಾಪಿಯಾಗಿ "ನಾನು ಹುಲಿ ನೆಕ್ಕಿ ಬದುಕಿದೆನು" ಶರಣಾರ್ಥಿ ತಾಯಿ ಶರಣಾರ್ಥಿ ಎನ್ನುತ್ತಾರೆ.

"ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ, ನಿನ್ನ ಪ್ರವುಡಿಯಿಂದ ಕೂಡಿದೆನೆಂಬುದು ಭಾವದಲ್ಲಿ ಬಚ್ಚಬರಿಯ ಹೆಂಗಸಾಗಿ ತೋರಿತ್ತೆನಗೆ, ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯ ನಿನ್ನ ಸಮಸುಖ ಕೂಟದೊಳಿರ್ದು ಶಿವಭಾವಭಕ್ತಿಯಂ ಗೆಲುವೆನು ಮಹಾ ಹೆಣ್ಣು ಎಂದು ಕೈವಿಡಿದೆನು"

ಎಂದು ತಮ್ಮ ವಚನದ ಮೂಲಕ ಒಪ್ಪಿಕೊಂಡ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಆ ಪರೀಕ್ಷೆಯಲ್ಲಿ ಉತ್ತೀರ್ಣ ಮಾಡಿ, ಅನುಭವ ಮಂಟಪಕ್ಕೆ ಕಳುಹಿಸುತ್ತಾನೆ. (ಅಕ್ಕಮಹಾದೇವಿಯನ್ನು ಹೀಗೆಲ್ಲ ಪರೀಕ್ಷಿಸುವ ಅವಶ್ಯಕತೆ ಇರಲಿಲ್ಲ. ಆದರೆ ಬಾಹ್ಯಪ್ರಪಂಚಕ್ಕೆ ಅಕ್ಕನ ಬಯಲ ಭಕ್ತಿ, ಬಯಲ ಭಾವವನ್ನು ಅನಾವರಣಗೊಳಿಸಬೇಕಿತ್ತೆನಿಸುತ್ತದೆ) ಇಲ್ಲಿ ಕಿನ್ನರಿ ಬೊಮ್ಮಯ್ಯ ಕೇವಲ ಸಾಂಕೇತಿಕವಾಗಿ ಪರೀಕ್ಷಕನಾಗಿದ್ದಾನೆಂದು ತೋರುತ್ತದೆ.

ಕಿನ್ನರಿ ಬೊಮ್ಮಯ್ಯನವರು ಇಂದಿನ ಆಂಧ್ರಪ್ರದೇಶದ "ಪುಂಡೂರು" ಎಂಬ ಗ್ರಾಮದಲ್ಲಿ ಕಲಿದೇವಿ ಎಂಬ ತಾಯಿಯ ಮಗನಾಗಿ ಕ್ರಿ.ಶ. 1160 ಭಾರತ ಹುಣ್ಣಿಮೆ ದಿನದಂದು ಜನಿಸಿದ್ದಿರ ಬಹುದೆಂದು ಅಂದಾಜು. ಇವರು ರಚಿಸಿದ ಹಲವು ವಚನಗಳಲ್ಲಿ ಇಂದು ಲಭ್ಯವಿರುವುದು ಕೇವಲ 18 ವಚನಗಳು. ಇವರ ಅಂಕಿತನಾಮ "ತ್ರಿಪುರಾಂತಕ ಲಿಂಗ" ಮೊದಲು ಅಕ್ಕಸಾಲಿಗ ಕಾಯಕವನ್ನು ನಿರ್ವಹಿಸುತ್ತಿದ್ದರು. ನಂತರ

ಬಸವಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರನ ಮುಂದೆ ಕಿನ್ನರಿ ನುಡಿಸುವ ಕಾಯಕವನ್ನು ಆಲಂಗಿಸಿಕೊಂಡದ್ದಕ್ಕಾಗಿ "ಕಿನ್ನರಿ ಬೊಮ್ಮಯ್ಯ" ಅಥವಾ "ಕಿನ್ನರಿ ಬ್ರಹ್ಮಯ್ಯ" ಎಂದು ಗುರುತಿಸಿಕೊಂಡಿದ್ದರು. ಬಸವಣ್ಣನವರ ಅಂತರಂಗದ ಸಖ ಆಗಿದ್ದರು.

ಒಂದೊಮ್ಮೆ ಇವರ ಪ್ರಾಣಪಕ್ಷಿ ಹಾರಿಹೋದಾಗ ಬಸವಣ್ಣ ತಮ್ಮ ಪ್ರಾಣವನ್ನು ಧಾರೆ ಎರೆದರೆಂಬ ಪ್ರಸಂಗ ಜನಪದರಲ್ಲಿ ಬರುತ್ತದೆ. ಇನ್ನೊಬ್ಬರಿಗೆ ಪ್ರಾಣ ಧಾರೆ ಎರೆಯುವುದು ವೈಜ್ಞಾನಿಕವಾಗಿ ಅಸಾಧ್ಯವಾಗಿದ್ದರೂ ಶರಣರಲ್ಲಿ ವಿಭಿನ್ನತೆಯೇ ಇರಲಿಲ್ಲ. ದೇಹ ಬೇರೆಯಾದರೂ ಅವರಲ್ಲಿಯ ಆತ್ಮ ಒಂದೇ ಆಗಿತ್ತು. ಅಂಗ ಬೇರೆಯಾಗಿದ್ದರೂ ಅವರೊಳಗಣ ಲಿಂಗ ಅಥವಾ ಲಿಂಗಗುಣ ಒಂದೇಯಾಗಿದ್ದು ಅದೇ ಎಲ್ಲಾ ಅಂಗಗಳ ಒಟ್ಟು ಮೊತ್ತವೇ ಪರಶಿವ ಅಥವಾ ದೇವನಾಗಿದ್ದ. ಹೀಗಾಗಿ ಆತ್ಮ, ಪ್ರಾಣ, ಅಂಗದ ಗುಣಗಳೆಲ್ಲವೂ ಒಂದೇ ಮೌಲ್ಯ ಆಗಿದ್ದವೆಂಬುದಕ್ಕೆ ಇದೊಂದು ಲೆಕ್ಕಾಚಾರದ ಪರಿಕಲ್ಪನೆಯೆಂದು ಒಪ್ಪಿಕೊಳ್ಳಲು ಸಾಧ್ಯವಿದೆ ಎಂದು ತಮ್ಮೊಳಗಿನ ಅರಿವಿನಲ್ಲಿ ಗುರುವನ್ನು ಕಂಡುಕೊಂಡಾಗ ತನ್ನೊಳಗೇ ಅರಿವೆಂಬ ಗುರು. ಗುರುವೆಂಬ ದೇವನಿರುವ ಕುರಿತು ಮನದುಂಬಿ ಬೀಗುತ್ತಾರೆ.

"ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ ನಿನ್ನನಿತ್ಯ ಕಾಣಾ ರಾಮನಾಥ" ಇಲ್ಲಿ ಬಸವಣ್ಣನವರ ಮಾದರಿಯಲ್ಲಿ ಬ್ರಹ್ಮ ಪದವಿಯನ್ನೊಲ್ಲೆ, ವಿಷ್ಣು ಪದವಿಯನ್ನೊಲ್ಲೆ... ಎಂಬ ವಚನದ ಧೋರಣೆಯಲ್ಲಿ ಬದುಕಿಗೆ ಅಂಟಿಕೊಂಡಿರುವ ಎಲ್ಲ ಐಹಿಕ ಭೋಗಗಳ ಗೊಡವೆ ನನಗೆ ಬೇಡವೇ ಬೇಡ. ಸಿರಿಸಂಪತ್ತು ಬೇಡ ಕೇವಲ ಶರಣರ ಒಳ್ಳೆಯ ನುಡಿಗಳು ಒಂದು ಘಳಿಗೆ ಕೇಳಿದರೆ ನಿನ್ನ ನಿತ್ಯ ನಾನು ಕಾಣುವೆ ಎಂದು ತಮ್ಮ ದೈವವನ್ನು ಕೋರುತ್ತಾರೆ. ಅಧಿಕಾರವೆಂಬ ವ್ಯಸನಕ್ಕೆ ಜೋತುಬಿದ್ದು ತಮ್ಮತನವನ್ನೇ ಒತ್ತೆ ಇಟ್ಟು ಎಲ್ಲ ಬಗೆಯ ನೈತಿಕತೆಯನ್ನು ಬಿಟ್ಟಿರುವ ಇಂದಿನ ನಾಯಕರುಗಳಿಗೆ ಈ ವಚನ ಕಣ್ಣು ತೆರೆಸುತ್ತದೆ. ಸರಳ ಬದುಕಿನ, ಶರಣ ಸಂಸ್ಕೃತಿಯಲ್ಲಿರುವ ನೆಮ್ಮದಿಯನ್ನು ತೋರುತ್ತದೆ.

"ಸತಿಪತಿಗಳಿಂದೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳಿಂದೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ ಕಾಣಾ ರಾಮನಾಥ" ಎಂಬಲ್ಲಿ ಒಂದರ್ಥದಲ್ಲಿ ಸತಿ-ಪತಿಗಳಿಬ್ಬರೂ ಒಬ್ಬರನ್ನೊಬ್ಬರು ಅರಿತು ನಡೆದರೆ ಅವರ ನುಡಿನಡೆ ಒಂದಾಗಿದ್ದು ಮಾಡುವ ಭಕ್ತಿ ಶಿವನಿಗೆ ಸಲ್ಲಿಕೆಯಾಗುತ್ತದೆ. ಹಾಗಾಗದಿದ್ದರೆ ಅವರು ಮಾಡಿದ ಭಕ್ತಿ ಭಕ್ತಿಯೆನಿಸಿದರೂ ಶಿವನಿಗೆ ಅದು ಸಲ್ಲಿಕೆಯಾಗದು. ಅದು ಅಮೃತದಲ್ಲಿ ವಿಷ ಬೆರೆಸಿದಂತೆ ಆಗುತ್ತದೆಂಬ ಭಾವವನ್ನು

ಕಾಣುತ್ತೇವೆ. ಹಾಗೆಯೇ ಇನ್ನೊಂದು ಅರ್ಥದಲ್ಲಿ ಸತಿ ಪತಿ ಅಂದರೆ ಇಲ್ಲಿ ಅಂಗ-ಲಿಂಗ, ಜೀವಾತ್ಮ-ಪರಮಾತ್ಮ, ಕಾಯಕ-ದಾಸೋಹ... ಇವುಗಳೆಲ್ಲವನ್ನು ದಾಸಿಮಯ್ಯನವರು ಸತಿಪತಿಗಳಾಗಿ ಗುರುತಿಸುತ್ತಾರೆ. ಅಂಗ ಲಿಂಗ ಒಂದೇ ಆದಾಗ, ಜೀವಾತ್ಮ ಮತ್ತು ಪರಮಾತ್ಮಗಳಲ್ಲಿ ಸಂಪರ್ಕವೇರ್ಪಟ್ಟಾಗ, ಕಾಯಕದೊಂದಿಗೆ ದಾಸೋಹ ತತ್ವವನ್ನು ನಡೆಯಾಗಿಸಿಕೊಂಡಾಗ ಸತಿಪತಿ ಭಾವ ಒಂದಾಗಿ ಅದೆಲ್ಲವೂ ಶಿವಂಗೆ ಹಿತವಾಗಿ ಅರ್ಪಿತವಾಗಿರುತ್ತದೆ. ಹೀಗೆ ಒಂದಾಗುವ ಭಾವವಿಲ್ಲದೆಡೆ ಮಾಡಿರುವ ಪ್ರಯತ್ನದ ಫಲ ಅಮೃತವಾಗಿದ್ದರೂ ವಿಷ ಬೆರೆಸಿದಂತೆ ಎಂದಿಗೂ ಅದು ಸತ್ಪಾತ್ರಕ್ಕೆ ಸಲ್ಲಿಕೆಯಾಗದೆಂಬ ಭಾವವನ್ನು ಕಾಣಬಹುದು.

ಹೀಗೆ ಜೇಡರ ದಾಸಿಮಯ್ಯನವರು ಜೀವಾತ್ಮ ಮತ್ತು ಪರಮಾತ್ಮರ ಮಧ್ಯೆ ಆಪ್ತ ಭಾವವನ್ನು ಬೆಸೆಯುತ್ತಾರೆ. ಸಂಬಂಧವನ್ನು ತಮ್ಮ ನೇಯ್ಗೆ ಕಾಯಕದಂತೆಯೇ ನೇಯುತ್ತಾರೆ. ನಮ್ಮೊಳಗೇ ಇರುವ ಅರಿವೆಂಬ ಗುರುವನ್ನು ನಮ್ಮೊಂದಿಗೆ ನೇಯುತ್ತಾರೆ. ಇಷ್ಟಲಿಂಗವೆಂಬ ಸಾಕಾರ ಅಂಗದೊಂದಿಗೆ ನಮ್ಮೊಳಗಿನ ಅರಿವೆಂಬ ನಿರಾಕಾರ ಲಿಂಗದೊಂದಿಗೆ ಬೆಸೆಯಿಸುತ್ತಾರೆ. ಕಾಯಕ ಮತ್ತು ದಾಸೋಹಗಳೆರಡನ್ನು ನೇಯ್ದು ಫಲವನ್ನೆಲ್ಲ ಪ್ರಸಾದವಾಗಿಸುತ್ತಾರೆ. ಒಡಸಲುಗೊಂಡವನ ಹಸಿವಿನ ಪರಿಚಯವನ್ನು ದೇವರಿಗೂ ಮಾಡಿಸಿ ಆ ದೇವರ ಕಣ್ಣನ್ನು ತೆರೆಸುತ್ತಾರೆ. ಹಾಗೆಯೇ ವಿವಿಧ ಬಗೆಯ ಅರಿವಿನ ಜ್ಞಾನದ ಹಸಿವುಳ್ಳವರ ಜ್ಞಾನದ ದಾಹಕ್ಕೆ ಅರಿವಿನ ಪ್ರಸಾದವನ್ನುಣಬಡಿಸಿರುವ ಮಹಾನ್ ಶರಣನೀತ. ಇತರರ ಹಸಿವಿನ ಕುರಿತೇ ಈತನ ಒಡಲಾಳದಾಳವು ಏನೆಂಬುದನ್ನು ಇವರದೇ ವಚನಗಳ ಮೂಲಕ ಅರಿಯಬಹುದಾಗಿದೆ. ಉಪಮಿಸಬಾರದ ಉಪಮಾತೀತರಾದ ಇಂಥ ಮಹಾನ್ ಶರಣನನ್ನು ನೆನೆನೆನೆದು ನುಡಿನುಡಿದು ಅವರೆಲ್ಲವನ್ನು ನಡೆಯಾಗಿಸಿಕೊಳ್ಳುವತ್ತ ಇಂದು ನಾವುಗಳೆಲ್ಲ ಚಿಂತಿಸಬೇಕಾಗಿದೆ.

"ಅಧಿಕಾರನಿತ್ತರೆ ಒಲ್ಲೆ. ಪದೋನ್ನತಿ ನೀಡಿದರೊಲ್ಲೆ, ಹಿರಿದಾದ ಕಛೇರಿಯನ್ನಿತ್ತಡೆನೊಲ್ಲೆ. ಸಾರ್ವಜನಿಕರ ಸೇವೆಮಾಡುವವಕಾಶನಿತ್ತಡೆ ನಿಮ್ಮನಿತ್ಯ ಕಾಣಾ ವೆಂಕಟಾದ್ರಿ" ಎಂದೆನೆಸುತ್ತಾ ತಮಗೆಲ್ಲ ಶರಣು ಶರಣಾರ್ಥಿ.

ಕಾಯವೆಂಬ ದೇಹದಲ್ಲಿ ಕಳವಳವನ್ನು ಹೊಂದಿದ್ದರೆ ಅದೆಂಥ ನಿರ್ಮಲ ಮನ?, ಪ್ರಾಣದಲ್ಲಿಯ ಮಾಯೆಯೆಂಬ ಪಾಶವನ್ನು ಹೊಂದಿದ್ದಾಗ ಅದೆಂಥ ವೈರಾಗ್ಯದ ನಿರ್ವಾಣ? ಇರಲು ಸಾಧ್ಯವೆಂಬ ಅಂಶವನ್ನು ತಾನು ಗುರಿತಿಸಿದವನಂತೆ ನಟಿಸಿ ಹೀಗಿದ್ದರೆ ಇದೆಂಥ ಮನ ನಿನ್ನದು, ಇದೆಂಥ ನಿರ್ವಾಣ? ನಿನ್ನದು ಹೀಗಿದ್ದರೆ ಮಹಾಲಿಂಗವೆಂಬ ತ್ರಿಪುರಾಂತಕ ಅಂಗ ನಿನ್ನನ್ನು ಸಂಹಾರಿ ಎನ್ನಲ್ಲನೇ ಹೊರತು "ಸಜ್ಜನೆ" ಎನ್ನಲಾರ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಅಕ್ಕ ಸಮರ್ಥವಾಗಿಯೇ ತನ್ನ ವೈರಾಗ್ಯದ

ಧೋರಣೆಯನ್ನು ತನ್ನ ಮನದೊಳಗಣ ಪತಿ ಆ ದೇವ ಚೆನ್ನಮಲ್ಲಿಕಾರ್ಜುನನ ಬಗೆಗೆ ಮಾರ್ಮಿಕವಾಗಿ ಉತ್ತರಿಸುತ್ತಾಳೆ.

ಇಲ್ಲಿ ಒಂದು ವಿಷಯ ಸಂಶೋಧನೆಗೊಳಪಡಬೇಕಾಗಿದೆ-ಕೆಲವು ಜನಪದರ ದೃಷ್ಟಿಯಲ್ಲಿ ಕಿನ್ನರಿ ಬೊಮ್ಮಯ್ಯ ಅಕ್ಕಮಹಾದೇವಿಯ ಪ್ರೀತಿಯನ್ನು ಬಯಸಿದ್ದ, ಪ್ರೀತಿಯ ಭಾವದಲ್ಲಿದ್ದ ಎಂಬುದನ್ನು ಅಭಿವ್ಯಕ್ತಿಸುತ್ತಾರೆ. ಆದರೆ ನನ್ನ ಅಂದಾಜಿನ ಪ್ರಕಾರ ಬೊಮ್ಮಯ್ಯನವರಿಗೆ ಅಕ್ಕಮಹಾದೇವಿ ಬಗೆಗೆ ಪ್ರೀತಿಯ ಮೋಹವಿರದೇ ಕೇವಲ ಬಸವಣ್ಣನವರು ವಹಿಸಿದ ಹೊಣೆಗಾರಿಕೆಯನ್ನು ನಿಭಾಯಿಸುವ ಅಂದರೆ ಆಕೆಯ ವೈರಾಗ್ಯವನ್ನು ಪರೀಕ್ಷಿಸಿ ಆಕೆ ವೈರಾಗ್ಯನಿಧಿ ಎಂಬುದನ್ನು ನಿರೂಪಿಸಬೇಕಿತ್ತು. ಇಷ್ಟಾದರೂ ಮುಂದೆ ಆಕೆ ಅನುಭವ ಮಂಟಪದಲ್ಲಿ ಮತ್ತೆ ಅಲ್ಲಮಪ್ರಭುವಿನಿಂದ ಪರೀಕ್ಷೆಗೊಡಿಕೊಳ್ಳುವ ಮೂಲಕ "ವೈರಾಗ್ಯ ನಿಧಿ"ಗೆ ಭಾಜನಳಾಗುತ್ತಾಳೆ. ಹಾಗಾಗಿ ಇಲ್ಲಿ ಬೊಮ್ಮಯ್ಯನವರಿಗೆ ಮಹಾದೇವಿ ಕೇವಲ ಸಹೋದರಿ ಸಮಾನಳಾಗಿದ್ದಳೆನಿಸುತ್ತದೆ. ಹೀಗೆ ಬೊಮ್ಮಯ್ಯ ಅಕ್ಕನನ್ನು ಪರೀಕ್ಷಿಸುವಾಗ

"ಮಸ್ತಕವ ಮುಟ್ಟಿ ನೋಡಿದಡೆ, ಮನೋಹರದಳಿವು ಕಾಣಬಂದಿತ್ತು ಮುಖಮಂಡಲವ ಮುಟ್ಟಿ ನೋಡಿದಡೆ ಮೂರ್ತಿಯ ಅಳಿವು ಕಾಣ ಬಂದಿತ್ತು. ಕೊರಳ ಮುಟ್ಟಿ ನೋಡಿದಡೆ, ಗರಳಧರನ ಇರವು ಕಾಣ ಬಂದಿತ್ತು, ತೋಳುಗಳ ಮುಟ್ಟಿ ನೋಡಿದಡೆ ಶಿವನಪ್ಪುಗೆ ಕಾಣ ಬಂದಿತ್ತು, ಉರಸ್ಥಲವ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಣ ಬಂದಿತ್ತು, ಬಸಿರ ಮುಟ್ಟಿ ನೋಡಿದಡೆ ಶಿವನಪ್ಪುಗೆ ಕಾಣ ಬಂದಿತ್ತು, ಉರಸ್ಥಲದ ಮುಟ್ಟಿ ನೋಡಿದಡೆ ಪರಸ್ಥಲದಂಗಲೇಪ ಕಾಮ ಬಂದಿತ್ತು, ಬಸಿರ ಮುಟ್ಟಿ ನೋಡಿದಡೆ, ಬ್ರಹ್ಮಾಂಡವ ಕಾಣ ಬಂದಿತ್ತು, ಗುಹ್ಯವ ಮುಟ್ಟಿ ನೋಡಿದಡೆ ಕಾಮದಹನ ಕಾಣ ಬಂದಿತ್ತು ಮಹಾಲಿಂಗ ತ್ರಿಪುರಾಂತಕದೇವಾ ಮಹಾದೇವಿಯಕ್ಕನ ನಿಲುವನರಿಯದೆ ಅಳುಪಿ ಕೆಟ್ಟೆನು"

ಎಂಬ ಬೊಮ್ಮಯ್ಯನ ವಚನವನ್ನಿಲ್ಲಿ ಗಮನಿಸಬಹುದು. ಈ ವಚನವನ್ನು ಅವಲೋಕಿಸಿದಾಗ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಪರೀಕ್ಷಿಸುವಾಗ ಕಂಡುಕೊಂಡ ಬೆರಗು ಮತ್ತು ನಿಷ್ಠೆಯನ್ನು ಬಿಂಬಿಸುತ್ತಾನೆ. ಆಕೆಯ ನೆತ್ತಿಯನ್ನು ಮುಟ್ಟಿದಾಗ ಐಹಿಕ ಜಗತ್ತಿನಿಂದ ಆಕೆ ವಿಮುಖವಾಗಿದ್ದನ್ನು ಗುರುತಿಸುತ್ತಾರೆ. ಮುಖ ಮುಟ್ಟಿ ನೋಡಿದಾಗ ನಿರಾಕಾರ ಸ್ಥಿತಿಯಲ್ಲಿದ್ದ ಆಕೆಯ ನಿರ್ಲಿಪ್ತ ಮನೋಭಾವ ಗೋಚರಿಸುತ್ತದೆ. ಕೊರಳನ್ನು ಮುಟ್ಟಿದಾಗ ಅಲ್ಲಿ ನೀಲಕಂಠನ ಇರುವಿಕೆ ಅರಿವಿಗೆ ಬರುತ್ತದೆ. ತೋಳುಗಳನ್ನು ಮುಟ್ಟಿದಾಗ ಅಲ್ಲಿ ಚೆನ್ನಮಲ್ಲಿಕಾರ್ಜುನನೇ ಆವರಿಸಿಕೊಂಡಿದ್ದು ಕಂಡುಬರುತ್ತದೆ, ಎದೆ ಮುಟ್ಟಿದಾಗ ಅಲ್ಲಿ ಪರಶಿವನಿರುವಿಕೆ

ತೋರುತ್ತದೆ. ಹೊಟ್ಟೆ ಮುಟ್ಟಿದಾಗ ಅಲ್ಲಂತೂ ಬ್ರಹ್ಮಾಂಡದ ಬೆರಗು ಕಾಣುತ್ತದೆ, ಗುಪ್ತಾಂಗ ಮುಟ್ಟಿದಾಗ ಕಾಮದಹನವಾದಂತೆ ವಿಸ್ಮಯತೆ ಅರಿವಾಗುತ್ತದೆ, ಓ ದೇವರೆ ಮಹಾದೇವಿಯಕ್ಕನ ದಿವ್ಯತೆ ಅರ್ಥೈಸಿಕೊಳ್ಳದೆ ಪರೀಕ್ಷಿಸಿ ನಾ ಕೆಟ್ಟೆ ಎಂದು ಪಶ್ಚಾತ್ತಾಪಿಯಾಗಿ "ನಾನು ಹುಲಿ ನೆಕ್ಕಿ ಬದುಕಿದೆನು" ಶರಣಾರ್ಥಿ ತಾಯಿ ಶರಣಾರ್ಥಿ ಎನ್ನುತ್ತಾರೆ.

"ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ, ನಿನ್ನ ಪ್ರವುಡಿಯಿಂದ ಕೂಡಿದೆನೆಂಬುದು ಭಾವದಲ್ಲಿ ಬಚ್ಚಬರಿಯ ಹೆಂಗಸಾಗಿ ತೋರಿತ್ತೆನಗೆ, ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯ ನಿನ್ನ ಸಮಸುಖ ಕೂಟದೊಳಿರ್ದು ಶಿವಭಾವಭಕ್ತಿಯಂ ಗೆಲುವೆನು ಮಹಾ ಹೆಣ್ಣು ಎಂದು ಕೈವಿಡಿದೆನು"

ಎಂದು ತಮ್ಮ ವಚನದ ಮೂಲಕ ಒಪ್ಪಿಕೊಂಡ ಬೊಮ್ಮಯ್ಯ ಅಕ್ಕಮಹಾದೇವಿಯನ್ನು ಆ ಪರೀಕ್ಷೆಯಲ್ಲಿ ಉತ್ತೀರ್ಣ ಮಾಡಿ, ಅನುಭವ ಮಂಟಪಕ್ಕೆ ಕಳುಹಿಸುತ್ತಾನೆ. (ಅಕ್ಕಮಹಾದೇವಿಯನ್ನು ಹೀಗೆಲ್ಲ ಪರೀಕ್ಷಿಸುವ ಅವಶ್ಯಕತೆ ಇರಲಿಲ್ಲ. ಆದರೆ ಬಾಹ್ಯಪ್ರಪಂಚಕ್ಕೆ ಅಕ್ಕನ ಬಯಲ ಭಕ್ತಿ, ಬಯಲ ಭಾವವನ್ನು ಅನಾವರಣಗೊಳಿಸಬೇಕಿತ್ತೆನಿಸುತ್ತದೆ) ಇಲ್ಲಿ ಕಿನ್ನರಿ ಬೊಮ್ಮಯ್ಯ ಕೇವಲ ಸಾಂಕೇತಿಕವಾಗಿ ಪರೀಕ್ಷಕನಾಗಿದ್ದಾನೆಂದು ತೋರುತ್ತದೆ.

ಕಿನ್ನರಿ ಬೊಮ್ಮಯ್ಯನವರು ಇಂದಿನ ಆಂಧ್ರಪ್ರದೇಶದ "ಪುಂಡೂರು" ಎಂಬ ಗ್ರಾಮದಲ್ಲಿ ಕಲಿದೇವಿ ಎಂಬ ತಾಯಿಯ ಮಗನಾಗಿ ಕ್ರಿ.ಶ. 1160 ಭಾರತ ಹುಣ್ಣಿಮೆ ದಿನದಂದು ಜನಿಸಿದ್ದಿರ ಬಹುದೆಂದು ಅಂದಾಜು. ಇವರು ರಚಿಸಿದ ಹಲವು ವಚನಗಳಲ್ಲಿ ಇಂದು ಲಭ್ಯವಿರುವುದು ಕೇವಲ 18 ವಚನಗಳು. ಇವರ ಅಂಕಿತನಾಮ "ತ್ರಿಪುರಾಂತಕ ಲಿಂಗ" ಮೊದಲು ಅಕ್ಕಸಾಲಿಗ ಕಾಯಕವನ್ನು ನಿರ್ವಹಿಸುತ್ತಿದ್ದರು. ನಂತರ ಬಸವಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರನ ಮುಂದೆ ಕಿನ್ನರಿ ನುಡಿಸುವ ಕಾಯಕವನ್ನು ಆಲಂಗಿಸಿಕೊಂಡದ್ದಕ್ಕಾಗಿ "ಕಿನ್ನರಿ ಬೊಮ್ಮಯ್ಯ" ಅಥವಾ "ಕಿನ್ನರಿ ಬ್ರಹ್ಮಯ್ಯ" ಎಂದು ಗುರುತಿಸಿಕೊಂಡಿದ್ದರು. ಬಸವಣ್ಣನವರ ಅಂತರಂಗದ ಸಖ ಆಗಿದ್ದರು.

ಒಂದೊಮ್ಮೆ ಇವರ ಪ್ರಾಣಪಕ್ಷಿ ಹಾರಿಹೋದಾಗ ಬಸವಣ್ಣ ತಮ್ಮ ಪ್ರಾಣವನ್ನು ಧಾರೆ ಎರೆದರೆಂಬ ಪ್ರಸಂಗ ಜನಪದರಲ್ಲಿ ಬರುತ್ತದೆ. ಇನ್ನೊಬ್ಬರಿಗೆ ಪ್ರಾಣ ಧಾರೆ ಎರೆಯುವುದು ವೈಜ್ಞಾನಿಕವಾಗಿ ಅಸಾಧ್ಯವಾಗಿದ್ದರೂ ಶರಣರಲ್ಲಿ ವಿಭಿನ್ನತೆಯೇ ಇರಲಿಲ್ಲ. ದೇಹ ಬೇರೆಯಾದರೂ ಅವರಲ್ಲಿಯ ಆತ್ಮ ಒಂದೇ ಆಗಿತ್ತು. ಅಂಗ ಬೇರೆಯಾಗಿದ್ದರೂ ಅವರೊಳಗಣ ಲಿಂಗ ಅಥವಾ ಲಿಂಗಗುಣ ಒಂದೇಯಾಗಿದ್ದು ಅದೇ

ಎಲ್ಲಾ ಅಂಗಗಳ ಒಟ್ಟು ಮೊತ್ತವೇ ಪರಶಿವ ಅಥವಾ ದೇವನಾಗಿದ್ದ. ಹೀಗಾಗಿ ಆತ್ಮ, ಪ್ರಾಣ, ಅಂಗದ ಗುಣಗಳೆಲ್ಲವೂ ಒಂದೇ ಮೌಲ್ಯ ಆಗಿದ್ದವೆಂಬುದಕ್ಕೆ ಇದೊಂದು ಲೆಕ್ಕಾಚಾರದ ಪರಿಕಲ್ಪನೆಯೆಂದು ಒಪ್ಪಿಕೊಳ್ಳಲು ಸಾಧ್ಯವಿದೆ ಎಂದು ತಮ್ಮೊಳಗಿನ ಅರಿವಿನಲ್ಲಿ ಗುರುವನ್ನು ಕಂಡುಕೊಂಡಾಗ ತನ್ನೊಳಗೇ ಅರಿವೆಂಬ ಗುರು. ಗುರುವೆಂಬ ದೇವನಿರುವ ಕುರಿತು ಮನದುಂಬಿ ಬೀಗುತ್ತಾರೆ.

"ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ, ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ ನಿನ್ನನಿತ್ಯ ಕಾಣಾ ರಾಮನಾಥ" ಇಲ್ಲಿ ಬಸವಣ್ಣನವರ ಮಾದರಿಯಲ್ಲಿ ಬ್ರಹ್ಮ ಪದವಿಯನ್ನೊಲ್ಲೆ, ವಿಷ್ಣು ಪದವಿಯನ್ನೊಲ್ಲೆ... ಎಂಬ ವಚನದ ಧೋರಣೆಯಲ್ಲಿ ಬದುಕಿಗೆ ಅಂಟಿಕೊಂಡಿರುವ ಎಲ್ಲ ಐಹಿಕ ಭೋಗಗಳ ಗೊಡವೆ ನನಗೆ ಬೇಡವೇ ಬೇಡ. ಸಿರಿಸಂಪತ್ತು ಬೇಡ ಕೇವಲ ಶರಣರ ಒಳ್ಳೆಯ ನುಡಿಗಳು ಒಂದು ಘಳಿಗೆ ಕೇಳಿದರೆ ನಿನ್ನ ನಿತ್ಯ ನಾನು ಕಾಣುವೆ ಎಂದು ತಮ್ಮ ದೈವವನ್ನು ಕೋರುತ್ತಾರೆ. ಅಧಿಕಾರವೆಂಬ ವ್ಯಸನಕ್ಕೆ ಜೋತುಬಿದ್ದು ತಮ್ಮತನವನ್ನೇ ಒತ್ತೆ ಇಟ್ಟು ಎಲ್ಲ ಬಗೆಯ ನೈತಿಕತೆಯನ್ನು ಬಿಟ್ಟಿರುವ ರಾಜಕೀಯ ನಾಯಕರುಗಳಿಗೆ ಈ ವಚನ ಕಣ್ಣು ತೆರೆಸುತ್ತದೆ. ಸರಳ ಬದುಕಿನ, ಶರಣ ಸಂಸ್ಕೃತಿಯಲ್ಲಿರುವ ನೆಮ್ಮದಿಯನ್ನು ತೋರುತ್ತದೆ.

"ಸತಿಪತಿಗಳಿಂದೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ, ಸತಿಪತಿಗಳಿಂದೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ ಕಾಣಾ ರಾಮನಾಥ" ಎಂಬಲ್ಲಿ ಒಂದರ್ಥದಲ್ಲಿ ಸತಿ-ಪತಿಗಳಿಬ್ಬರೂ ಒಬ್ಬರನ್ನೊಬ್ಬರು ಅರಿತು ನಡೆದರೆ ಅವರ ನುಡಿನಡೆ ಒಂದಾಗಿದ್ದು ಮಾಡುವ ಭಕ್ತಿ ಶಿವನಿಗೆ ಸಲ್ಲಿಕೆಯಾಗುತ್ತದೆ. ಹಾಗಾಗದಿದ್ದರೆ ಅವರು ಮಾಡಿದ ಭಕ್ತಿ ಭಕ್ತಿಯೆನಿಸಿದರೂ ಶಿವನಿಗೆ ಅದು ಸಲ್ಲಿಕೆಯಾಗದು. ಅದು ಅಮೃತದಲ್ಲಿ ವಿಷ ಬೆರೆಸಿದಂತೆ ಆಗುತ್ತದೆಂಬ ಭಾವವನ್ನು ಕಾಣುತ್ತೇವೆ. ಹಾಗೆಯೇ ಇನ್ನೊಂದು ಅರ್ಥದಲ್ಲಿ ಸತಿ ಪತಿ ಅಂದರೆ ಇಲ್ಲಿ ಅಂಗ-ಲಿಂಗ, ಜೀವಾತ್ಮ-ಪರಮಾತ್ಮ, ಕಾಯಕ-ದಾಸೋಹ... ಇವುಗಳೆಲ್ಲವನ್ನು ದಾಸಿಮಯ್ಯನವರು ಸತಿಪತಿಗಳಾಗಿ ಗುರುತಿಸುತ್ತಾರೆ. ಅಂಗ ಲಿಂಗ ಒಂದೇ ಆದಾಗ, ಜೀವಾತ್ಮ ಮತ್ತು ಪರಮಾತ್ಮಗಳಲ್ಲಿ ಸಂಪರ್ಕವೇರ್ಪಟ್ಟಾಗ, ಕಾಯಕದೊಂದಿಗೆ ದಾಸೋಹ ತತ್ವವನ್ನು ನಡೆಯಾಗಿಸಿಕೊಂಡಾಗ ಸತಿಪತಿ ಭಾವ ಒಂದಾಗಿ ಅದೆಲ್ಲವೂ ಶಿವಂಗೆ ಹಿತವಾಗಿ ಅರ್ಪಿತವಾಗಿರುತ್ತದೆ. ಹೀಗೆ ಒಂದಾಗುವ ಭಾವವಿಲ್ಲದೆಡೆ ಮಾಡಿರುವ ಪ್ರಯತ್ನದ ಫಲ ಅಮೃತವಾಗಿದ್ದರೂ ವಿಷ ಬೆರೆಸಿದಂತೆ ಎಂದಿಗೂ ಅದು ಸತ್ಪಾತ್ರಕ್ಕೆ ಸಲ್ಲಿಕೆಯಾಗದೆಂಬ ಭಾವವನ್ನು ಕಾಣಬಹುದು.

ಹೀಗೆ ಜೇಡರ ದಾಸಿಮಯ್ಯನವರು ಜೀವಾತ್ಮ ಮತ್ತು ಪರಮಾತ್ಮರ ಮಧ್ಯೆ ಆಪ್ತ ಭಾವವನ್ನು ಬೆಸೆಯುತ್ತಾರೆ. ಸಂಬಂಧವನ್ನು ತಮ್ಮ ನೇಯ್ಗೆ ಕಾಯಕದಂತೆಯೇ ನೇಯುತ್ತಾರೆ. ನಮ್ಮೊಳಗೇ ಇರುವ ಅರಿವೆಂಬ ಗುರುವನ್ನು ನಮ್ಮೊಂದಿಗೆ ನೇಯುತ್ತಾರೆ. ಇಷ್ಟಲಿಂಗವೆಂಬ ಸಾಕಾರ ಅಂಗದೊಂದಿಗೆ ನಮ್ಮೊಳಗಿನ ಅರಿವೆಂಬ ನಿರಾಕಾರ ಲಿಂಗದೊಂದಿಗೆ ಬೆಸೆಯಿಸುತ್ತಾರೆ. ಕಾಯಕ ಮತ್ತು ದಾಸೋಹಗಳೆರಡನ್ನು ನೇಯ್ದು ಫಲವನ್ನೆಲ್ಲ ಪ್ರಸಾದವಾಗಿಸುತ್ತಾರೆ. ಒಡಸಲುಗೊಂಡವನ ಹಸಿವಿನ ಪರಿಚಯವನ್ನು ದೇವರಿಗೂ ಮಾಡಿಸಿ ಆ ದೇವರ ಕಣ್ಣನ್ನು ತೆರೆಸುತ್ತಾರೆ. ಹಾಗೆಯೇ ವಿವಿಧ ಬಗೆಯ ಅರಿವಿನ ಜ್ಞಾನದ ಹಸಿವುಳ್ಳವರ ಜ್ಞಾನದ ದಾಹಕ್ಕೆ ಅರಿವಿನ ಪ್ರಸಾದವನ್ನುಣಬಡಿಸಿರುವ ಮಹಾನ್ ಶರಣನೀತ. ಇತರರ ಹಸಿವಿನ ಕುರಿತೇ ಈತನ ಒಡಲಾಳದಾಳವು ಏನೆಂಬುದನ್ನು ಇವರದೇ ವಚನಗಳ ಮೂಲಕ ಅರಿಯಬಹುದಾಗಿದೆ. ಉಪಮಿಸಬಾರದ ಉಪಮಾತೀತರಾದ ಇಂಥ ಮಹಾನ್ ಶರಣನನ್ನು ನೆನೆನೆನೆದು ನುಡಿನುಡಿದು ಅವರೆಲ್ಲವನ್ನು ನಡೆಯಾಗಿಸಿಕೊಳ್ಳುವತ್ತ ಇಂದು ನಾವುಗಳೆಲ್ಲ ಚಿಂತಿಸಬೇಕಾಗಿದೆ.

□

ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯಾ,
ಸಿದ್ಧವ ಲಿಂಗಕ್ಕೆ ಕೊಟ್ಟು ಸಿದ್ಧವಾಯಿತ್ತೆಂಬೆನಯ್ಯಾ,
ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯಾ,
ಗುರುಲಿಂಗಜಂಗಮವ ಏಕತ್ರಯವಾಗಿ ಕಾಣಲಱಿಯದಿದ್ದಡೆ
ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತೈದಾವೆ !
ತನುಮನಧನವ ನಿವೇದಿಸಲಱಿಯೆನಾಗಿ
ಕೂಡಲಸಂಗಮದೇವ, ಒಲಿ ಎಂದಡೆಂತೊಲಿವ ?

- ಬಸವಣ್ಣ

# ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು

**ಪ್ರೊ. ಮೊರಬದ ಮಲ್ಲಿಕಾರ್ಜುನ**

ಅಲ್ಲಮಪ್ರಭುಗಳು ಕನ್ನಡನಾಡು ಕಂಡ ಒಬ್ಬ ಅಪೂರ್ವ ದಾರ್ಶನಿಕರು. ಅವರು ತಮ್ಮ ಜ್ಞಾನದೀವಿಗೆಯಂತಹ ವಚನಗಳ ಮೂಲಕ ಹನ್ನೆರಡನೆಯ ಶತಮಾನದ ಶರಣ ಚಳವಳಿಗೆ ಒಂದು ಹೊಸ ಬೆಳಕನ್ನು ನೀಡಿದರು. ಅವರ ವಚನಗಳು ಅಂದಿಗೆ ಮಾತ್ರವಲ್ಲ, ಇಂದಿಗೂ ಎಂದೆಂದಿಗೂ ಎಲ್ಲರಿಗೂ ಮಾರ್ಗದರ್ಶಕ ಮಾತುಗಳು ಎಂಬಂತಿವೆ.

ವರ್ತಮಾನದ ಪ್ರಕ್ಷುಬ್ಧತೆಯನ್ನು ಕಂಡಾಗ ಅಲ್ಲಮಪ್ರಭುಗಳ ಒಂದು ವಚನ ಮತ್ತೆ ಮತ್ತೆ ನೆನಪಾಗುತ್ತದೆ. ಅವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ:

> ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು
> ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು
> ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕು
> ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು
> ಗುಹೇಶ್ವರನೆಂಬ ಲಿಂಗ ತಾನಾಗಿರಬೇಕು

ಪರಿಸರ ಮತ್ತು ಬದುಕು ತನ್ನ ಸಮತೋಲನವನ್ನು ಕಳೆದುಕೊಳ್ಳುತ್ತಿರುವ ದುರ್ಭರ ಸಂದರ್ಭದಲ್ಲಿ ನಾವಿದ್ದೇವೆ. ಬಿರುಬಿಸಿಲು, ಪ್ರವಾಹ, ಬಿರುಗಾಳಿ, ಭಯಂಕರ ಚಳಿ, ಹಿಮಪಾತ, ಭೂಕಂಪ, ಸುನಾಮಿ, ಕಾಳ್ಗಿಚ್ಚು ಇವೆಲ್ಲವೂ ಒಂದಿಲ್ಲೊಂದು ಬಗೆಯಲ್ಲಿ ನಮ್ಮನ್ನು ಬಾಧಿಸುತ್ತಿವೆ. ಇದು ಪಂಚಭೂತಗಳ ವ್ಯತ್ಯಸ್ತ ಸ್ಥಿತಿಯ ಪರಿಣಾಮ. ಅಗ್ನಿ, ಜಲ, ವಾಯು, ಆಕಾಶ, ಭೂಮಿ ಈ ಪಂಚಭೂತಗಳು ನಮ್ಮ ಬದುಕಿಗಾಧಾರ. ಒಂದೊಂದೂ ಪ್ರಬಲ, ಪ್ರಚಂಡ. ಸಮತೋಲನದಿಂದಿದ್ದಾಗ ಬದುಕಿಗೆ ಆಧಾರವಾಗಿರುವ ಈ ಪಂಚಭೂತಗಳು ವ್ಯತ್ಯಸ್ತ ಸ್ಥಿತಿಯಲ್ಲಿ ಇಡೀ ವಿಶ್ವವನ್ನೇ ಅಲ್ಲೋಲಕಲ್ಲೋಲಗೊಳಿಸುತ್ತಿವೆ. ಆದರೆ ಒಂದರ ಬಾಧೆಗೊಳಗಾದಾಗ ಇನ್ನೊಂದರಿಂದ ನಾವು ರಕ್ಷಣೆ ಪಡೆದುಕೊಳ್ಳಬಹುದು. ಪ್ರಕೃತಿಯೆ ಸ್ವರಕ್ಷಣೆಯ ತಂತ್ರದ ಪಾಠಗಳನ್ನು ಹೇಳಿಕೊಟ್ಟಿದೆ ಎಂಬುದನ್ನು ಅಲ್ಲಮಪ್ರಭುಗಳು ಈ ವಚನದಲ್ಲಿ ಸೂಕ್ಷ್ಮವಾಗಿ ಧ್ವನಿಸಿದ್ದಾರೆ.

ಅಗ್ನಿ ಭಯಂಕರವಾದ ರೂಪಧರಿಸಿ ಕೆಂಡದ ಮಳೆ ಕರೆಯತೊಡಗಿದರೆ ಬದುಕು ಬೀಭತ್ಸವಾಗುತ್ತದೆ. ಆದರೂ ಭಯಪಡಬೇಕಾಗಿಲ್ಲ. ಜಲಕ್ಕೆ ಅಗ್ನಿಯನ್ನು ತಣಿಸುವ

ಶಕ್ತಿ ಇದೆ. ವಾಯು ಮೋಡಗಳಿಂದಾಗುವ ಜಲಪ್ರಳಯವನ್ನು ನಿಯಂತ್ರಿಸಬಲ್ಲುದು. ಆಕಾಶ ಭೂಕಂಪನದಂತಹ ಮಹಾಪ್ರಳಯವನ್ನೂ ಮೀರಿ ಯಥಾಸ್ಥಿತಿಯಲ್ಲಿ ಇರಬಲ್ಲುದು. ಇನ್ನು, ಇಡೀ ಸೃಷ್ಟಿಯೇ ನಾಶವಾಗುತ್ತಿದೆ ಎಂದಾದರೆ ನಾನು, ನನ್ನ ದೇಹ ಎಂಬ ಭಾವಕ್ಕೆ ಎಲ್ಲಿದೆ ಅವಕಾಶ? ಆಗ ಸೃಷ್ಟಿಕರ್ತನಾದ ಗುಹೇಶ್ವರನೇ ನಾನು ಎಂಬ ಅವಿನಾಭಾವ ಜಾಗರವಾದರೆ ಎಲ್ಲ ಬಾಧೆಗಳಿಂದಲೂ ಅತೀತನಾಗಲು ಸಾಧ್ಯ.

ಹೀಗೆ ಅಲ್ಲಮಪ್ರಭುಗಳು ಪ್ರಾಕೃತಿಕ ವಿವರಗಳ ಮೂಲಕವೇ ಪ್ರಾಕೃತಿಕ ಪ್ರಕ್ಷುಬ್ಧತೆಯನ್ನು ಮೀರುವ, ಸಹಿಸುವ ಗಟ್ಟಿತನವನ್ನು ತಂದುಕೊಡುವ ಪ್ರಯತ್ನ ಮಾಡಿದ್ದಾರೆ. ಆದರೆ ವಚನ ಇಷ್ಟನ್ನು ಮಾತ್ರ ಹೇಳುತ್ತಿಲ್ಲ. ಮೂಲತಃ ಈ ವಚನ ಅಲ್ಲಮಪ್ರಭುದೇವರ ಷಟ್ಸ್ಥಲದ ವಚನಗಳಲ್ಲಿ ಶರಣಸ್ಥಲದಲ್ಲಿ ಬರುವ ವಚನ. ಶರಣನಾದವನು ಹೇಗಿರಬೇಕು ಎಂಬುದನ್ನು ಈ ವಚನ ನಿರ್ದೇಶಿಸುತ್ತದೆ.

"ಆಧ್ಯಾತ್ಮಿಕವಾಗಿ ಶರಣ ಸಿದ್ಧಿಯ ಶಿಖರದಲ್ಲಿ ನಿಂತವನು; ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ ಭಕ್ತಿಗಳನ್ನು ದಾಟಿ ಆನಂದಭಕ್ತಿಯಲ್ಲಿ ಲೀಲಾರೂಪಿಯಾದವನು; ದೇಹವನ್ನು ಧರಿಸಿದ್ದರೂ ಆತ ನಿರ್ದೇಹಿ; ನಡೆಯುತ್ತಿದ್ದರೂ ಆತ ನಿರ್ಗಮನಿ; ನುಡಿಯುತ್ತಿದ್ದರೂ ನಿಶ್ಶಬ್ದಿ; ವ್ಯಕ್ತಿಯಾಗಿದ್ದರೂ ಜಗತ್ತನ್ನೆಲ್ಲಾ ವ್ಯಾಪಿಸಿದ್ದಾನೆ; ಆದರೂ ಜಗತ್ತಿಗೆ ಅತೀತನಾಗಿದ್ದಾನೆ" (ಡಾ. ಎಚ್. ತಿಪ್ಪೇರುದ್ರಸ್ವಾಮಿ, ಬಸವೇಶ್ವರ ವಚನ ದೀಪಿಕೆ, ಪುಟ 475). ಇಂತಹ ಶರಣನ ಶಾಂತ, ಅಬಾಧಿತ, ಅಸಂಗ ಸ್ಥಿತಿಯನ್ನು ಪ್ರಸ್ತುತ ವಚನದಲ್ಲಿ ನಾವು ಕಾಣಬಹುದಾಗಿದೆ ಎಂಬುದನ್ನು ಶ್ರೀ ಸಿದ್ಧೇಶ್ವರ ಸ್ವಾಮಿಗಳು 'ಅಲ್ಲಮಪ್ರಭುದೇವರ ವಚನ-ನಿರ್ವಚನ' ಕೃತಿಯಲ್ಲಿ ವಿವರಿಸಿದ್ದಾರೆ.

"ನಿಷ್ಕಲದೇವನು ಸದಾ ಅಚಲ ಹಾಗೂ ಶಾಂತ. ಆ ದೇವನೇ ತಾನು- ಎಂದು ಅನುಭವತಹ ಅರಿತವ ಶರಣ. ಅವನು ಅಚಲ ಮತ್ತು ಶಾಂತ. ಅವನ ಘನ ಶಾಂತತೆಯನ್ನು ಕದಡುವ ಯಾವ ಶಕ್ತಿಯೂ ವಿಶ್ವದೊಳಗಿಲ್ಲ. ಕೆಂಡದ ಮಳೆಗರೆದರೆ ಆತ ಉದಕವಾಗಿ ನಿಲ್ಲುತ್ತಾನೆ. ಜಲಪ್ರಳಯವಾದರೆ ವಾಯುವಿನಂತೆ ಸುಳಿಯುತ್ತಾನೆ. ಎಲ್ಲವನ್ನೂ ನಾಶಮಾಡುವ ಮಹಾಪ್ರಳಯವಾದರೆ ಆತ ಆಕಾಶದಂತೆ ಬಯಲು ಬಯಲಾಗಿಯೇ ಉಳಿಯುತ್ತಾನೆ. ಒಂದು ವೇಳೆ ಪ್ರಾಕೃತಿಕ ವಿಶ್ವವೆಲ್ಲಾ ಅಳಿದು ಹೋದರೆ ತಾನೇ ತಾನಾಗಿ ಗುಹೇಶ್ವರಲಿಂಗವಾಗಿ ವಿರಾಜಿಸುತ್ತಾನೆ.

"ಇನ್ನೊಂದು ಬಗೆಯಲ್ಲಿ ಹೇಳುವುದಾದರೆ, ಅವನ ಮೇಲೆ ಲೋಕವೆಲ್ಲ ದ್ವೇಷದ ಮಳೆಯನ್ನೇ ಸುರಿಸಲಿ, ಸಂಸಾರವೆಂಬ ಪ್ರಚಂಡ ಮಹಾಪೂರವೇ ಹರಿದು ಬರಲಿ, ಭಯಂಕರವಾದ ಮೃತ್ಯುದೇವತೆ ತನ್ನ ದೇಹಾದಿಗಳನ್ನೆಲ್ಲ ಕಬಳಿಸಲಿ, ಶರಣನು ಶಾಂತನಾಗಿಯೇ ಇರುತ್ತಾನೆ. ವಿಶ್ವಪ್ರಪಂಚವೆಲ್ಲ ಅಳಿದುಹೋದಾಗಲೂ ಕೂಡ ಆತ ತನ್ನ ಜೀವಭಾವವ ತೊರೆದು ನಿಷ್ಕಲ ದೇವನಲ್ಲಿ ಬೆರೆತು ಅವನೇ ತಾನಾಗಿ

ಉಳಿಯುತ್ತಾನೆ" (ಅಲ್ಲಮಪ್ರಭುದೇವರ ವಚನ-ನಿರ್ವಚನ (ವಚನ 556, ಪು. 859)

ಹದಿನೈದನೆಯ ಶತಮಾನದಲ್ಲಿ ಮಹಾಲಿಂಗದೇವನು (ಕ್ರಿ.ಶ. ಸು. 1425) ಅಲ್ಲಮಪ್ರಭುದೇವರ ವಚನಗಳಿಗೆ 'ಸುಲಲಿತ ವಾಕ್ಯಾಮೃತದಿಂದ' ಟೀಕೆಯನ್ನು ಬರೆದಿದ್ದಾನೆ. ಅವನು ಪ್ರಸ್ತುತ ವಚನವನ್ನು ಹೀಗೆ ವಿವರಿಸುತ್ತಾನೆ.

"ಮಹಾಜ್ಞಾನ ಪ್ರಕಾಶವಾಗಿ ತನ್ನ ತಾನರಿದ ಶರಣ ಕಾಲಾಗ್ನಿ ಪ್ರಳಯ ಮೇರೆದಪ್ಪಿ ಬಂದೊಡೆ ಅಲ್ಲಿ 'ಅಳಿಯದೆ ಪರಮಾನಂದರಸಮೂರ್ತಿಯಾಗಿರಬೇಕೆಂಬುದೀಗ - ಕೆಂಡದ ಮಳೆ ಕರೆವಲ್ಲಿ ಉದಕದಂತಿರಬೇಕೆಂಬ ಶಬ್ದಕ್ಕರ್ಥ. ಆ ಶರಣ ಜಲಪ್ರಳಯ ಮೇರೆದಪ್ಪಿ ಬಂದೊಡೆಯೂ ಅಲ್ಲಿ ಪರಿಪೂರ್ಣದನುಭಾವ ಪ್ರಾಣರೂಪವಾಗಿರ ಬೇಕೆಂಬುದೀಗ - ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕೆಂಬ ಶಬ್ದಕ್ಕರ್ಥ. ಅನಂತಕೋಟಿ ಬ್ರಹ್ಮಾಂಡಗಳೆಲ್ಲವೂ ಒಂದು ಬಾರಿ ಮಹಾತತ್ವದಲ್ಲಿ ಲಯವನೈದು ತ್ತಿರಲು ಆ ಕಾಲದಲ್ಲಿ ಆ ಶರಣನು ಮಹದಾಕಾಶಸ್ವರೂಪನಾಗಿ ಎಲ್ಲವನು ತಾನೇ ಒಳಕೊಂಡಿರಬೇಕೆಂಬುದೀಗ - ಮಹಾಪ್ರಳಯವಾದಲ್ಲಿ ಆಕಾಶದಂತಿರಬೇಕೆಂಬ ಶಬ್ದಕ್ಕರ್ಥ. ಜಗತ್ತೆಂಬ ಸಚರಾಚರವು ಅಳಿದಲ್ಲಿ ತಾನೆ ಶಿವನೆಂಬ ಮೂಲಾಹಂಕಾರವ ವಿಚ್ಛೇದನವ ಮಾಡಬೇಕೆಂಬುದೀಗ - ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕೆಂಬ ಶಬ್ದಕ್ಕರ್ಥ. ಇನಿತಿನಿತು ಗುಣವುಳ್ಳ ಶಿವಶರಣನು ತಾನೇ ಶಿವಾಗಿಹನೆಂಬುದೀಗ - ಗುಹೇಶ್ವರಲಿಂಗ ತಾನಾಗಿರಬೇಕೆಂಬ ಶಬ್ದಕ್ಕರ್ಥ" (ಅಲ್ಲಮಪ್ರಭುದೇವರ ಟೀಕಿನ ವಚನಗಳು, ಸಂ. ವಿದ್ವಾನ್ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು, ವಚನ 556, ಪು. 334)

ಡಾ. ಎಲ್. ಬಸವರಾಜು ಅವರು ಮಹಾಲಿಂಗದೇವನ ಟೀಕನ್ನು ಪ್ರಸ್ತಾಪಿಸುತ್ತಲೇ ತಮ್ಮ 'ಸಹಸ್ಪಂದನ'ದಲ್ಲಿ ಈ ವಚನದಲ್ಲಿ ವ್ಯಕ್ತವಾಗಿರುವ ಅಲ್ಲಮಪ್ರಭುದೇವರ ಪ್ರಸ್ಫುಟ ಭಾವದೀಪ್ತಿಯನ್ನು ವ್ಯಾಖ್ಯಾನಿಸಿದ್ದಾರೆ.

"ತನ್ನ ಸುತ್ತೆಲ್ಲವೂ ಕೆಟ್ಟಾಗ ತಾನೇನು ಮಾಡಬೇಕೆಂಬುದು ಒಂದು ಸಮಸ್ಯೆ. ಅದಕ್ಕೆ ಪ್ರಭುದೇವರು – ತಾನೂ ಕೆಡಬೇಕೆಂದಾಗಲಿ ದೂರ ಓಡಿಹೋಗಬೇಕೆಂದಾಗಲಿ ಅಂಗೀಕಾರದ ಅಥವಾ ಪಲಾಯನದ ಮಾರ್ಗವನ್ನು ಹಿಡಿಯಬೇಕೆನ್ನದೆ - ಅಂಥ ವಿಪನ್ನಾವಸ್ಥೆಯಲ್ಲಿ ವ್ಯಕ್ತಿ ತನ್ನ ದರ್ಶನ ತನ್ನ ಅನುಭವಕ್ಕೆ ಅನುಗುಣವಾದ ರೀತಿಯಲ್ಲೇ ಆ ದೂಷಿತ ವಾತಾವರಣವನ್ನು ಶಮನ ಮಾಡಿ ಉಪದ್ರವರಹಿತಗೊಳಿಸಿ ಸ್ವಯಂಪ್ರಕಾಶದಲ್ಲಿರಬೇಕು ಎನ್ನುತ್ತ ಸಾವು ಬಂದಾಗ ದೇಹವನ್ನು ಬಿಟ್ಟು ಶಿವನಲ್ಲಿ ಒಂದಾಗಬೇಕೆನ್ನುತ್ತಿರುವರು. ಪ್ರಭು ಹೇಡಿತನದಿಂದ ಕೈಗೊಳ್ಳುವ ಪಲಾಯನವಾದ ವನ್ನಾಗಲಿ ಶೌರ್ಯದ ಹೆಸರಿನಲ್ಲಿ ಕೈಗೊಳ್ಳುವ ಕ್ರೌರ್ಯವನ್ನಾಗಲಿ ಪ್ರಭುದೇವರು

ವಿರೋಧಿಸುತ್ತಾರೆ - ಕೆಂಡಕ್ಕೆ ಚಿಮುಕಿಸುವ ನೀರಿನಂತೆ, ಮುಸುಕಿದ ಕಾರ್ಮೋಡಕ್ಕೆ ಬೀಸುವ ಗಾಳಿಯಂತೆ, ಭೂಮಿ ಕಂಪಿಸಿದಾಗ ಆಕಾಶದಂತೆ ತಾನಿರಬೇಕೆನ್ನುತ್ತಾರೆ. ಇದರಿಂದ ಅನಾಹುತ ಶಮನವಾದೀತು. ಆತ್ಮವೂ ಅನಾತ್ಮನಾಗದೆ ಪರಮಾತ್ಮನೇ ಆಗಬೇಕು.

"ಕೆಂಡದ ಮಳೆ-ಜಲಪ್ರಳಯ-ಮಹಾಪ್ರಳಯ-ಜಗತ್ ಪ್ರಳಯ ಎಲ್ಲವೂ ಒಳಗಿನ ಆತ್ಮಕ್ಕೆ ಹೊರಗಿಂದ ಬರುವ ಅನಾತ್ಮದ ದಾಳಿಗಳೇ ಆಗಿವೆ! ಅವನ್ನೆಲ್ಲಾ ಬಲವಾದ ಅಂತರಾಳದವನೇ ನಿಭಾಯಿಸಿ - ಮಂಗಳಾಂತವಾಗಿ ಪರಮಾತ್ಮನೇ ತಾನಾಗಬಲ್ಲ- ಎಂಬುದು ಈ ವಚನದ ಆಶ್ವಾಸನೆ! (ಪ್ರಭುದೇವರ ಷಟ್ಸ್ಥಲದ ವಚನಗಳು, ಸಂ. ಡಾ. ಎಲ್. ಬಸವರಾಜು, ವಚನ 556, ಪು. 618)

ಹೀಗೆ ಪ್ರಸ್ತುತ ವಚನವು ಪ್ರಾಕೃತಿಕ ವಿವರಗಳ ಮೂಲಕ ಶರಣನ ಆಧ್ಯಾತ್ಮಿಕ ನೆಲೆಯನ್ನು ಸುಸ್ಪಷ್ಟವಾಗಿ ಅಭಿವ್ಯಕ್ತಿಸಿದೆ. ಶರಣ ಹೇಗೆ ಇತರರಿಂದ ಭಿನ್ನ ಮತ್ತು ಗಟ್ಟಿ ಎಂಬುದು ಇಲ್ಲಿ ನಿಚ್ಚಳವಾಗಿ ಬಿಂಬಿತವಾಗಿದೆ. ಆದರೆ, ವಚನದ ಅರ್ಥವ್ಯಾಪ್ತಿ ಇಷ್ಟಕ್ಕೇ ವಿರಮಿಸುವುದಿಲ್ಲ. ವಚನದಲ್ಲಿ ಬರುವ 'ಕೆಂಡದ ಮಳೆ' ಇಂದು ಕೇವಲ ಪ್ರಾಕೃತಿಕ ಕ್ರಿಯೆಯಾಗಿ ಉಳಿದಿಲ್ಲ. ಬದುಕಿನ ಇತರ ಕ್ರಿಯೆಗಳಲ್ಲಿಯೂ 'ಬೆಂಕಿ' ಕಾಣಿಸಿಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿಯೂ ಪ್ರಸ್ತುತ ವಚನವನ್ನು ಗಮನಿಸಬೇಕಾದ ಅಗತ್ಯವಿದೆ.

ಬದುಕಿನ ಸಂಕಷ್ಟಗಳ ನಡುವೆ ನಮ್ಮ ಬಾಳುವೆ ಹೇಗಿದ್ದರೆ ಚೆನ್ನ ಎಂಬ ಮನುಷ್ಯ ಜೀವನದ ಪ್ರಾಥಮಿಕ ಪಾಠವನ್ನು ಅಲ್ಲಮಪ್ರಭುಗಳು ಇಲ್ಲಿ ಅಭಿವ್ಯಕ್ತಿಸಿದ್ದಾರೆ.

ಮನುಷ್ಯನನ್ನು ಉಳಿದ ಜೀವಸಂಕುಲದಿಂದ ಭಿನ್ನವಾಗಿಸಿದ್ದು ಮತ್ತು ಉನ್ನತವಾಗಿಸಿದ್ದು ಮಾತು. ಶರಣರ ಆಧ್ಯಾತ್ಮಿಕ ಬದುಕಿನಲ್ಲಿ ಮಾತಿಗೆ ಹಿರಿದಾದ ಸ್ಥಾನವಿದೆ. ಮಾತನ್ನು ಅಲ್ಲಮಪ್ರಭುಗಳು ಜ್ಯೋತಿರ್ಲಿಂಗ ಎಂದು ಕರೆದಿದ್ದಾರೆ. ಆದರೆ, ಸಾಮಾನ್ಯರ ಬದುಕಿನಲ್ಲಿ ಮಾತು ಜ್ಯೋತಿರ್ಲಿಂಗವಾಗುವುದಕ್ಕಿಂತ ಕೆಂಡದುಂಡೆಯಾಗುವ ಸಂದರ್ಭಗಳೇ ಹೆಚ್ಚು. ಒಬ್ಬರು ಇನ್ನೊಬ್ಬರ ಮೇಲೆ ಬೈಗುಳದ ಕೆಂಡದ ಮಳೆ ಸುರಿಸುವಾಗ ಅದನ್ನು ಕೇಳಿಸಿಕೊಳ್ಳುವ ಮನಸ್ಸು ಹೇಗೆ ಪ್ರತಿಕ್ರಿಯಿಸಬೇಕು ಎಂಬ ಕಿವಿಮಾತನ್ನು ಅಲ್ಲಮಪ್ರಭುಗಳು ಇಲ್ಲಿ ಹೇಳುತ್ತಿದ್ದಾರೇನೋ ಎನಿಸುತ್ತದೆ. ಇದು ಕೇವಲ ಕಲ್ಪನೆಯೇನೂ ಆಗಬೇಕಾಗಿಲ್ಲ. ಅಲ್ಲಮರ ಈ ದರ್ಶನಕ್ಕೆ ಗೌತಮ ಬುದ್ಧನ ಬದುಕಿನ ನಿದರ್ಶನವೊಂದಿದೆ.

ಒಂದು ದಿನ ಗೌತಮ ಬುದ್ಧ ಮತ್ತು ಅವರ ಶಿಷ್ಯ ಭಿಕ್ಷೆಗಾಗಿ ಒಂದು ಮನೆಗೆ ಬರುತ್ತಾರೆ. ಮನೆಯೊಡತಿ ಭಿಕ್ಷೆ ನೀಡದೆ 'ಏನಾಗಿದೆ ನಿಮಗೆ? ಭಿಕ್ಷೆ ಬೇಡುತ್ತೀರಲ್ಲ, ದುಡಿದು ತಿನ್ನಬಾರದೆ?' ಎಂದು ನಿಂದಿಸುತ್ತಾಳೆ. ಇನ್ನೂ ಕಠಿಣವಾದ ಮಾತುಗಳಿಂದ

ಝುಂಕಿಸುತ್ತಾಳೆ. ಬುದ್ಧ ಆ ಮಾತು ಕೇಳಿಸಿಕೊಂಡೂ ಪ್ರಶಾಂತಮೂರ್ತಿಯಾಗಿಯೆ ಇರುತ್ತಾರೆ. ಶಿಷ್ಯ ಮಾತ್ರ ಕೆರಳುತ್ತಾನೆ. ಮುಂದೆ ಸಾಗುತ್ತಾರೆ. ದಾರಿಯುದ್ದಕ್ಕೂ ಶಿಷ್ಯ 'ಗುರುಗಳೆ, ನೀವು ಆ ಮಾತುಗಳನ್ನು ಕೇಳಿಸಿಕೊಂಡೂ ಸುಮ್ಮನಿರಬಾರದಿತ್ತು' ಎಂದು ಹಪಹಪಿಸುತ್ತಲೆ ಇರುತ್ತಾನೆ. ಆಗ ಗೌತಮ ಬುದ್ಧರು ತಮ್ಮ ಕೈಯ ಕಮಂಡಲು ತೋರಿಸಿ 'ಶಿಷ್ಯ, ಈ ಕಮಂಡಲು ಯಾರದ್ದು?' ಎಂದು ಕೇಳುತ್ತಾರೆ. ಶಿಷ್ಯ 'ಗುರುಗಳೇ ಅದು ನಿಮ್ಮದು' ಎನ್ನುತ್ತಾನೆ. ಬುದ್ಧ 'ಈ ಕಮಂಡಲು ನನಗೆ ಬೇಡ, ನೀನು ತೆಗೆದುಕೊ' ಎಂದು ಶಿಷ್ಯನಿಗೆ ಕೊಡುತ್ತಾರೆ. ಪ್ರಯಾಣ ಮುಂದುವರೆಯುತ್ತದೆ. ಶಿಷ್ಯ ಮತ್ತೆ ಮತ್ತೆ ಆ ಹೆಂಗಸಿನ ಮಾತಿನ ಕೆಂಡದುಂಡೆಗಳ ಬಗ್ಗೆ ಪ್ರಸ್ತಾಪಿಸುತ್ತಲೆ ಇರುತ್ತಾನೆ. ಸಂಜೆಯ ವಿಶ್ರಾಂತಿ ಸಮಯದಲ್ಲಿ ಬುದ್ಧ ಶಿಷ್ಯನನ್ನು ಕೇಳುತ್ತಾರೆ 'ಶಿಷ್ಯಾ, ಆ ಕಮಂಡಲು ಯಾರದ್ದು?' ಶಿಷ್ಯ ಹೇಳುತ್ತಾನೆ 'ಗುರುಗಳೆ, ನನ್ನದು'. ಗುರುಗಳು ಕೇಳುತ್ತಾರೆ 'ಮಧ್ಯಾಹ್ನ ನಿಮ್ಮದು ಎಂದೆ, ಈಗ ನನ್ನದು ಎನ್ನುತ್ತೀಯಲ್ಲ?' ಶಿಷ್ಯ ಹೇಳುತ್ತಾನೆ 'ಮಧ್ಯಾಹ್ನ ಈ ಕಮಂಡಲುವನ್ನು ನಿಮ್ಮಿಂದ ನಾ ಪಡೆದೆ. ಆದ್ದರಿಂದ ನನ್ನದು.' ಬುದ್ಧ ಹೇಳುತ್ತಾರೆ 'ಮಾತಿನ ಕೆಂಡವೂ ಕೂಡ ಅಷ್ಟೇ. ಅದನ್ನು ನಮ್ಮದು ಎಂದು ಸ್ವೀಕರಿಸಿದರೆ ಮಾತ್ರ ಅದು ನಮ್ಮನ್ನು ಸುಡುತ್ತದೆ. ಇಲ್ಲವಾದರೆ ಅದರಿಂದ ನಮಗೆ ಬಾಧೆಯಿಲ್ಲ.' ಇದನ್ನೇ ಅಲ್ಲಮ 'ಕೆಂಡದ ಮಳೆ ಕರೆಯುವಲ್ಲಿ ಉದಕವಾಗಿರಬೇಕು' ಎಂದಿದ್ದಾರೆ.

ಬುದ್ಧ, ಏಸು, ಪೈಗಂಬರ್, ಬಸವಣ್ಣ, ಗಾಂಧಿ ಮುಂತಾದವರು 'ಉದಕ'ದಂತಿದ್ದರು. ಎಂತಹ 'ಕೆಂಡದ ಮಳೆ'ಯನ್ನೂ ಸಹಿಸಿಕೊಂಡು ಸಂತರಾದರು, ಶರಣರಾದರು. ಇಂದೂ ಅದು ನಿಜವಾಗಬೇಕು. ವಾಗ್‌ಯುದ್ಧ, ಶಸ್ತ್ರಾಸ್ತ್ರಯುದ್ಧ, ಭಯೋತ್ಪಾದಕ ಕೃತ್ಯಗಳು ನಿಲ್ಲಬೇಕು. ಇಲ್ಲವಾದರೆ ಶರಣರ ಮಾತಿಗೆ, ವಚನಕ್ಕೆ ಏನು ಬೆಲೆ?

ಉಳಿದಂತೆ ಏನೇ ಇರಲಿ, ಅಲ್ಲಮಪ್ರಭುದೇವರ 'ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು' ಎಂಬ ಸಾಲು ಸ್ವಾತ್ಮ ಸಾಂತ್ವನದ ಧ್ವನಿಯಾಗಿ ಇಂದೂ ಕೂಡ ಮುಖ್ಯ ಮಾತೇ ಆಗಿದೆ. ಉಳಿದವರ ವಿಷಯ ಏನಾದರಾಗಲಿ, ನಮ್ಮ ವೈಯಕ್ತಿಕ ಬದುಕಿನಲ್ಲಿ ಸಂಕಷ್ಟಗಳು ಎದುರಾದಾಗ ಅಲ್ಲಮರ ಈ ಮಾತು ನೆನಪಾದರೆ ಎಂತಹ ತಂಪನ್ನು ನೀಡುವುದಲ್ಲವೆ? ಕೆಂಡಕ್ಕೆ, ಪ್ರತಿ ಕೆಂಡವಾಗಿ ಉರಿದು ಬೂದಿಯಾಗುವುದಕ್ಕಿಂತ, ಕೆಂಡವನ್ನಾರಿಸುವ ನೀರಿನಂತೆ ತಂಪಾಗಿ ಬಾಳುವುದು ಹಿತಕರವಲ್ಲವೆ? ಪ್ರಕೃತಿಯ ಈ ಗುಣ ಮನುಷ್ಯರದೂ ಆಗಬೇಕೆಂಬ ಅಲ್ಲಮಪ್ರಭುದೇವರ ಹಂಬಲ ಅದೆಂತಹ ಉದಾತ್ತ ಉದ್ದೇಶವನ್ನು ಹೊಂದಿದೆಯಲ್ಲವೆ!

□

# ಶರಣ ಕುಂಬಾರಣ್ಣನ ಸರಸ ದಾಂಪತ್ಯ

**ಡಾ. ಕೆ.ಎಸ್. ಮಲ್ಲೇಶ್**

ಮೂಡಣ ದಿಕ್ಕಲಿ ಹೊಂಬಣ್ಣದೋಕುಳಿ. ರವಿ ಮೆಲ್ಲಮೆಲ್ಲಗೆ ಮೇಲೇರಿದ್ದ. ಹಕ್ಕಿಗಳಿಂಚರ, ಕಾಗೆಯ ಕಾ ಕಾ, ಕೋಳಿಯ ಕೊಕ್ಕೋಕ್ಕೋ. ಜಗವನೆಬ್ಬಿಸಲು ಏರುದನಿಯ ಕಾಗುಣಿತ. ಕುಂಬಾರಣ್ಣನೂ ನಿದ್ದೆ ತಿಳಿದೆದ್ದ. ಹೊರಗೆ ಬಂದು ಕಣ್ಣಾಡಿಸಿದ. ಮಡಕೆ ಕುಡಿಕೆಗಳು ಹೊತ್ತಾರೆಯ ಬೆಳಕಿನಲ್ಲಿ ಲಕಲಕ ಹೊಳೆಯುತ್ತಿದ್ದವು. ಅವಕ್ಕೂ ಮಣ್ಣಿಗೂ ಸೂರ್ಯನಿಗೂ ನಮಿಸಿದ. "ಜಳಕ ಮಾಡೋ ಭಾರ್ಗವ" ಮಡದಿಯ ಕರೆಗೆ ಸೋಜಿಗಗೊಂಡ. "ನಿನಗೆ ನೀನೆ ನಮಸ್ಕಾರ ಮಾಡ್ಕೋತಿ?" ಒಳಸುಂಟಿಯಂತೆ ಮತ್ತೊಂದು ಒಗಟಿನ ಮಾತು. ಕುಂಬಾರಣ್ಣನಿಗೆ ಅರ್ಥವಾಗಲಿಲ್ಲ. ನೋಟದಲ್ಲೇ ಪ್ರಶ್ನೆ ಬೀರಿದ. ತುಟಿಯಂಚಿನಲ್ಲಿ ನಗು ಬೀರುತ್ತ ಮಡದಿ ಇಂತೆಂದಳು: "ಮೊನ್ನೆ ಶಾನುಭೋಗ ಅಯ್ಯನೋರು ಈ ಕಡೆ ಹಾಸಿ ಹೊಂಟಿದ್ರು. "ಭಾರ್ಗವ ಪಟ್ಟಣಕ್ ಹೋಗ್ಯಾನೇನಮ್ಮಾ?" ಅಂತ ಕೇಳಿದ್ರು. ಹೂಂ ಅಂತ ಹೇಳಿ ನಾನು "ಅಯ್ಯನೋರ, ಐರಾಣಿ ಒಡೆಯನಿಗೆ ಹಂಗೂ ಅಂತಾರೇನು?" ಅಂದೆ.

"ಹೂಂ, ನಿನ್ನ ಒಡೆಯ ಅಂದ್ರೆ ಯಾರು ಅನ್ಕೊಂಡಿದ್ದೀ? ಮಡಕೆ ಸೃಷ್ಟಿ ಮಾಡೋ ಬ್ರಹ್ಮ ಅವನು, ಅದಕ್ಕೆ ಆ ಹೆಸರು, ಆ ಘುಟಬ್ರಹ್ಮನಿಗೆ ಮೃತ್ಕರ, ಕುಂಭಾಕಾರಕ, ಘುಟಕಾರ, ಚಕ್ರಜೀವಕ, ಚಾಕ್ರಿಕ, ಘುಟಂಧಮ, ದಂಡಭೃತ್, ಕುಲಾಲ, ಚಕ್ರಿನ್, ಸೂಕರ, ಖಾತರೂಪಕರ, ಕೌಲಾಲ, ಕಾಕೋಲ, ದಂಡಧರ, ಮೃತ್ಪಚ, ಪವನ, ಭ್ರಮರ, ಘುಟೀಕಾರಿ ಹೀಗೆ ಒಂದೇ ಎರಡೆ? ಅದೆಷ್ಟೋ ಹೆಸರಿವೆ. ಭಾರ್ಗವ ಅಂದ್ರೆ ಅವನು ಅವನ ಪಾಳಿ, ಅವನ ಪಾಡು, ಯಾರ ಹಂಗೂ ಇಟಕೊಳದೆ ತನ್ನ ಕೆಲಸ ಮಾಡೋವ್ನು ಅಂತ್ಲೂ ಅರ್ಥ", ಅಂದ್ರು. "ಅದಕ್ಕೆ ಒಡೆಯ ನಾನು ಹಾಗಂದದ್ದು" "ರಾತ್ರಿ ಊಟ ಆದ ಬಳಿಕ ತಾಂಬೂಲ ಕೊಡ್ತೀಯಲ್ಲ ಆಗ ಬಿಡಿಸಿ ಹೇಳಿ ನನಗ ಅರ್ಥ ಮಾಡ್ಸೋವಂತಿ, ಈಗ ಮಣ್ಣ ಕಲಸೋ ಕೆಲಸ ಕರೀತೈತಿ" ಅಂತ ಹೇಳಿ ಒಳಹೊರಟ.

ನಿತ್ಯಕರ್ಮ ಮುಗಿಸಿ ಪೂಜೆಗೆ ಕುಳಿತ ಕುಂಬಾರಣ್ಣ. ಮನಸ್ಸಿನಲ್ಲಿ ಗುರು ಬಸವಣ್ಣನನ್ನು ಸ್ಮರಿಸಿ ಇಷ್ಟಲಿಂಗಕ್ಕೆ ಪೂಜೆ ಸಲ್ಲಿಸಿದ. ಹೊರಗೆ ಬಂದು ಮಣ್ಣು

ಮಡಕೆ ಕುಡಿಕೆ ಕೋಲು ತಿಗರಿ ಗುದ್ದಲಿಗಳಿಗೂ ಮತ್ತೊಮ್ಮೆ ನಮಿಸಿದ. ಒಳಬಂದು ಕುಳಿತವನಿಗೆ ಗಡಿಗೆಯಲ್ಲಿ ನೀರು, ಗಂಗಾಳದಲ್ಲಿ ರೊಟ್ಟಿ, ಎಣ್ಣೆಗಾಯಿ, ತುಪ್ಪ, ಹಾಲು, ಅನ್ನ, ಮೊಸರು ತಂದಿಟ್ಟು ಬಡಿಸುತ್ತ, "ಮಣ್ಣು ಹದಮಾಡೋದು ಅಗದಿ ಶ್ರಮದ ಕೆಲಸ. ಹೊಟ್ಟೀ ತುಂಬ ಉಂಬೋ ಗೆಳೆಯಾ" ಅಂತ ತುಸು ಹೆಚ್ಚಾಗಿ ಬಡಿಸಿದಳು ಮಡದಿ. ಸರಸಗಾತಿ ಆಕೆ. "ನಿನಗೋ ಸದಾ ನಿನ್ನ ಮಣ್ಣು ಮಡಿಕೆ ಮೇಲೇ ಗಮನ. ನಾ ನಿನಗೆ ಹೊಟ್ಟೀ ತುಂಬಿಸಿದಂಗ, ಹೇ ಕುಡಕೀ ಅಪ್ಪ, ನೀನ್ ಯಾವಾಗ್ಲೋ....?" ಎಂದು ಅರ್ಧಕ್ಕೆ ನಿಲ್ಲಿಸಿ ನಾಲಗೆಯನ್ನು ಹಲ್ಲಿನಿಂದ ತುಸು ಕಚ್ಚಿದಳು.

ಊರೊಳಗೆ ಮನೆಯೊಂದರ ಅಂಗಳದಲ್ಲಿ ಅಜ್ಜಿ ಮೊಮ್ಮಕ್ಕಳಿಗೆ ಪದ ಹೇಳುತ್ತಿತ್ತು.

ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡಾನ
ಹಾರ್‍ಯಾರಿ ಮಣ್ಣ ತುಳಿದಾನ, ಹಾರ್‍ಯಾರಿ ಮಣ್ಣ ತುಳಿಯುತ್ತ
ಮಾಡ್ಯಾನ ನಾರೇರು ಹೊರುವಂತ ಐರಾಣಿ.

"ನೀ ಮಾಡಿದ ಹರವಿ ಕೊಳ್ಳಾಕ ಹ್ಯಾಂಗ್ ಮುಗಿ ಬೀಳ್ತಾರ ಈ ಹೆಣ್ಮಂದಿ. ಅಂತಾದ್ದೇನೈತಿ ನೀನು ಮಾಡುದ್ರಾಗ?"

"ಅದರಾಗ ನಾನ್ ಮಾಡೂದು ಏನೈತಿ. ತಿಗರಿ ತಿರುಗತೈತಿ. ಮಣ್ಣು ಮುದ್ದಿ ಕೆಳಗ ಬೀಳಬಾರದಲ್ಲ. ಅದಕ ನಾ ಹಿಡಿದಿರತೀನಿ. ಹರವಿ ತನಪಾಡಗ ತಾನ ಆಗ್ತೈತಿ. ಬಿಸಲ್ಯಾಗ ಒಣಗತೈತಿ. ಮತ್ತ ಭಟ್ಟೀ ಒಳಗೆ ಬೆಂಕೀಲಿಕಾದು ತಾನ ಗಟ್ಟಿಯಾಗ್ತೈತಿ."

"ಚಕ್ಕಡೀಗ ಎತ್ತುಗೋಳ ಕಟಗೊಂಡು ಕೇರಿ ಹೊಲಗಳಿಗ ಸಾಗಿ ಕಪ್ಪು ಮಣ್ಣ, ಜಿಗಟ ಮಣ್ಣ, ಹರಳ ಮಣ್ಣ ಅಂತ ಬ್ಯಾರಿ ಬ್ಯಾರಿ ಮಣ್ಣ ತರೂದು. ಆ ಮಣ್ಣನ್ನ ಗುಂಡೀ ಒಳಗ ಹಾಕಿ ರುಬ್ಬಿ ಜರಡಿ ಹಿಡಿದು ಹಸನು ಮಾಡೂದು. ನೆಲದ ಮ್ಯಾಲ ಹರಡಿ ನೀರ ತುಂಬಿ ಹಾರಿ ಹಾರಿ ಕಾಲಲ್ಲಿ ತುಳದು ಕಲಸೂದು, ಮಣ್ಣ ಮುದ್ದಿ ಇಟ್ಟು ಜೋರಾಗಿ ತಿಗರಿ ತಿರಗಸೋದು, ಸೊಂಟ ಬಾಗಿಸಿ ಮುದ್ದಿ ಹೊರಗ ಒಳಗ ಕೈ ಒತ್ತಿ ಮಡಕಿ ಆಕಾರ ಬರಸಿ ತೆಗದು ಬಿಸಲಲ್ಲಿ ಒಣಗಸೂದು, ಭಟ್ಟೀಗೆ ಸೌದಿ ಹಾಕಿ ಉರಸಿ ಒಳಗ ಮಡಕೆ ಕುಡಿಕೆ ಹಾಕಿ ಸುಡೂದು ಇಷ್ಟೆಲ್ಲ ಕೆಲಸ ಹಗೂರೇನು?"

"ನಾನು ದಿನಾ ಹಾಂಗ ಮಾಡದನ್ನ ನೋಡಿ ನೋಡಿ ನಿಂಗ ಹೀಗ ಅನಸತಾ ಹ್ಯಾಂಗ?"

"ಹೌದೋ ಗೆಳೆಯಾ, ನೀ ಅಷ್ಟ್ ಕೆಲಸ ಒಬ್ಬನೇ ಮಾಡ್ತೀಯಲ್ಲ. ನಾ ಕುಸರೀ ಮಾಡೊದರ ಜೊತಿ ನಿನ ಕೆಲಸ ಒಂದಿಷ್ಟ್ ಮಾಡದರ ಹ್ಯಾಂಗ ಅನಸ್ತೈತಿ. ಅದಕ ಮೊನ್ನೀ ನೀ ಪ್ಯಾಟೀಗ ಹೋಗಿದ್ಯಲ್ಲ ಆಗ ಸಣದೊಂದು ಕುಡಿಕೀ ಮಾಡೋಣು ಅನ್ನಸ್ತು. ಕೋಲಿಂದ ತಿಗರಿ ಆಡಸದ್ರ ತಿರುಗಲೇ ಒಲ್ದು. ಸರೀ ತಿರಗ ಬೇಕಂದ್ರ

ರಟ್ಟೀಲಿ ಬಲಾನೂ ಬೇಕ ಅಂಗ ಒಂದು ಲಯಾನೂ ಬೇಕು ಹೌದಲ್ಲೋ. ಉಸಿರು ಕಟ್ಟಿ ಬರೋಬ್ಬರಿ ಜೋರು ತಿರಗಸ್ದೆ. ನಿಂತಾಗೆ ಬಾಗಿ ಸಣ ಮುದ್ದಿ ಇಟಗಂಡು ಅಂಗ ಇಂಗ ಕೈಯಾಡಿಸ್ದೆ. ಆ ಕಡಿ ಈ ಕಡಿ ಮುದ್ದಿ ಹೊರಳಾಡ್ತು. ಎಡಕ್ಕ ಬಲಕ್ಕ ನಾನೂ ಬಾಗಿ ಅದು ಬೀಳದಾಂಗ ತಿಣಕಾಕ ಹತ್ತಿದ್ದೆ. ಅದೇನಾತೊ ಗೊತ್ತಿಲ್ಲ, ಅಂಗಾತ ತಿಗರಿ ಮ್ಯಾಲ ಬಿದ್ದೆ. ಮನಿ ಮರ ಎಲ್ಲ ಸುತ್ತಾಡತಿದ್ವೊ. ಮೂರ್ನಾಕ ಸುತ್ತಾಕಿ ತಿಗರಿ ನಿಲ್ತು. ಕೈಗೆ ಮಯ್ಗೆಲ್ಲ ಮಣ್ಣಂಟಗೋತು. ಅಂತಾ ನೋವ ಏನೂ ಆಗಲಿಲ್ಲ. ನೀ ನಗ್ತೀ ಅಂತ ನಿನ ಕೂಡೆ ಹೇಳಲಿಲ್ಲ ನೋಡ. ಮಡಕೀ ಮಾಡಕ ನೀನೇ ಸರಿ. ನಾ ಕುಸರಿ ಅಷ್ಟೇ ಮಾಡೋಣು ಅನ್ನೋ ತಿಳವಳಕಿ ಅಂತೂ ಬಂತಪಾ."

"ತಿಗರೀ ಮ್ಯಾಲ ಬಿದ್ದೀ? ಗಾಯ ಏನಾರ ಮಾಡ್ಕೊಂಡೀ? ನಾನಿಲ್ದಿರೋ ವ್ಯಾಳೆ ನೀ ಹೀಂಗೆಲ್ಲ ಸಾಹಸ ಯಾಕ್ ಮಾಡ್ತೀ? ನಿಂಗ ಏನಾರ ಆದರ ನನ ಗತಿ ಏನ? ನಿನ ಕೈಲಿ ಆಗಲ್ಲ ಅಂತಲ್ಲ ನಾ ಹೇಳೂದು. ಕಸಬು ಕಲಿತಿರೋವ್ರ ಸಂಗಟ ಇದ್ದು ನಾವು ಇಷ್ಟಿಷ್ಟೇ ಕಲೀಬೇಕ. ಎಳೀ ಹುಡಗಾ ಆದಾಗಿಂದ ನನ್ನ ಅಪ್ಪ ಮುತ್ತ್ಯಾ ಎಲ್ಲ ಇದನ್ನ ನನಗ ಕಲಿಸ್ಯಾರ. ಬಿದ್ದು ಎದ್ದು ಕಲತೇನಿ."

"ಏನಾಗಿಲ್ಲ ಬಿಡು ಗೆಳೆಯಾ. ಮನದಾಗೊಂದು ಹೊಸ ಚಿತ್ರ ಮೂಡಿತ್ತ. ಅದನ್ ಬಿಡಸಾಕ ಕುಡಕೀ ಸಿಗಲಿಲ್ಲ. ಹೊಸಾ ಕುಡಕೀ ನಾನ ಮಾಡೋಣು ಅಂದಕೊಂಡ್ ಧಡಕ್ಕನ ಬಿದ್ದೀನಿ ನೋಡ." "ನಾವು ಸುರೂ ಮಾಡೂ ಮುಂದ ಕೆಲಸ ಅಂತೇವಿ. ಉಸಾಬರಿಯಿಂದ ಕಲಿತು ಅದರೊಳಗ ಕಾಯ ವಾಚಾ ಮನಸಾ ಬೆರೀತೀವಿ ನೋಡು ಆಗ ಅದು ಕಸಬಾಗ್ಯೆತಿ. ಸತ್ಯಶುದ್ಧರಾಗಿ ಅದನ್ನ ಮಾಡ್ತಾ ತ್ರಿವಿಧ ಸೇವೆ ಅಂತೇನೋ ಮಾಡಬೇಕಂತ. ಆಗ ಅದು ಕಾಯಕ ಆಗ್ತೈತಿ. ಇದು ನನ ಮಾತಲ್ಲ. ಅಣ್ಣ ಬಸವಣ್ಣ ನುಡಿದು ನಡೆದು ಬದುಕಿದ್ದ ಹೀಂಗಂತ. ಈಗ ನಿನ ಕುಸುರೀನೆ ತಗೋ. ಅದನ್ನ ಮಾಡೋದು ನಿನಗ ಹುಟ್ಟಿನಿಂದಲೇ ಬಂದೈತಿ ಅನಿಸುತ್ತ ನನಗ. ಅದೇನ್ ಚಂದ ಗೆರೀ ಎಳೀತಿ. ಬ್ಯಾರೆ ಬ್ಯಾರೆ ಹೂವು ಎಲೀ ಸೊಪ್ಪು ಹಣ್ಣು ಸುಣ್ಣ ಎಲ್ಲ ಕೂಡಿಸಿ ಎಂತೆಂಥ ಬಣ್ಣ ಮಾಡ್ತೀ. ಎಳೀಮಗೂಗೆ ಸಿಂಗರಿಸೋ ಹಾಂಗ ಕಣ್ಣಲ್ಲೇ ಕಣ್ಣಿಟ್ಟು ಗೆರೀ ತಪ್ಪದಾಂಗ ಬಣ್ಣ ಹಚ್ತೀ. ಯಾರು ಯಾ ಚಿತ್ರ ಬರಕೊಡು ಅಂತಾರ ಅವರಿಗೇ ಅಚ್ಚರಿ ಆಗೋ ಹಂಗ ಆಯಾ ಚಿತ್ರ ಬರದು ಖುಷೀ ಪಡೋಹಂಗ ಮಾಡ್ತೀ. ಇದರಿಂದಾನ ಮನೀ ಕೆಲಸದ ಜೊತಿ ನಂ ಬದುಕು ಸಾಗಾಕೂ ನೆರವಾಗ್ಯೆತಿ. ನಿನ ಹಾಂಗ ಕುಸುರಿ ಮಾಡಾಕ ನನಗೆ ಆಗ್ತದೇನು? ಹೆಂಗಸರೆಲ್ಲ ಓಡೋಡಿ ಯಾಕ ಬರತಾರ ಅಂತ ಆಗ ಕೇಳಿದ್ಯಲ್ಲ. ಈಗ ಖರೇ ಮಾತು ಹೇಳತೀನಿ ಕೇಳ, ನಿನ್ನ ಕೈಯಾಗಿನ ಕುಸುರೀ ಅಗದೀ ಛಲೋ ಅದ. ಅದಕ ಮನ ಸೋತು ಬರ್ತಾರ. ನಿಂದು ಕುಸುರಿಯಲ್ಲ. ಅದು ನಿನ ಕಾಯಕ ಆಗೈತಿ ಅಂತ ನನಗನಸ್ತೈತಿ".

"ಹೌದೇನೂ, ನಂದು ಕಾಯಕ ಅಂತೀ. ನೀನು ನಿನ್ನ ಕಾಯಕ ಸೇವೆನ ಲಿಂಗ ಮೆಚ್ಚಬೇಕು ಅಂತೀ ಹೌದಲ್ಲ. ನನಗ ನೀ ಮೆಚ್ಚಿದರ ಸಾಕೋ ಒಡೆಯಾ".

"ನನ ಬಗ್ಗೆ ನೀ ಹೇಳಿದ್ದು ಖರೇ ಆದರ ಭಲೋ. ಬಸವಾದಿ ಪ್ರಮಥರು ಹಂಗಾ ಹೇಳ್ಯಾರ, ಶರಣ ಅಂದ್ರೆ ಅಂವ ಸತಿ, ಅವನ ಲಿಂಗವೇ ಪತಿ ಅಂತ. ನನಗೂ ಆ ದಾರಿಯಾಗ ಸಾಗೋ ಬಯಕೆ."

ಕುಂಬಾರಣ್ಣ ಮಣ್ಣನ್ನು ಕಲಸಿ ತಿಗರಿ ಇಟ್ಟು ದೋಣ್ಣೆಯಿಂದ ತಿರುಗಿಸಲು ಅಣಿಯಾದ. ಕಾಯಕನಿರತನಾದವನನ್ನು ಕೆಣಕಬೇಕೆನ್ನಿಸಿತು ಮಡದಿಗೆ. ಕೇಳಿಯೇ ಬಿಟ್ಟಳು.

"ನೀನು ನನಗ ಪತಿ, ಲಿಂಗಕ್ಕ ಸತಿ, ಹಂಗಾದ್ರ ಶರಣ, ನೀನು ಪುಲ್ಲಿಂಗಾನೋ ಸ್ತ್ರೀಲಿಂಗಾನೋ?"

"ನನ ಕೈಯಾಗಿರೋದು ದೋಣ್ಣೆ, ಅದು ನಪುಂಸಕ ಲಿಂಗ, ಆದ್ರೂನು ಅದರ ಕೈಲೆ ಉತ್ತರ ಕೊಡಿಸಲೇನ? ಸಾಕೋ ಮಾರಾಯ ಅನ್ನೋ ತನಕ ಜವಾಬು ಸಿಗತೈತಿ ನೋಡ."

"ಹಾಂಗೇನು? ಸ್ವಲ್ಪ ಇರು" ಅಂತ ಒಳಗೆ ಓಡಿದವಳು ಒಂದೆರಡು ಗಳಿಗೆ ಆದಮೇಲೆ ಈಚೆ ಬಂದಳು. ಕುಂಬಾರಣ್ಣ ಕಂಡದ್ದೇನು? ಚಂಡಿ, ಚಾಮುಂಡಿ, ದುರ್ಗಿ, ಕಾಳಿ ಎಲ್ಲ ಒಟ್ಟಿಗೆ ಒಂದೇ ರೂಪ ತಾಳಿ ಎದುರು ನಿಂತ ಹಾಗಿತ್ತು. ಕಚ್ಚೆಯಾಗಿ ಮಾರ್ಪಟ್ಟಿದ್ದ ಸೀರೆ, ಬಲಗೈಯಲ್ಲಿ ಒನಕೆ, ಎಡಗೈಯಲ್ಲಿ ಹಿಟ್ಟಿನ ಕೋಲು, ಸೊಂಟಕ್ಕೆ ಸಿಕ್ಕಿಸಿದ ಕುಡುಗೋಲು, ದೋಸೆಯ ಹಲ್ಲೆ, ತಲೆಯ ಸುತ್ತಲೂ ವೃತ್ತಾಕಾರದಲ್ಲಿ ಸಿಕ್ಕಿಸಿದ್ದ ಚಮಚಗಳು.

"ಅಹಹಹಹೋ ರುದ್ರ, ಎಲೈ ನೂರೆಂಟು ಹೆಸರಿನ ಕುಲಾಲನೇ, ಕೌಲಾಲನೇ, ಕಾಕೋಲನೇ, ಧೈರ್ಯವಿದ್ದರೆ ನಿನ್ನ ದೋಣ್ಣೆಯಿಂದ ಉತ್ತರ ಕೊಡಿಸು ನೋಡೋಣ. ನನ್ನನ್ನು ಯಾರೆಂದು ತಿಳಿದಿರುವೆ ಹೇ ಘಟಂದಮ. ನಾನು ಚಂಡಿ ಚಾಮುಂಡಿ ಕಾಳಿ ದುರ್ಗೆ ಇವರೆಲ್ಲರ ಪ್ರತಿರೂಪ. ಮೂರು ಲೋಕಕ್ಕೂ ನಾನೇ ಪ್ರತಿನಿಧಿ. ಈಗ ನನಗೆ ಇಷ್ಟು ಕೋಪ ಬಂದಿದೆಯೆಂದರೆ.....ಅಹಹಹಹೋ ರುದ್ರ".

"ತಾಯೆ ಶಾಂತಳಾಗು. ನಾನು ನುಡಿದಿದ್ದಕ್ಕೇ ಇಂತ ರುದ್ರರೂಪ ತಾಳಿ ಎಷ್ಟೆಷ್ಟೋ ಕೋಪಗೊಂಡಿರುವೆಯೆಂದರೆ ನನಗೆ ಭಯವಾಗುತ್ತಿದೆ. ಇನ್ನು ನುಡಿದಂತೆ ನಡೆದಿದ್ದರೆ ಏನಾಗುತ್ತಿತ್ತೋ ಏನೋ. ದೇವಿ ನೀನು ಈ ಭಯಾನಕ ರೂಪದಲ್ಲಿಯೂ ಅದೆಷ್ಟು ಚಂದ ಕಾಣುತ್ತೀಯೆ?"

"ಯಾವ ಆಯುಧವನ್ನು ಈಗ ಪ್ರಯೋಗಿಸಲಿ ಎಂದು ನಾನು ಯೋಚಿಸುತ್ತಿದ್ದರೆ ಬಣ್ಣದ ಮಾತುಗಳಿಂದ ನನ್ನ ಕೋಪವನ್ನು ಇಳಿಸಲು ಹವಣಿಸುತ್ತೀಯಾ. ಹೇಳಿದ್ದು ತಪ್ಪಾಯಿತು ಎಂದು ಒಪ್ಪಿಕೊಳ್ಳುವೆಯಾ ಹೇಳು, ಇಲ್ಲವಾದಲ್ಲಿ, ಹೇ ದಂಡಧರನೇ, ನನ್ನ ಕೈಯಲ್ಲಿರುವ ದಂಡವನ್ನು ನಿನ್ನ ಘಟದ ಮೇಲೆ ಪ್ರಯೋಗಿಸಲೋ ಅಥವಾ ನೀನು ಮಾಡಿರುವ ಘಟಗಳನ್ನು ಬಾರಿಸಿ ತಕಿಟ ತೋಂ ತದಿಕಿಟ ಎನಿಸಲೋ?"

"ಮಹಾದೇವಿಯೇ, ನೀನು ಆಯುಧವನ್ನು ಪ್ರಯೋಗಿಸುವುದಾದರೆ ನನ್ನ ಮೇಲೆ ಪ್ರಯೋಗಿಸು. ದಂಡವನ್ನು ನನಗೇ ವಿಧಿಸು. ಆದರೆ ನಿನ್ನ ಕೆಂಗಣ್ಣು ನನ್ನ ಕುಡಿಕೆ ಮಡಿಕೆಗಳ ಮೇಲಂತೂ ಬೀಳದಿರಲಿ. ಈ ಬಡಪಾಯಿ ಗೈದ ಅಪರಾಧಕ್ಕೆ ಅವುಗಳಿಗೆ ಶಿಕ್ಷೆ ವಿಧಿಸಬೇಡ ಮೂದೇವಿಯೇ?"

"ಏನು? ಮೂದೇವಿಯೆಂದು ನನ್ನನ್ನೇ ಹೀಯಾಳಿಸುವೆಯಾ? ಅಹಹಹಹೋ ರುದ್ರ, ನನ್ನ ಕೋಪ ಇಮ್ಮಡಿಯಾಗಿದೆ. ತಕಧೀಂ ಥೈ ತಕ. ಧೀಂ ಧೀಂ ತಕಧೀಂ".

"ಮೂಲೋಕದ ಒಡತಿಯಾಗಿದ್ದಕ್ಕೆ ನಾನು ಆ ಹೆಸರಿನಿಂದ ಕರೆದೆ ದೇವಿ, ಅಪಾರ್ಥ ಮಾಡಿಕೊಳ್ಳದೆ ಶಾಂತಳಾಗು. ಇದೋ ನನ್ನ ಕೈಗಳಿಂದ ಬಂಧಿಸುತ್ತೇನೆ. ಅಯ್ಯೋ ಬಾಯಿ ತಪ್ಪಿತು, ವಂದಿಸುತ್ತೇನೆ. ನನ್ನ ಭಕ್ತನೆಂದು ನನ್ನನ್ನು ಅಪ್ಪಿಕೋ, ಅಯ್ಯೋ ಮತ್ತೆ ಬಾಯಿ ತಪ್ಪಿತು, ಒಪ್ಪಿಕೋ".

ಆ ಕ್ಷಣಕ್ಕೆ "ಕುಂಬಾರಣ್ಣಾ, ಓ ಕುಂಬಾರಣ್ಣಾ" ಅಂತ ಯಾರೋ ಕೂಗಿದಂತಾಗಿ ದಂಪತಿಗಳ ಬಯಲಾಟಕ್ಕೆ ತೆರೆ ಬಿತ್ತು. ಊರ ಮಠದಲ್ಲಿ ಅನ್ನ ದಾಸೋಹ ಸೇವೆಗಾಗಿ ಅಡುಗೆ ಕಾಯಕ ಮಾಡುತ್ತಿದ್ದ ಶರಣ ಶಂಕರಪ್ಪ ಹಳ್ಳದ ದಾರಿಯಿಂದ ಮೇಲೇರಿ ಅವರ ಮನೆ ಸಮೀಪಿಸತೊಡಗಿದ್ದರು. ಅವರ ಕೂಗು ಕೇಳುತ್ತಲೇ ಕುಂಬಾರಣ್ಣನ ಮಡದಿ "ಹೇ ಘಟೀಕಾರಿ, ನಾಳೆ ಬಂದು ನಿನ್ನನ್ನೂ ನಿನ್ನ ಮಡಕೆಗಳನ್ನೂ ವಿಚಾರಿಸಿಕೊಳ್ಳುತ್ತೇನೆ" ಎನ್ನುತ್ತ ಗಂಡನ ಕಡೆ ಓರೆನೋಟ ಬೀರಿ ತನ್ನ ವೇಷ ಕಾಣದಂತೆ ನೇಪಥ್ಯಕ್ಕೆ ಸರಿದಳು. ಕುಂಬಾರಣ್ಣನೂ ಬಂದ ಅತಿಥಿಗೆ ನಮಿಸಿ ಕೂರಲು ಅನುವು ಮಾಡಿಕೊಟ್ಟ. ಶಂಕರಪ್ಪ ಬರದೇ ಇದ್ದಿದ್ದರೆ ರಸಭರಿತವಾಗಿ ಸಾಗಿದ್ದ ಅವರ ವಾಕ್ಸರಣಿ ಇನ್ನೂ ಹೃದ್ಯವಾಗಿ ಮುಂದುವರೆಯುತ್ತಿತ್ತು. ಅವರ ದಿನನಿತ್ಯದ ಕಾಯಕದ ಬಿಡುವಿನ ವೇಳೆ ಒಂದಲ್ಲ ಒಂದು ರೀತಿಯಲ್ಲಿ ಹೀಗೆ ಸರಸ ಸಲ್ಲಾಪ ನಡೆಯುತ್ತಲೇ ಇತ್ತು. ಇಬ್ಬರ ನಡುವಿದ್ದ ಅನ್ಯೋನ್ಯತೆ ಅಷ್ಟು ಮೇರು ಮಟ್ಟದ್ದಾಗಿತ್ತು. ಇಬ್ಬರೂ ಬಸವಯುಗದ ಬಹುಕಾಲದ ನಂತರದ ಪೀಳಿಗೆಯವರು. ಚಿಕ್ಕಂದಿನಿಂದಲೂ ತಮ್ಮ ತಮ್ಮ ಊರ ಮಠಗಳ ಶಾಲೆಗಳಲ್ಲಿ ಓದಿದವರು. ಓದಿದವರೆನ್ನುವುದಕ್ಕಿಂತ ಕಲಿತವರೆನ್ನಬೇಕು. ಬಸವಣ್ಣ ಪ್ರತಿಪಾದಿಸಿದ ಧರ್ಮದ ತಿರುಳನ್ನು ಕಲಿತದ್ದೂ ಅಲ್ಲೇ.

ಕಳಬೇಡ ಕೊಲಬೇಡ ಇವೇ ಮುಂತಾದ ಅಂತರಂಗ ಬಹಿರಂಗ ಶುದ್ಧ ಬದುಕಿನ ಸಪ್ತನಿಯಮಗಳು. ಕಾಯಕನಿಷ್ಠೆ, ದಾಸೋಹಭಾವ ಇವುಗಳನ್ನು ಕೇಳಿ ಓದಿ ತಿಳಿದಿದ್ದರು. ಇವುಗಳ ಜೊತೆಗೆ ಅಲ್ಲಿನ ಗುರುಗಳು ಕಲಿಸಿದ್ದು ಕೊಟ್ಟ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂಬುದನ್ನು. ಸಂತೋಷ ಹೆಮ್ಮೆ ನಿಷ್ಠೆಯಿಂದ ನಿರ್ವಹಿಸಬೇಕೆಂಬುದನ್ನು. ಹೆಣ್ಣು ಗಂಡೆಂಬ ಭೇದ ತೋರದೆ ಸಮಾನ ಗೌರವ ಕೊಡುವುದನ್ನು. ನೋವಿನಲ್ಲಿರುವವರಿಗೆ ದುರ್ಬಲರಿಗೆ ನೆರವಾಗುವುದನ್ನು. ಮೇಲು ಕೀಳೆನ್ನದೆ ಎಲ್ಲ ಕೆಲಸವನ್ನೂ ಸಮಾನವಾಗಿ ಕಾಣುವುದನ್ನು. ಪ್ರಕೃತಿಯನ್ನು ಹಾಳುಮಾಡದೆ ಸಕಲ ಜೀವಾತ್ಮರಲ್ಲಿ ಲೇಸ ಬಯಸುವುದನ್ನು. ಜಾತಿ ಉಪಜಾತಿಯವರೆನ್ನದೆ ಶರಣರೆಂದು ಗುರುತಿಸುವುದನ್ನು. ಮೂರು ವರ್ಷದ ಹಿಂದೆ ತಾನೆ ಅನುರೂಪದ ಸತಿಪತಿಯಾಗಿ ಗೃಹಸ್ಥಾಶ್ರಮಕ್ಕೆ ಕಾಲಿಟ್ಟ ನಂತರ ಮೇಲಿನ ಎಲ್ಲ ಸದ್ಗುಣಗಳ ಜೊತೆಗೆ ಸತ್ಯಶುದ್ಧ ಕಾಯಕದಲ್ಲಿ ನಿರತರಾಗಿ ಅದರ ಮೂಲಕವೇ ತಮ್ಮ ಬದುಕಿನ ನಿರ್ವಹಣೆಯನ್ನೂ ಗುರು ಲಿಂಗ ಜಂಗಮ ಸೇವೆಯನ್ನೂ ಮಾಡಹತ್ತಿದ್ದರು.

ಕುಂಬಾರಣ್ಣನ ಮಡದಿ ಕುಡಿಕೆಯಲ್ಲಿ ತಣ್ಣೀರನ್ನೂ ಮಣ್ಣಿನ ಮುಚ್ಚಳದಲ್ಲಿ ಕಲ್ಲುಸಕ್ಕರೆ, ಬೆಲ್ಲ ಮತ್ತು ಕೊಬ್ಬರಿ ಚೂರುಗಳನ್ನೂ ತಂದು ಗುರುಮಠದ ಅತಿಥಿಯ ಮುಂದಿರಿಸಿ ನಮಸ್ಕರಿಸಿ ಪತಿಯ ಸನಿಹ ಸಾರಿ ನಿಂತಳು. ಚಣ ಹಿಂದೆ ಅವಳು ರೌದ್ರವೇಷ ತಾಳಿದ್ದು ಈಗ ವಿನಮ್ರತೆಯೇ ಮೂರ್ತವೆತ್ತಂತೆ ನಿಂತಿರುವುದನ್ನು ನೋಡಿ ಕುಂಬಾರಣ್ಣನಿಗೆ ಒಳಗೊಳಗೇ ನಗು. ಆದರೂ ಅದನ್ನು ಅತಿಥಿಯೆದುರು ತೋರಗೊಡದೆ "ಶಂಕರಣ್ಣಾ ಶರಣು, ತಾವು ಹ್ಯಾಂಗದೀರಿ, ಗುರುಗಳಾದ ಮಹಾಂತ ಶಿವಯೋಗಿಗಳು ನಮ್ಮನ್ನ ವಿದ್ಯಾ ಬುದ್ಧಿ ಕಲಿಸಿ ತಿದ್ದಿ ಬೆಳಸದೋರು. ಅವರು ಹೆಂಗದಾರ, ಮಠದಲ್ಲಿ ಪಾಠ ಪ್ರವಚನ, ದಾಸೋಹ ಎಲ್ಲ ಚೆಂದಾಗಿ ನಡದೈತಿ ಅಲ್ಲ?' ಎಂದದ್ದಕ್ಕೆ "ಓ ಹೌದಪಾ, ನಮ್ಮ ಗುರುಗಳು, ಮಠದಲ್ಲಿ ಕಾಯಕ ಮಾಡೋ ನಾವು, ಎಲ್ಲ ಕ್ಷೇಮ. ನೀವು ಹೆಂಗದೀರಿ, ನಿಮ್ಮ ಕಾಯಕ ಛಲೋ ನಡದೈತಿ ಅಲ್ಲ?" ಎಂದು ಶಂಕರಣ್ಣ ಕೇಳಿದರು. "ಗುರುಗಳ ಆಶೀರ್ವಾದ, ನಿಮ್ಮ ಹಾರೈಕೆಯಿಂದ ಆರಾಮಿದೀವಿ ಶಂಕರಣ್ಣ" ಎನ್ನುತ್ತ ಕುಂಬಾರಣ್ಣ ಮುಂದುವರೆದು "ಶಂಕರಣ್ಣ, ಸ್ವಾಮಿಗಳ ಪ್ರವಚನ ಐತೇನೂ. ಅವರ ಪ್ರವಚನ ಅಂದ್ರ ನನಗಂತೂ ಬಾಳ ಬಾಳ ಖುಷಿ. ಅವರು ಹೇಳೋ ನಮೂನಿ, ಸೂಕ್ಷ್ಮ ವಿಚಾರಗಳನ್ನ ಕತಿ ಉಪಕತಿಗಳ ಮೂಲಕ ಮನದಟ್ಟು ಮಾಡೋ ರೀತಿ, ಒಮ್ಮೆ ಕೇಳಿದರ ಮತ್ತ ಮತ್ತ ಕೇಳಬೇಕು ಅನಸತ್ತ ಶಂಕರಣ್ಣ" ಎಂದದ್ದಕ್ಕೆ ಅವನ ಮಡದಿಯೂ ದನಿಗೂಡಿಸಿದಳು "ಗುರುಗಳ ಪ್ರವಚನ ಅಂದ್ರ ನನಗೂ ಚಂದ ಶಂಕರಣ್ಣ, ಅವರಿಗೆ ಹೂಗಳ ಅಂದ್ರ ಎಷ್ಟ್ ಪ್ರೀತಿ. ಪ್ರವಚನ ಕೊಡೂ ಮುಂದ ಅವರ ಎದುರಾಗ ಜೋಡಿಸಿರೋ ಹೂಗಳ್ನ ನೋಡಿ ಆನಂದಪಡ್ತಾರ. 'ಈ ಹೂವ ನೋಡಿ, ಅಲ್ಲೆಲ್ಲೋ

ದೂರದಲ್ಲಿ ಗಿಡದ ಮ್ಯಾಲ ಇದ್ದದ್ದು ನನ್ನನ್ನ ಇಲ್ಲಿಗೆ ಕರತನ್ನಿ, ಇಕೊ ಇಲ್ಲಿ ತಂದಿಡಿ ಅಂತ ಕೇಳಿತ್ತೇನೂ? ಹೂಗಳ್ನ ತಂದು ಜೋಡಿಸಿದವ್ರು ಇಲ್ಲಿ ನಾನು ಜೋಡ್ಸೇವಿ, ಅಲಂಕಾರ ಮಾಡೇವಿ ಅಂತ ಹೇಳ್ಯಾರೇನು? ನಾವೂ ಈ ಹೂವಿನಂಗ ಇರಬೇಕ್ ನೋಡ್ರಿ, ಸದ್ದು ಗದ್ದಲ ಇಲ್ಲದಾಂಗ ನಮ್ ಕಾಯಕಾನ ಮಾಡಕೊಂಡ್ ಹೋಗಬೇಕ ಅಂತ ಒಮ್ಮೆ ಹೇಳಿದ್ದು ನನಗೆ ಸದಾ ನೆನಪಿಗ ಬರತೈತಿ". ಹೀಗೆ ಆಕೆ ಹೇಳಿದ್ದಕ್ಕೆ "ಕುಂಬಾರಣ್ಣಾ, ಅಕ್ಕಾ, ಇಬ್ಬರೂ ಎಷ್ಟ್ ಚಂದ ಮಾತಾಡ್ತಿರಿ, ಗುರುಗಳ ಬಗ್ಗೆ ನಿಮ್ಮ ಪ್ರೀತಿ ಕಂಡು ನನಗ ಬಾಳ ಪಸಂದನ್ನಸ್ತು" ಎನ್ನುತ್ತ ಶಂಕರಪ್ಪ "ಕುಂಬಾರಣ್ಣಾ, ಗುರುಗಳಾದ ಮಹಾಂತ ಶರಣರು ಈ ಸಾರಿ ಯುಗಾದಿಗೆ ಹೊನ್ನೇರು ಕಟ್ಟಲಿಕ್ಕ ನಿನಗೆ ಹೇಳಿದಾರಂತಲ್ಲಪ್ಪ. ಅದನ್ನ ನೆನಪಿಸು ಅಂತ ಹೇಳ್ಯಾರ. ಅದಕ್ಕ ನಾ ಬಂದೀನಿ ನೋಡಪಾ. ಹಾಗೇನೆ ಅವರ ಪ್ರವಚನಗಳನ್ನೆಲ್ಲ ಸೇರಿಸಿ ಒಬ್ಬ ಶರಣರು ತಾಳೆಗರಿಗಳ ಮ್ಯಾಲೆ ಬರಸ್ಯಾರ. ನೀನೇನೋ ಒಮ್ಮೆ ಪ್ರಶ್ನೆ ಕೇಳಿದ್ಯಂತಲ್ಲಪ್ಪಾ, ಅದಕ್ಕ ಅವ್ರು ಅದರ ಬಗ್ಗೀ ವಿಚಾರ ಮಾಡೇನಿ. ನೀಂಗ ಇಷ್ಟರಲ್ಲೇ ಅದನ್ನ ತಿಳಿಸ್ತೀನಿ ಅಂತ ಹೇಳಿದ್ರಂತಲ್ಲಪ್ಪಾ. ಅದಕ್ಕೇ ಅದರ ಒಂದು ಕಟ್ಟನ್ನೂ ನನ್ನ ಕಡಿ ಕೊಟ್ಟ್ಯಾರ. ತಗೊ ಶರಣ, ನಿನಗ ಏನು ಉತ್ತರ ಕೊಡಾಕಿತ್ತೊ ಅದು ಇದರೊಳಗ ಐತಿ ಅಂತ ಹೇಳ್ಯಾರ. ಅಂದ ಹಾಂಗ ನೀನು ಕೇಳಿದ್ದ ವಿಚಾರ ಏನ್ ಕುಂಬಾರಣ್ಣ?" ಎಂದಾಗ ಕುಂಬಾರಣ್ಣ ಸಂತೋಷದಿಂದ ತಾಳೆಗರಿಯ ಕಟ್ಟನ್ನು ತೆಗೆದುಕೊಂಡು ಕಣ್ಣಿಗೊತ್ತಿಕೊಂಡು ಮನಸ್ಸಿನಲ್ಲೇ ನಮಿಸಿ ನಂತರ ಅದನ್ನು ಬಿಚ್ಚುತ್ತ ಮೊದಲಲ್ಲಿಯೇ "ಗುರುವಾಣಿ" ಎಂದಿದ್ದನ್ನು ಗಮನಿಸುತ್ತ ಹೇಳಿದ.

"ತ್ರಿವಿಧ ದಾಸೋಹ ಅಂದರೇನ, ತಿಳಸಿಕೊಡಿ, ಅಂತ ಕೇಳಿದ್ದೆ ಶಂಕರಣ್ಣ, ಆಗ ಅವ್ರು ಹಾಂಗಂದಿದ್ರು".

"ಹೌದೇನ, ಅಲ್ಲಪಾ ತ್ರಿವಿಧ ದಾಸೋಹ ಅಂದ್ರ ನಮಗ ದೀಕ್ಷೀ ಕೊಟ್ಟ ಗುರೂನ ಸೇವೆ ಮಾಡೂದು, ಇಷ್ಟಲಿಂಗಕ್ಕ ತಪ್ಪದ ನಿತ್ಯ ಪೂಜೀ ಸಲ್ಲಿಸೋದು, ಮನೀ ಕಡೀ ಬಂದಂತ ಜಂಗಮರಿಗೆ ಊಟ ಉಪಚಾರ ಮಾಡಿ ಸತ್ಕರಿಸೋದು, ಅಷ್ಟೇ ಅಲ್ಲೇನಪ್ಪಾ"?

"ನಾನು ತಿಳಕೊಂಡಿದ್ದು ಹಾಗೇನ. ಅದನ್ನ ಸ್ವಾಮಿಗಳ ಎದುರು ಹೇಳಿದಾಗ "ಭಕ್ತಸ್ಥಲದಲ್ಲಿ ಮೊದಮೊದಲು ಅಷ್ಟು ಮಾಡಿದರ ಸಾಕ. ಆದರ ನಿಜಕ್ಕೂ ನೋಡಿದರ ಅದಕ್ಕ ದೊಡ್ಡ ಅರ್ಥ ಐತಿ. ಷಟ್ಸ್ಥಲಗಳ ಮೆಟ್ಟಲನ್ನ ಏರಲಿಕ್ ಹತ್ತಿದಾಗ ಅದರ ಅರ್ಥ ಆಚರಣೆಗಳೂ ವಿಶಾಲ ರೂಪ ತಾಳ್ತಾವು. ಇದನ್ನೆಲ್ಲ ಮುಂದೊಮ್ಮೆ ತಿಳಸದೀನಿ" ಅಂದಿದ್ರಣ್ಣಾ ನಮ್ಮ ಶಿವಯೋಗಿಗಳು".

"ಹಂಗಾದ್ರ ಕುಂಬಾರಣ್ಣ, ಅದರ ಬಗಿ ಏನು ಬರದಾರ ಓದಪಾ. ಕೇಳಾಕ ನನಗೂ ಮನಸಾಗೈತಿ".

"ಹಾಂ, ಮೂರನೇ ಪ್ರವಚನಕ್ಕೆ ತ್ರಿವಿಧ ದಾಸೋಹ ಅಂತ ಹೆಸರಿಟ್ಟ್ಯಾರ. ಓದತೀನಿ ಕೇಳು ಶಂಕರಣ್ಣ" ಎನ್ನುತ್ತ ಕುಂಬಾರಣ್ಣ ಪ್ರಾರಂಭಿಸಿದ. "ತ್ರಿವಿಧ ದಾಸೋಹವೆಂದರೆ ಗುರು ಲಿಂಗ ಜಂಗಮಸೇವೆ ಎಂದು ಎಲ್ಲರೂ ತಿಳಿದಿದ್ದಾರೆ. ಬಸವಣ್ಣನವರಿಂದ ಆರಂಭಗೊಂಡ ಈ ಸೇವೆಯನ್ನು ಎಲ್ಲರೂ ಅನುಸರಿಸಿ ಇದೊಂದು ಶರಣ ಪರಂಪರೆಯ ಭಾಗವೇ ಆಗಿದೆ. ಕೌಟುಂಬಿಕ ಬದುಕಿನ ಸೀಮಿತ ವ್ಯಾಪ್ತಿಯಲ್ಲಿ ಅರ್ಥಮಾಡಿಕೊಂಡು ಶರಣ ಸಮಾಜ ಇದನ್ನು ಅನುಸರಿಸುವುದನ್ನು ಕೇಳಿದ್ದೇವೆ, ಕಂಡಿದ್ದೇವೆ. ಆದರೆ ಶರಣ ಪಥದಲ್ಲಿ ಸಾಗಿದ ಬಸವಾದಿ ಮಹನೀಯರ ನಡೆನುಡಿಗಳನ್ನು ಗಮನಿಸಿದರೆ ಈ ತ್ರಿವಿಧ ಸೇವೆಗೊಂದು ವಿಶಾಲ ಅರ್ಥವಿದೆ ಎನ್ನಿಸುತ್ತದೆ. ಅವರ ವಿಚಾರಧಾರೆಗಳನ್ನು ಓದುತ್ತ ಪುನರ್ಮನನ ಮಾಡುತ್ತ ಆಲೋಚಿಸ ಹೊರಟ ನನ್ನ ವಿಚಾರಮತಿಗೆ ಹೊಳೆದದ್ದು ಹೀಗೆ.

ನಮ್ಮ ಬದುಕು ಮೂರು ನೆಲೆಗಳಲ್ಲಿ ಪ್ರಕಟಗೊಳ್ಳುತ್ತದೆ. ಆಧ್ಯಾತ್ಮಿಕ ನೆಲೆಯಲ್ಲಿ ನಾನೂ ಕೂಡ ಈ ಸೃಷ್ಟಿಯ ಒಂದು ಭಾಗ. ಪೂರ್ಣದ ಒಂದು ಖಂಡ. ಪೂರ್ಣವೆಂಬ ಮೂಲದ್ರವ್ಯದ ಭಾಗವಾಗಿ ಖಂಡ ಸಾಂತ, ಪೂರ್ಣ ಅನಂತ. ಪೂರ್ಣದ ಸ್ವರೂಪ ಖಂಡಕ್ಕೆ ಅಗಮ್ಯ ಅಗೋಚರ ಅನೂಹ್ಯ. ಪೂರ್ಣವೆಂಬ ಆ ಪರಮಸತ್ಯದೆಡೆಗೆ ನನ್ನ ಬದುಕು ಸಾಗಬೇಕು. ಆ ಸತ್ಯವೇ ನನ್ನ ಗುರುವಾಗಿ ಅದರೊಡನೆ ಬೆರೆಯುವುದೇ ನನ್ನ ಗುರಿಯಾಗಬೇಕು.

ವೈಯಕ್ತಿಕ ನೆಲೆಯಲ್ಲಿ ನಾನು ನನ್ನ ಉದ್ಧಾರಕ್ಕಾಗಿ ಹೇಗೆ ವರ್ತಿಸಬೇಕು? ನಿನ್ನೆಯಷ್ಟು ಅಥವಾ ಸ್ವಲ್ಪ ಮಿಗಿಲಾಗಿ ಇಂದು ಉತ್ತಮನಾಗಿರಲು ನಾನು ಹೇಗಿರಬೇಕು? ಆತ್ಮಸಾಕ್ಷಿಯೊಡನೆ ಸಾಮರಸ್ಯದಿಂದಿರಲು ನಾನು ಹೇಗಿರಬೇಕು? ಈ ಪ್ರಶ್ನೆಗಳಿಗೆ ವಿಚಾರ ಮತ್ತು ವಿಜ್ಞಾನಗಳೆರಡನ್ನು ಮೇಳವಿಸಿ ಸಮರ್ಪಕ ಉತ್ತರಗಳನ್ನು ಕಂಡುಕೊಂಡು ಲಿಂಗ ಮೆಚ್ಚುವಂತೆ ನುಡಿದು ಅಂತೆ ನಡೆಯಬೇಕು.

ಸಾಮಾಜಿಕ ನೆಲೆಯಲ್ಲಿ ನಾನು ಚರಾಚರದ ಒಂದು ಭಾಗ. ಒಬ್ಬ ಸದಸ್ಯ. ನನ್ನ ವೈಯಕ್ತಿಕ ನಡೆ ನುಡಿ ಸಮಾಜದ ಒಟ್ಟು ನಡೆಗೆ ಪೂರಕವಾಗಿರಬೇಕು. ಸಮಾಜದ ಹಿತದಲ್ಲೇ ನನ್ನ ಹಿತವೂ ಇದೆ ಎನ್ನುವುದನ್ನು ಮನಗಂಡು ಸಕಲ ಜೀವಾತ್ಮಗಳಿಗೆ ಲೇಸಬಯಸುವ ದಾಸೋಹಿಯಾಗಿ ಸೃಷ್ಟಿಯ ಜಂಗಮತ್ವದಲ್ಲಿ ನಾನೂ ಭಾಗಿಯಾಗಬೇಕು.

ಮೇಲಿನ ಮೂರೂ ನೆಲೆಗಳಲ್ಲಿ ನಮ್ಮನ್ನು ಗುರುತಿಸಿಕೊಂಡು ಕಾಯಕದ ಮೂಲಕ ವ್ಯಕ್ತಿ, ಸಮಾಜ ಮತ್ತು ಪ್ರಕೃತಿಯ ರಕ್ಷಣೆ ಮತ್ತು ಏಳ್ಗೆಗೆ ಅನುವಾಗುವಂತೆ ಸೇವೆಗೈಯಬೇಕು. ಇದು ನಮ್ಮ ಕರ್ತವ್ಯವೇ ಹೊರತು ಇದರಲ್ಲಿ ಯಾವ ಹೆಚ್ಚುಗಾರಿಕೆಯೂ ಇಲ್ಲ. ಹೀಗೆ ಮಾಡುವುದರ ಮೂಲಕ ಮರ್ತ್ಯರಾದ ನಾವೂ ನಮ್ಮ

ಸುಕೃತ್ಯದಿಂದ ಅಮರತ್ವ ಪಡೆದಂತಾಗುತ್ತದೆ. ಮುಂದಿನ ಪೀಳಿಗೆಯವರು ನಮ್ಮ ಬಗ್ಗೆ ಅಭಿಮಾನ ತಳೆಯುವುದಲ್ಲದೆ ಅವರೂ ಕೂಡ ಈ ತೆರನಾದ ಕಾಯಕವನ್ನು ಮುಂದುವರೆಸಿ ಎಲ್ಲರೂ ಬದುಕನ್ನು ಹಸನುಮಾಡಿಕೊಳ್ಳುವಂತಾಗುತ್ತದೆ. ತ್ರಿವಿಧ ದಾಸೋಹ ಮಾಡುವುದೆಂದರೆ ನನ್ನ ಚಿಂತನೆಯ ಇತಿಮಿತಿಯಲ್ಲಿ ನಾವು ಈ ರೀತಿ ಕಾರ್ಯಪ್ರವೃತ್ತರಾಗುವುದೆಂದೇ ನನ್ನ ಭಾವನೆ" ಕುಂಬಾರಣ್ಣ ಓದಿದ್ದನ್ನು ಅವನ ಮಡದಿ ಮತ್ತು ಶಂಕರಣ್ಣ ತದೇಕಚಿತ್ತದಿಂದ ಆಲಿಸಿದರು. "ಶಿವಯೋಗಿಗಳು ಎಲ್ಲರೊಟ್ಟಿಗೆ ಮಾತಾಡುವಾಗ ಆಡುಭಾಷೆ ಬಳಸ್ತಾರ. ಆದರ ಬರೆಯೂ ಮುಂದ ಏನ ಚಂದ ಬರೀತಾರ" ಅಂತ ಶಂಕರಣ್ಣ ಹೇಳಿದರೆ ಕುಂಬಾರಣ್ಣನ ಮಡದಿ "ನನಗ ಅಲ್ಲಲ್ಲಿ ತುಸು ತುಸು ಅರ್ಥ ಆದಂಗಾತು. ಆದ್ರೂ ಓದ್ತಾ ಇದ್ರ ಕೇಳ್ತಾನೆ ಇರಬೇಕು ಅನಸತೈತಿ" ಅಂತ ದನಿಗೂಡಿಸಿದಳು. "ಸಾಧನಾ ಮಾಡಿರೋ ನಂ ಗುರುಗೋಳಿಂದ ಕೇಳಿ ತಿಳಿಯೋದು ಮೇಲು ನೋಡವ್ವಾ. ಹೊನ್ನೇರು ಕಟ್ಯಾಕ ಕುಂಬಾರಣ್ಣ ಬಂಡೀ ಕಟ್ಕೊಂಡು ಬರ್ತಾನಲ್ಲ ಆಗ ನೀನೂ ಬಾರವ್ವ, ಗುರುಗೋಳ್ನು ಮಠಾನೂ ದರ್ಶನ ಮಾಡಬೋದು. ಆಗ್ಲೆ ಗುರುಗೋಳ್ನ ಕೇಳಿ ಅರ್ಥನೂ ಮಾಡಕೋಬೋದು. ಬರ್ತೀನವ್ವಾ, ಬರತೇನಿ ಕುಂಬಾರಣ್ಣ" ಅಂತ ಶಂಕರಪ್ಪ ಹೊರಟರು. ಅಷ್ಟಕ್ಕೆ ಕುಂಬಾರಣ್ಣನ ಮಡದಿ "ಶಂಕರಣ್ಣಾ, ಹೋಗೂ ಮುಂದ ಓಂದ್ ಒಗಟ ಬಿಡಸರಿ, ಕಂದು ಗದ್ದೆ, ಕರೀ ಬತ್ತ, ಕೈಯಾಗ ಆಕಬೇಕ ಬಾಯಾಗ ತೆಗೀಬೇಕ, ಅದೇನ ಹೇಳರೀ" ಅಂದಾಗ, ಅಲ್ಲೇ ನಿಂತ ಶಂಕರಣ್ಣ ಯೋಚಿಸುತ್ತ ಬಾಯಿ ಸೊಟ್ಟಗೆ ಮಾಡಿದರು, ತುಟಿಗಳನ್ನು ಮುದುರಿ ಮೂಗಿನ ಹತ್ತಿರ ತಂದರು. ಅಂಗೈ ಕೆರೆದರು, ತಲೆ ಕೆರೆದರು, ಆಕಾಶ ಭೂಮಿ ನೋಡಿದರು, ಏನೂ ಗೊತ್ತಾಗಲಿಲ್ಲ. ಕಂಕುಳಲ್ಲಿ ನೇತುಹಾಕಿದ್ದ ತಾಳೆಗರಿ ಕಟ್ಟಿನ ಚೀಲ ಕೆಳಗೆ ಬೀಳೋ ಹಾಗಾಗಿ ಅದನ್ನು ಮತ್ತೆ ಕಂಕುಳಿಗೆ ಸೇರಿಸುತ್ತಲೇ "ಗೊತ್ತಾಗವಲ್ದು, ನೀನೇ ಹೇಳಕ್ಕಾ" ಎಂದರು. "ಕಂದು ಬಣ್ಣದ ತಾಳೆಗರಿ ಮ್ಯಾಲ ಕಪ್ಪು ಬಣ್ಣದಾಗ ಕೈಯಿಂದ ಬರದ್ದನ್ನ ಬಾಯಾಗ ಓದತೇವಿ, ಹೌದಲ್ಲ, ಅದೇ" ಎಂದಾಗ "ಅಕ್ಕ ಎಂತ ಒಗಟ, ಎಷ್ಟ್ ಚಂದದ ಉತ್ತರ" ಎನ್ನುತ್ತ ಶಂಕರಣ್ಣ ಕುಂಬಾರಣ್ಣನ ಕಡೆಗೆ ತಿರುಗಿ "ನಿನ ಮಡದಿ ಎಷ್ಟ್ ಶಾಣ್ಯಾ ಅದಾಳೋ ಅಣ್ಣ. ನನ ಪಾಡಂತೂ ಕಂಕುಳಲ್ಲಿ ಕೂಸೊತಗೊಂಡು ಊರಾಗೆಲ್ಲ ಹುಡುಕಾಡಿದ ಹೆಣ್ಮಗಳ ತರ ಆತು, ಬರತೇನಿ" ಎನ್ನುತ್ತ ಆ ಕ್ಷಣದಲ್ಲುಂಟಾದ ಆನಂದವನ್ನೇ ಮೆಲುಕುಹಾಕುತ್ತ ಊರ ಕಡೆಗೆ ಮುಖ ಮಾಡಿದರು. ಓರೆನೋಟ ಬೀರಿ ತನ್ನ ಕಡೆಗೆ ನೋಡುತ್ತಿದ್ದ ಮಡದಿಯ ಸಮಯಸ್ಫೂರ್ತಿಗೆ ಮೆಚ್ಚುಗೆಯನ್ನು ಸೂಚಿಸುವ ಮುಖಭಾವದೊಡನೆ ಮಂದಹಾಸ ಬೀರುತ್ತ ಕುಂಬಾರಣ್ಣ ತಿಗರಿ ತಿರುಗಿಸಿ ಮಡಿಕೆಗೆ ರೂಪಕೊಡುವುದನ್ನು ಮುಂದುವರೆಸಿದ.

ಊರೊಳಗೆ ಅಜ್ಜಿಯ ಜೊತೆ ದನಿಗೂಡಿಸಿ ಪಲ್ಲವಿಯನ್ನು ತುಸು ಬದಲಾಯಿಸಿ ಮಕ್ಕಳೂ ಹಾಡತೊಡಗಿದ್ದರು.

ಹೊತ್ತಾರೆದ್ದು ಕುಂಬಾರಣ್ಣ ತುಪ್ಪ ಬಾನುಂಡಾನ
ಘಟ್ಟೀಸಿ ಮಣ್ಣ ತುಳಿದಾನ, ಘಟ್ಟೀಸಿ ಮಣ್ಣ ತುಳಿಯುತ್ತ ಮಾಡ್ಯಾನ
ಮಿತ್ರೇರು ಹೊರುವಂತ ಐರಾಣಿ

ಶಂಕರಪ್ಪ ಏರಿ ಹತ್ತಿ ಕೆಳಗೆ ಇಳಿಯುತ್ತಿದ್ದಂತೆ ಹಳ್ಳದ ದಾರಿಯಲ್ಲಿ ಏಳೆಂಟು ಮಂದಿ ಹೆಂಗಸರು ಎದುರಾದರು. ಎಲ್ಲರೂ ಶಂಕರಣ್ಣನನ್ನು ಬಲ್ಲವರು. ಮಠಕ್ಕೆ ಬಂದಾಗಲೆಲ್ಲ ಶಂಕರಣ್ಣ ಮಾಡಿದ ಪ್ರಸಾದದ ರುಚಿಕಂಡವರು. ಎಲ್ಲರೂ ಒಕ್ಕೊರಲಿನಿಂದ "ಶಂಕರಣ್ಣಾ, ಆರಾಮಿದೀರಿ?" ಅಂತ ಕೇಳಿದರು. ಉಭಯ ಕುಶಲೋಪರಿಯಾಗಿ ಶಂಕರಣ್ಣನನ್ನು ಬೀಳ್ಕೊಟ್ಟ ನಂತರ ಎಲ್ಲರೂ ಕುಂಬಾರಣ್ಣನ ಮನೆಯ ಬಳಿ ಬಂದರು. ಅವರನ್ನು ನೋಡಿದ ದಂಪತಿಗಳಿಬ್ಬರಿಗೂ ಆನಂದವೋ ಆನಂದ. "ಕುಂಬಾರಣ್ಣಾ, ನೀನು ನಿನ ಅಂದದ ಮಡದಿ ಹ್ಯಾಂಗಿದೀರಿ. ಎಲ್ಲಾ ಸೌಖ್ಯವೇನು?" ಎಂದು ಅವರಲ್ಲಿ ಹಿರಿಯಳಾಗಿದ್ದ ನಿಂಗಕ್ಕ ಕೇಳಿದಳು.

"ಎಲ್ಲಾ ಚಲೊ ಐತಿ ನಿಂಗಕ್ಕಾ. ಬಿಸಿಲ ಝಳ ಒಂದ ಬಾಳೈತಿ. ಮುಂಜಾನಿ ಎದ್ದು ಮಣ್ಣ ತುಳಿದು ಕಲಸಿದರ ಕಲಸಿದಾಂಗ. ಹೊತ್ತು ನೆತ್ತೀ ಮ್ಯಾಲ ಬಂತಂದ್ರ ತ್ರಾಸ ಆಗ್ತೈತಿ." ಅಂದ ಕುಂಬಾರಣ್ಣ. ಗಿರಿಜಕ್ಕ ಕುಂಬಾರಣ್ಣನ ಮಡದಿ ಬಳಿ ಹೋಗಿ "ತಂಗೀ, ನಿಂಗಕ್ಕ ಹೇಳೂ ಅಂಗ ನೀನೂ ಚಂದ ಅದೀ, ನಿನ ಕುಸುರೀನೂ ಅಷ್ಟೇ ಚಂದ ಅದೀ. ಸ್ವಲ್ಪ ಸೊರಗಿದ್ದೀ ಯಾಕ. ಮೈಯಾಗ ಹುಷಾರಿಲ್ಲೇನು?" ಅಂದದ್ದಕ್ಕ "ಗಿರಿಜಕ್ಕ, ಬೆಳಗಿನಿಂದ ಒಂದೇ ಸಮನ ಕೆಲಸ ಮಾಡೇನಿ. ಅದಕ ತುಸು ಸುಸ್ತಾದಂಗ ಅನ್ನಸ್ತೈತಿ" ಎನ್ನುತ್ತ "ನೀವೆಲ್ಲ ಮಡಕೀ ಕುಡಕೀ ಎಲ್ಲ ತಗೊಂಡು ಮ್ಯಾಲೆ ಒಳಗ ಬರ್ರೀ. ನಿಂ ಕೂಡೆ ಏನೋ ಕೇಳ್ಬೇಕು ಅನಸ್ತದ" ಅಂದಳು ಕುಂಬಾರಣ್ಣನ ಮಡದಿ. "ಆಯ್ತವ್ವ, ನನಗ ಲಿಂಗ ಬಸವ ಇರೂ ಚಿತ್ರ ಬರಕೊಡವ್ವ" ಎನ್ನುತ್ತ ಅಂಗಡಿ ಬಸಪ್ಪನ ಮಡದಿ ನೀಲಕ್ಕ ಅವಳ ಕೈಗೆ ಹಿಟ್ಟು ತುಂಬಿದ ಚೀಲ ಕೊಟ್ಟರೆ, ವೀರಾಚಾರಿ ಮಡದಿ ಚಂದ್ರಕ್ಕ ಬೆಲ್ಲ ತುಂಬಿದ್ದ ಚೀಲ ಕೊಟ್ಟಳು. ಮೂಲಿಮನಿ ಗಿರಿಜಕ್ಕ ಅವಳ ಕೈಯಲ್ಲಿ ತುಪ್ಪದ ಗಿಂಡಿಯನ್ನ ಕೊಟ್ಟು ಉಳಿದವರೊಡನೆ ಕುಂಬಾರಣ್ಣನ ಬಳಿ ಸಾರಿ "ಅಣ್ಣಾ, ನೀ ಈ ಸಾರಿ ನಮಗ ಚಂದದ ಐರಾಣಿ ಮಾಡಿಕೊಡಬೇಕ. ನಂಗ ತುಪ್ಪಾ ಅಂದ್ರ ಆಸೆ ಅಂತ ಹಿಂದಿನ ಸಾರಿ ಅಂದಿದ್ಯಲ್ಲ ಅದಕ್ಕ ಒಂದು ಗಿಂಡೀಲಿ ತುಪ್ಪಾ ತಂದೇನಿ. ನಿನ ಚೆಲ್ವೀ ಕೈಲಿ ಕೊಟ್ಟೇನಿ. ತುಪ್ಪಾ ತಿಂದು ಈ ಸಾರಿ ಹಬ್ಬಕ್ಕ ಒಪ್ಪೋ ಅಂತಾ ಮಡಕೀ ಮಾಡಕೊಡೋ ಮಾರಾಯ" ಎಂದಳು.

ಊರೊಳಗೆ ಮೊಮ್ಮಕ್ಕಳಿಗೆ ಅಜ್ಜಿ ಹಾಡು ಮುಂದುವರೆಸಿತ್ತು.

ಅಕ್ಕೀ ಹಿಟ್ಟು ಬೆಲ್ಲ ತಕ್ಕೊಂಡು ಬಂದಿವ್ನಿ
ಗಿಂಡೀಲಿ ತಂದಿವ್ನಿ ತಿಳಿದುಪ್ಪ, ಗಿಂಡೀಲಿ ತಂದಿವ್ನಿ ತಿಳಿದುಪ್ಪ
ಕುಂಬಾರಣ್ಣ ತಂದೀಡು ನಮ್ಮ ಐರಾಣಿ

"ನಿಮಗ ನಾ ಐರಾಣಿ ಮಾಡ್ಕೊಡೋದು ಖರೇ. ಆದರ ಮಾಡಕೊಡೋ ನನ ಬಗ್ಗೆ ಏನೂ ಅನಲಿಲ್ಲ. ಇವಳನ್ನ ಮಾತ್ರ ಎಷ್ಟ್ ಹೊಗಳ್ತೀರಿ. ಅದೇನು ಚೆಂದ ಅದಾಳು, ಕಪ್ಪೀ ಮೂಗು, ಮೊಸಳೀ ಬಾಯಿ, ಆನೀ ಕಿವಿ, ಒಂದೊಂದು ಅಂಗಾನೂ ಒಂದೊಂದು ಪ್ರಾಣೀನ್ ನೆನಪ ಮಾಡತೈತಿ. ಈಕೀನ ಮೊದಲು ನೋಡಿದಾಗ ಎಂಗಪ್ಪಾ ಹೀಂಗ ಇರೋವಳನ್ನ ಲಗನ ಆಗೋದು ಅನಸಿತ್ತು. ಹೆಂಗಾರ ಇರಲಿ, ನಾನು ಮಾಡೋ ಮಡಕಿ ಕುಡಕೀ ಮ್ಯಾಲೆ ಒಂದಷ್ಟು ಕುಸರೀ ಮಾಡದರ ಸಾಕ ಅಂತ ಅನಸಿ ಮದವೀ ಆದಿ. ಗೊತ್ತೇನು?" ಅಂದ ಕುಂಬಾರಣ್ಣ ತುಟಿಯಂಚಿನಲ್ಲಿ ಹುಸಿನಗೆ ಬೀರುತ್ತ.

ಕುಸುರೀ ಮಾಡುತ್ತಿದ್ದ ಅವನ ಮಡದಿ ಕತ್ತೆತ್ತಿ ಒಮ್ಮೆ ಅವನನ್ನು ನೋಡಿದಳು. ಅವನ ಸರಸದ ಮಾತಿಗೆ ತಿರುಗೇಟು ಕೊಡಬೇಕೆನ್ನಿಸಿತು. "ನೋಡ್ರಕ್ಕಾ, ನಾ ಚಂದಿಲ್ಲೇನು. ಏನ ಕಡಮಿಯಾಗೈತಿ. ಇವ್ರು ನನ್ನನ್ನ ನೋಡಾಕ್ ಬಂದು ಹೋದಮ್ಯಾಗ ಅಪ್ಪ ನನ್ನ ಕೂಡೆ ಬಂದು, ಹ್ಯಾಂಗಂತೀಯವ್ವ, ಹುಡುಗ ಸಣಕಲು ಕಡ್ಡಿ ಹಂಗದಾನ. ನೀ ಚೆಂದಿದ್ದೀ, ಹಾಡ ಹಾಡ್ತೀ, ಚಿತ್ರ ಬಿಡಿಸ್ತೀ, ಅವಂಗ ಮಡಕೀ ಮಾಡೂದು ಬಿಟ್ರ ಬ್ಯಾರೆ ಏನೂ ಬರಾಕಿಲ್ಲ ಅನಸ್ತೈತಿ. ನೀ ಹೂಂ ಅಂದ್ರನ ನಾ ಮುಂದುವರಿಯೋದು ಅಂದಿದ್ರು. ನನಗ ಎಲ್ಲದಕ್ಕಿಂತ ಇವರ ಸಜ್ಜನಿಕೆ ಸರಳ ನಡೆ ಇಷ್ಟ ಆತು. ಒಪಗೊಂಡೆ. ಇಲ್ಲಿ ನೋಡಿದರ ಮನೀ ಕೆಲಸ ಕುಸುರೀ ಕೆಲಸ ಬಾಳ ಅನಸ್ತೈತಿ" ಎನ್ನುವಷ್ಟರಲ್ಲಿಯೇ ಸರಸ ದೂರ ಸರಿದು ದುಃಖದ ಎಳೆಯೊಂದು ಮುಂದಿನ ಮಾತನ್ನು ನುಡಿಸಿತ್ತು. "ನಾನು ಚಂದ ಇಲದಿದ್ರ ಚಂದಾಗಿರಾಕೀನ ಲಗನ ಮಾಡಕೊ ಅಂತೇಳ್ರಿ. ನಾನು ಬರೇ ಕುಸುರೀ ಮಾಡ್ಕೊಂಡ್ ಇರತೇನಿ" ಎಂದು ಆಕೆ ನುಡಿದಾಗ ಎಲ್ಲ ಹೆಂಗಸರೂ ಕುಂಬಾರಣ್ಣನ ಮೇಲೆ ಮುಗಿಬಿದ್ದರು. ನಿಂಗಕ್ಕ ಅವನ ಸಮೀಪ ಬಂದು "ಏನಂದೀ ಕುಂಬಾರಣ್ಣ, ಇನ್ನೊಮ್ಮೆ ಹೇಳ. ನಂ ಹುಡುಗಿ ತಿದ್ದಿದ ಗೊಂಬೀ ಹಂಗ ಎಷ್ಟು ಚೆಂದ ಅದಾಳ. ನಮ್ಮ ಎದರೇ ಹೀಂಗಂತಿ. ಇಂದೇ ಕೊನೀ, ಇನ್ನೆಂದೂ ಹಾಗನಬ್ಯಾಡ ನೋಡಪಾ" ಎಂದು ತಿಳಿಹೇಳಿದರು. ಅಷ್ಟು ಹೊತ್ತಿಗಾಗಲೇ ಅವನ ಮಡದಿಯ ಕಣ್ಣುಗಳ ಅಂಚಿನಿಂದ ಬಿದ್ದ ಎರಡು ಹನಿಗಳು ಕುಸುರಿಯ ಮೇಲೆ ಬಿದ್ದು ಗೆರೆ ಮಸಕಾದುದು ಯಾರ ಕಣ್ಣಿಗೂ ಬೀಳಲಿಲ್ಲ.

ಅನಂತರ ಕುಂಬಾರಣ್ಣನ ಮಡದಿ ಎಲ್ಲರನ್ನೂ ಒಳಗೆ ಕರೆದು ಕೂರಿಸಿ ಹಾಲು ಹಣ್ಣು ತಂದು ಮುಂದಿಟ್ಟು, ತಾನೂ ಅವರ ಬಳಿ ಕುಳಿತು ತಿಂಗಳಿಂದೀಚೆಗೆ ತನಗೆ ಮೊದಲಿನಂತೆ ಲವಲವಿಕೆಯಿಂದ ಕೆಲಸ ಮಾಡಲು ಆಗದೆ ಬೇಗ ಸುಸ್ತಾಗುತ್ತಿರುವುದಾಗಿಯೂ ತಾನು ಊಟ ತಿಂಡಿ ರುಚಿಸದೆ ಸಂಕಟಪಡುತ್ತಿರುವುದಾಗಿಯೂ ತಿಳಿಸಿದಳು. ಆಗ ಅಲ್ಲಿದ್ದ ಎಲ್ಲರೂ ದೇಹಕ್ಕೆ ಸಂಬಂಧಪಟ್ಟಂತೆ ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳಿ ಮುಗಿಸಿದ ಮೇಲೆ ಕುಂಬಾರಣ್ಣನ ಮಡದಿಗೆ ನಿಂಗಕ್ಕ "ತಂಗ್ಯವ್ವ, ಈ ಲಕ್ಷಣಗಳನ್ನು ಕೇಳಿದರ ಸಂತೋಷಪಡೋ ವಿಚಾರ ಅನಸತದ. ನೀ ತಾಯಿಯಾಗೋ ಅಂಗ ಕಾಣಸತೈತಿ" ಎಂದಾಗ ಅವಳ ಮುಖ ಅರಳಿತು. "ಇನ್ನೊಂದೆರಡು ತಿಂಗಳಿನೊಳಗ ಎಲ್ಲ ಬರೋಬ್ಬರಿ ಗೊತ್ತಾಗತ್ತ. ಯಾವುದಕ್ಕೂ ನೀನು ಇನ್ನು ಹೆಚ್ಚು ಶ್ರಮದ ಕೆಲಸ ಮಾಡಬ್ಯಾಡ. ಹಾಗಂತ ಸುಮ್ಮನ ಕೂರಲೂ ಬ್ಯಾಡ. ಸ್ವಾಮಿಗೋಳ ಮಠಕ್ಕ ಹೋಗಿ ಅವರ ಆಶೀರ್ವಾದ ಪಡಿ, ಬಿಡುವಾದಾಗೆಲ್ಲ ಶರಣರ ಕತೀ ಓದು. ಊಟ ರುಚಸದ ಇದ್ರ ಹಣ್ಣು ಹಂಪಲು ಆಗಾಗ ತಿನ್ನವ್ವ. ಬಾಯಿ ಹುಳಿ ಕೇಳಸ್ತದ. ಹಾಗಂತ ಮಡಕೀ ಮಾಡೋ ಮಣ್ಣ ತಿನಬ್ಯಾಡ. ಹಿಂದ ಕೆಲವರು ಹಾಗ ಮಾಡತಿದ್ರಂತ. ನಾವು ಇನ ಮುಂದ ವಾರಕ್ಕೊಮ್ಮಿ ನಿನ ನೋಡಾಕ ಬರ್ತೇವ" ಅಂತ ಹೇಳಿ ಎಲ್ಲರೂ ಮನೆಯಿಂದ ಹೊರಬಂದು ಕುಂಬಾರಣ್ಣನ ಬಳಿ ಬಂದು "ನೋಡಪಾ ಕುಂಬಾರಣ್ಣಾ, ನಿನ ಹೆಂಣ್ತಿಗೆ ನೀ ತುಂಬಾ ಕೆಲಸ ಹಚ್ಚೀಯಂತ, ಅವಳಿಗೆ ತ್ರಾಸ ಆಗ್ತದಂತ. ಸ್ವಲ್ಪ ಬಿಡುವು ಕೊಡು. ಕೆಲಸ ಹೆಚ್ಚಿದ್ದರ ಯಾರ ಕೈಯಾಗಾದ್ರೂ ಕೂಲಿಕೊಟ್ಟು ಮಾಡಿಸ್ಕೋಳಪಾ" ಅಂತ ಗುಟ್ಟು ಬಿಟ್ಟುಕೊಡದೇ ಹೇಳಬೇಕಾದದ್ದನ್ನು ಹೇಳಿ ಎಲ್ಲರೂ ತಮಗೆ ಬೇಕಿದ್ದ ಐರಾಣಿಗಳನ್ನು ದುಡ್ಡು ಕೊಟ್ಟು ಕೊಂಡು ಹಿಂತಿರುಗಿದರು.

ಎಲ್ಲರೂ ಹೊರಡುವುದನ್ನೇ ಕಾಯುತ್ತಿದ್ದ ಕುಂಬಾರಣ್ಣ ಮಡದಿ ಹತ್ತಿರ ಮೆಲ್ಲ ಮೆಲ್ಲಗೆ ಹೆಜ್ಜೆ ಇಡುತ್ತಾ ಬಂದ. ಹೆಂಡತಿ ಸರಸಿಯಾದರೂ ತಾನು ಅವಳನ್ನು ಅಂದವಿಲ್ಲದೋಳು, ಕಪ್ಪೀ ಮೂಗು ಆನೀ ಕಿವಿ ಅಂತ ಎಲ್ಲ ಹೆಂಗಸರೆದುರಿಗೆ ಅಂದದ್ದು ಅವಳಿಗೆ ನೋವುಂಟುಮಾಡಿದೆ ಎಂದು ಅವನಿಗೆ ಅದಾಗಲೇ ಅರಿವಾಗಿತ್ತು. "ಓ ಮಡದೀ, ಏನ್ ಚಿತ್ರ ಬರೀಲಿಕ್ಕ ಹೊಂಟಿದ್ದಿ" ಅಂದ. ಸದ್ದಿಲ್ಲ, ಮೌನ ಆವರಿಸಿತ್ತು, "ನನ ಮ್ಯಾಲ ಕೋಪ ಮಾಡ್ಕಂಡಿದೀ?" ಪ್ರತ್ಯುತ್ತರವಿಲ್ಲ. ಆಕೆ ತಲೆ ಬಗ್ಗಿಸಿಕೊಂಡೇ ಚಿತ್ರ ಬರೆಯುವುದನ್ನು ಮುಂದುವರೆಸಿದ್ದಳು. "ಕಡಗ ಹಾಕಿದ ನಿನ ಕೈ ನೋಡಾಕ ಎಷ್ಟ್ ಚಂದ ಕಾಣತೈತಿ" ಅಂದ ಕುಂಬಾರಣ್ಣ. "ಚಂದ ಅಂತ ಚಂದ, ಯಾಕ, ಕೈ ನೋಡಿ, ಮಂಗ ಕರಡಿ ಒಂಟೀ ಯಾವುದು ನೆನಪಾಗಲಿಲ್ಲೇನು? ಎಲ್ಲ ಹೊಂಟ ಮ್ಯಾಲ ಬಂದೀ? ಊರೆದುರಿಗೆ ಮಾರಿ ಅಂದು ಮನೀ ಒಳಗ ನಾರಿ ಅನ್ನಾಕ. ತನ್ನ ಬಣ್ಣಿಸಬೇಡ

ಇದಿರ ಹಳಿಯಲುಬೇಡ ಅಂತ ಅಣ್ಣ ಬಸವಣ್ಣ ಹೇಳ್ಯಾರ ಅಂತೀ. ಅದನ್ನ ನೀನೇ ಮರತೀ ನೋಡ. ಈಗ ನಾನು ಆ ಮಹಾತ್ಮನ ಚಿತ್ರ ಬರೀಲಿಕ್ಕ ಹೊಂಟೀನಿ. ಅಡ್ಡೀ ಮಾಡಬ್ಯಾಡ, ನಿನ ಕೆಲಸ ನೀ ನೋಡು" ಅಂದಳು ಮಡದಿ. "ತಪ್ಪಾತ ತಪ್ಪಾತ, ಕೈ ಮುಗೀತೇನ, ಕಾಲ ಕಟತೇನ, ನೀನು ನನ ಬಾಳ ಬಂಗಾರ ಅದೀ. ನಗೂ ಬರಲಿ ಅಂತ ಮನಸ್ಯಾಗ ಅನಸಿ ಆಗ ಏನೋ ಅಂದದ್ದು ಆಮ್ಯಾಲೆ ವಿಚಾರ ಮಾಡಿದಾಗ ಸರಿ ಅನಸಲಿಲ್ಲ. ನಾನು ಮಾಡಿದ್ದನ್ನ ನಿನ ಹೊಟ್ಟೀಗಾಕಂಡು ಮರೆತುಬಿಡ. ಇನ ಮುಂದ ನಿನ ಮನಸಿಗೆ ನೋವ ಮಾಡೂ ಹಾಂಗ ಹಗೂರ ಮಾತಾಡಲ್ಲ" ಅಂತ ಕುಂಬಾರಣ್ಣ ತನ್ನ ಸರಳತೆಯನ್ನು ಮಾತಿನಲ್ಲಿ ತಿಳಿಸುತ್ತಿದ್ದಂತೆ ಅವನ ಮಡದಿಯ ಮುಖ ಪ್ರಶಾಂತವಾಗಿ ತುಟಿಯಂಚಿನಲ್ಲಿ ನಗು ಮೂಡಿತ್ತು. ಅವಳ ಕಡಗದ ಕೈ ಅಣ್ಣ ಬಸವಣ್ಣನನ್ನು ಚಿತ್ರಿಸುವಲ್ಲಿ ಮಗ್ನವಾಗತೊಡಗಿತು.

ಅಜ್ಜಿಯ ಪದ ಮುಂದುವರೆದಿತ್ತು. ಮಕ್ಕಳು ತಾವೂ ದನಿಗೂಡಿಸಲು ಬಿಟ್ಟ ಬಾಯಿ ಬಿಟ್ಟ ಹಾಗೆ ಕೇಳುತ್ತಿದ್ದರು.

ಕುಂಬಾರಣ್ಣನ ಮಡದಿ ಕಡಗಾದ ಕೈಯಿಕ್ಕಿ
ಕೊಡದಾ ಮ್ಯಾಲೇನ ಬರೆದಾಳ, ಕೊಡದಾ ಮ್ಯಾಲೇನ ಬರೆದಾಳ್
ಕಲ್ಯಾಣದ ಶರಣಾ ಬಸವನಾ ನಿಲಿಸ್ಯಾಳ

ರಾತ್ರಿ ಊಟ ಮಾಡಿ ಚಾಪೀ ಮ್ಯಾಲ ಮಲಗಿದ್ದ ಕುಂಬಾರಣ್ಣ. ಆತನ ಮಡದಿ ತಾಂಬೂಲದ ತಟ್ಟೆ ದೀಪ ಎರಡನ್ನೂ ಹಿಡಿದುಕೊಂಡು ಬಂದು ಬಳೀ ಕುಳಿತು "ಗೆಳೆಯಾ, ಅಜ್ಜೀ ಮತ್ತು ಮಕ್ಕಳು ಹಾಡ್ ಹಾಡ್ತಿದ್ದು ನಿಂಗ್ ಕೇಳಿಸ್ತೇನ, ಗಮನಿಸಿದಿಯಾ ಹ್ಯಾಂಗ? ಅವರು ನಂ ಬದುಕನ್ನೇ ಹಾಡ್ಯಾಗಸಾರ ಅನಸುತ್ತ" ಅಂದಳು. ಮುಂದುವರೆದು "ದಿನ ಬೆಳಗಾದ್ರ ಸೂರ್ಯ ತನ ಕಾಯಕ ತಾನು ಮಾಡ್ಕೊಂಡ್ ಹೋಗೂ ಅಂಗ ನೀ ಕೂಡ ಸದಾ ನಿನ ಪಾಡಿಗೆ ಕಾಯಕ ಮಾಡಕೊಂಡ್ ಹೋಗ್ತಿ. ಅದಕ್ಕ ಆಗ, ನೀನು ಮತ್ತ ಆ ಸೂರ್ಯ ಒಂದೇ ಅನಸಿ, ನಿನಗ ನೀನೇ ನಮಸ್ತೀ ಹೌದಲ್ಲೋ ಅಂದೆ" ಎಂದಾಗ ಕುಂಬಾರಣ್ಣ "ನೀ ಶಾಣ್ಯಾ ಇದೀ ನೋಡ. ಎಷ್ಟು ಚಂದ ವಿಚಾರ ಮಾಡ್ತೀ. ನನಗ ನೆನಪೈತಿ. ನಾವಿಬ್ಬರು ಮದುವೀ ಆದಮ್ಯಾಲ ಮೊದಲ ಸಾರಿ ಕೂಡಲಸಂಗಮಕ್ಕ ಹೋಗಿದ್ದಾಗ ಬಸವಣ್ಣನವರ ಐಕ್ಯಸ್ಥಳಾನೇ ನೋಡತ ಗಂಟೆಗಟ್ಲೆ ಸುಮ್ನೆ ಕುಂತುಬಿಟ್ಟಿದ್ದೀ. ನಿನ್ನನ್ನು ನೋಡ್ತಾ ನಾನೂ ಹಾಂಗ ಕೂತಿದ್ದಿ. ಆಮ್ಯಾಲ ನೀನು "ನನ ಮನಸೊಳಗ ಒಂದು ವಿಚಾರ ಐತಿ. ಏನಂದರ ನಾವಿಬ್ಬರೂ ಕೂಡಿ ಕುಂಬಾರಿಕೀ ಕಾಯಕ ಮಾಡೂಣು. ನಂ ಕಾಯಕದಿಂದ ನಾವು ಗುರುತಿಸಿಕೊಳ್ಳೋಣು. ನಮಗ ಹೆಸರೇ ಬ್ಯಾಡ ಅನಸತೈತಿ" ಅಂದಿ. ಆಗ ನನ ಮನಸಿಗೆ ಅದು ಆಗದೀ ಛಲೋ ವಿಚಾರ ಅನಸ್ತು.

ಇಬ್ಬರೂ ಹಂಗೇ ಕಾಯಕದಾಗ ತೊಡಗಿಸಿಕೊಂಡೇವ ನೋಡ" ಅಂದಾಗ ಅವಳು ಮುಗುಳ್ನಕ್ಕಳು. ಮತ್ತೆ ಮುಂದುವರೆದು ಕುಂಬಾರಣ್ಣ ಹೇಳಿದ "ನಾವು ಸತ್ಯ ಶುದ್ಧ ಕಾಯಕ ಮಾಡಕೊಂಡು ತ್ರಿವಿಧ ದಾಸೋಹದಲ್ಲಿ ತೊಡಗಬೇಕ. ಮಹಾಂತ ಶಿವಯೋಗಿಗಳು "ಕುಂಬಾರಿಕಿಗಿ ಬಾಳ ದೊಡ್ಡ ಇತಿಹಾಸನೇ ಅದ ನೋಡ. ಮಣ್ಣು ನೀರು ಬೆಂಕಿ ಗಾಳಿ ಆಕಾಶ ಹೀಗ ಎಲ್ಲ ಪಂಚಭೂತಗಳನ್ನ ಅಳವಡಿಸಿಕೊಂಡ ಒಂದೇ ಕಾಯಕ ಅಂದ್ರ ಕುಂಬಾರಿಕಿ. ನಿನ ಹತ್ತರ ಮಡಿಕೆ ಕುಡಿಕೆಗಳನ್ನ ಕೊಳ್ತೇವಿ ಅಂತ ಮಂದಿ ಅಂತಾರ. ಆದರ ನನಗನಸತೈತಿ ಅವರು ಕೊಳ್ಳೋದು ಬಯಲನ್ನ. ಒಂದಪಾ ನೀನು ಮಣ್ಣ ಮುದ್ದೀನೇ ಕೊಟ್ಟರ ತಗೋತಾರೇನೂ? ಮಂದಿಗ ಬಯಲು ಹಿಡಿದು ಕೊಂಡಾಂವ ನೀನು. ಇಹದ ಅರ್ಥ ಒಂದಾದರ ಪರದ ಅರ್ಥಾನೇ ಬ್ಯಾರಿ ನೋಡ. ಅಂತಾ ಪರಮ ಕಾಯಕಾನಪಾ ಕುಂಬಾರಿಕಿ. ಏನ ಇತಿಹಾಸ ಐತಿ. ಗೋರಾ ಕುಂಬಾರ, ಕುಂಬಾರ ಗುಂಡಯ್ಯನಂತೋರು ಈ ಕಾಯಕಾನ ಹಿಡಿದು ಶರಣರಾದರಪಾ.

ಗೋರಾ ಕುಂಬಾರ ಎಲ್ಲರ ಬುರುಡೇ ತಟ್ಟೀನೇ ಭಕ್ತ ಹೌದೋ ಅಲ್ಲವೋ ಅಂತ ಅರುಹಿದ ಅಂತಾರ. ಗುಂಡಯ್ಯ ಮಡಕೀ ತಟ್ಟಿ ತಟ್ಟಿ ಹೊರಡಿಸಿದ ತಾಳಬದ್ಧ ನಾದಕ್ಕ ನಟರಾಜನೇ ಬಂದು ನಟನ ಮಾಡಿದ ಅಂತಲೂ ಹೇಳತಾರ. ನಂಮ ಶರೀರಕ್ಕೂ ಘಟ ಅಂತಾರ, ನಿನ ಮಡಕೇಗೂ ಘಟ ಅಂತಾರೋ ಕುಂಬಾರಣ್ಣ" ಹೀಂಗ ಒಂದೊಂದ ವಿಚಾರಾನ ನಾನು ಅವರ ಬಳಿ ಹೋದಾಗೆಲ್ಲ ಕೂರಿಸಿಕೊಂಡು ಹೇಳ್ಯಾರ. ಮಂದಿಯ ಬದುಕಲ್ಲಿ ಹುಟ್ಟಿನಿಂದ ಸಾವಿನತನಕ ನಾವು ಮಾಡೋ ಮಡಕೀ ಕುಡಕೀಗಳು ಬೇಕಾಗ್ತವ ಹೌದಲ್ಲೋ. ಆಕಾರ ಸರಿಯಾಗಿ ಕೊಟ್ಟು ಅದಕ್ಕ ತಕ್ಕಂತ ಬಾಯಿಮಾಡಿ ನುಣ್ಣಗ ಹದವಾಗಿ ಮಾಡಿದ ಮಡಕಿಗಳು ಮಂದಿ ಮೆಚ್ಚೋವಂತ ನಾದ ಹೊರಡಸ್ತಾವ. ನೀನು ತಿದ್ದಿ ನುಣ್ಣಗ ಸವರಿ ಕುಸುರೀ ಮಾಡಿ ಕೊಡೋ ಹಣತಿಗಳು ಬೆಳಕ ಹರಡತಾವ. ಇಂಥ ಕಾಯಕದಾಗ ನಮ್ಮನ್ನ ತೊಡಗಿಸಿಕೊಳ್ಳೂದು, ಎಂತೆಲ್ಲ ಪರಂಪರಿ ಐತಿ ಅದರೊಳಗ ನಾವೂ ಭಾಗೀ ಆಗಬೇಕ ಅನ್ನೂದು ನನಗ ಅಗದೀ ಚಲೋ ಅನಸತೈತಿ" ಅನ್ನುತ್ತ "ಬದುಕಿಗ ಬೇಕಾದಂತ ಇಂತ ಕಾಯಕ ಮುಂದುವರೀಬೇಕ. ಮಂದೀನೂ ಕೈಜೋಡಿಸಬೇಕ. ನಮ ಕಾಯಕ ಚಲೋ ಅನ್ನಿಸಿದರ ಅವರೇ ಕತೀ ಕಟ್ತಾರ, ಹಾಡ್ತಾರ ಅದರಾಗ ನಾವಿರ್ತೇವಿ, ನಂ ಕಾಯಕವಿರತೈತಿ. ನಂಮ ಬದುಕಿನ ಮ್ಯಾಲ ಯಾರೋ ಒಬ್ಬ ಒಂದು ಒಕ್ಕಣೆನು ಬರಿಬೋದ. ನಾನ್ ನಿನ್ನನ್ನ ಹಂಗಿಸಿದ್ದನ್ನೂ ಬರೀತಾನ ಅಂವ. ನಿನ ಕಣ್ಣಿಂದ ಎರಡು ಹನಿ ಬಿದ್ದದ್ದು ಯಾರಿಗೂ ಕಾಣಲಿಲ್ಲ ಅಂತಾನೂ ಆತ ಬರಿಬೋದು. ಆದರ ಕುಂಬಾರಣ್ಣನ ಒಳಗಣ್ಣಿಗೆ ಆ ಎರಡು ಹನಿ ಕಂಡವು ಅನ್ನೋದು ಆ ಮನಿಷ್ಯಾನಿಗೆ ಗೊತ್ತಿರೋದಿಲ್ಲ ನೋಡ" ಅಂತ ಪರದಿಂದ ಇಹಕ್ಕೆ ತನ್ನ ಮಾತನ್ನು ತಂದು ನಿಲ್ಲಿಸಿದ. ತಕ್ಷಣ ಅವನ ಮಡದಿ "ಹೈ ತೆಗೀ, ಅಷ್ಟು ಒಳ್ಳೇದನ್ನ ಹೇಳಿ ಕಡೀಲಿ

ಯಾಕ ಹೀಗಂತಿ. ಒಳಗಣ್ಣಿಗೆ ಏನೇನೆಲ್ಲ ಕಾಣುತದ ಅಂತ ಮೂರನೆಯವರಿಗೆ ಗೊತ್ತಾಗೋದು ಅಷ್ಟು ಸುಲಭ ಏನಲ್ಲ. ಮುಂದಿನ ಪೀಳಗೀ ಮಂದಿ ಶಾಣ್ಯಾರಿರ್‍ತಾರ. ನಂ ಬದುಕಿನಾಗಿರೋ ಒಳ್ಳೇದನ್ನೆಲ್ಲ ಅವರೂ ಅನುಸರಿಸಲಿ ಅಂತ ಹಾರೈಸೋದು ಒಳ್ಳೆದಪಾ" ಎನ್ನುತ್ತ ಆಕೆ "ಸಂಜೀ ಮುಂದ ನಾನು ಮಾಡಿದ್ದನ್ನ ಹೊಟ್ಯಾಗ ಹಾಕೊಂಡು ಮರೆತುಬಿಡು" ಅಂದ್ಯಲ್ಲ ಅದು ಮರಿಯೋ ವಿಚಾರ ಅಲ್ಲಪಾ. ನನ್ನ ಹೊಟ್ಟೀ ಮಡಕಿ ಒಳಗ ಒಂದು ಕುಡಕೀ ಆಗೋ ಹಂಗೈತಿ" ಎಂದು ಹೇಳಿದಾಗ ಕುಂಬಾರಣ್ಣ ಹಿರಿ ಹಿರಿ ಹಿಗ್ಗಿದ. ತಮ್ಮ ಮನೆಯ ಬಳ್ಳಿಯಲ್ಲೊಂದು ಹೂ ಬಿಡುತ್ತದೆನ್ನುವ ಸುಳಿವು ಆತನ ಆನಂದವನ್ನು ಇಮ್ಮಡಿಗೊಳಿಸಿತ್ತು. ಆ ಸಂತಸದಲ್ಲಿ ಹೆಂಡತಿಯನ್ನು ಪ್ರೀತಿಯಿಂದ ಹತ್ತಿರಕ್ಕೆ ಸೆಳೆದು ಆಕೆಯ ಹೊಟ್ಟೆಯನ್ನು ನೇವರಿಸುತ್ತ ಆತ ಮುತ್ತಿನ ಮಳೆಗರೆಯುತ್ತಿದ್ದಂತೆ ಪಕ್ಕದಲ್ಲೇ ಇದ್ದ ಹಣತೆ ತಾನೂ ನಾಚಿ ಬೆಳಕನ್ನು ಮಂದಗೊಳಿಸಿಕೊಂಡಿತು.

ಕುಂಬಾರಣ್ಣ ಮತ್ತು ಆತನ ಮಡದಿಯ ನಡುವಿನ ಅನ್ಯೋನ್ಯ ದಾಂಪತ್ಯದ ದಿನನಿತ್ಯದ ಬದುಕಿನಲ್ಲಿ ಸರಸವೂ ಅಧ್ಯಾತ್ಮವೂ ಸಮರಸದಲ್ಲಿ ಬೆರೆತಿರುವುದನ್ನು ಕಂಡು ಲೇಖಕನ ಹೃದಯ ತುಂಬಿಬಂತು. ಅವನಿಗರಿವಾಗುವುದಕ್ಕೆ ಮುಂಚೆಯೇ ಆ ಅನಾಮಿಕ ಆದರೆ ಅನನ್ಯ ಕಾಯಕಜೀವಿಗಳಿಗೆ ಅವನ ತುಂಬುಹೃದಯದ ಹಾರೈಕೆ ಲೇಖನಿಗೆ ಸರಿದು ಹಾಳೆಯ ಮೇಲೆ ಹಾಡಿನ ಚರಣವಾಗಿ ಮೂಡಿಬಂತು.

ಕುಂಬಾರಣ್ಣನ ಮನಿ ತುಂಬಾ ಚಂದಾಗಿರಲಿ
ಗೊಂಬೀಯಂತಿರೋ ಮಗು ಬರಲಿ, ಗೊಂಬೀಯಂತಿರೋ
ಮಗು ಬರಲಿ ಮನಿಯೊಳಗ ಅಂಬೀಗಾಲಿಕ್ಕುತ ನಲಿಯಾಲಿ.

□

ಹಗಲನಿರುಳು ಮಾಡಿ, ಇರುಳ ಹಗಲ ಮಾಡಿ
ಆಚಾರವ ಅನಾಚಾರವ ಮಾಡಿ, ಅನಾಚಾರವ ಆಚಾರವ ಮಾಡಿ
ಭಕ್ತನ ಭವಿಯ ಮಾಡಿ, ಭವಿಯ ಭಕ್ತನ ಮಾಡಿ
ನುಡಿವವರ ಮಾತ ಕೇಳಲಾಗದು ಗುಹೇಶ್ವರಾ.

- ಅಲ್ಲಮಪ್ರಭು

# ಹೆಸರುಗಳ ಹೆಣಿಗೆ – ಜನಪದರ ಭಾಷಿಕ ಚಮತ್ಕಾರಗಳು

ಡಾ. ಎನ್. ಎಮ್. ಗಿರಿಜಾಪತಿ

ಈ ಭಾಷಿಕ ಚಮತ್ಕಾರಗಳನ್ನು ಇಂದು ನಾವು ನಮ್ಮ ಮಕ್ಕಳಿಗೆ ಕಲಿಸಲು ಪ್ರಯತ್ನಿಸಿದಲ್ಲಿ ಅವರ ವಾಕ್ ವ್ಯವಹಾರಿಕ ಪ್ರಪಂಚ ವಿಸ್ತರಗೊಳಿಸಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಅಂತ್ಯಾಕ್ಷರಿ ಎನ್ನುವ ಹಾಡುಗಳ ಕಿರುಚಾಟಕ್ಕಿಂತ ಬೌದ್ಧಿಕ ಕಸರತ್ತಿಗೆ ಇಲ್ಲಿ ಆದ್ಯತೆ ಇರುವುದರಿಂದ ಮಕ್ಕಳ ಬುದ್ಧಿಮತ್ತೆಯ ತೀಕ್ಷ್ಣತೆಗೂ ಇಲ್ಲಿ ಅವಕಾಶವಿರುತ್ತದೆ.

ಕನ್ನಡ ನಾಡು ಜನಪದರ ಸಂಸ್ಕೃತಿಯಿಂದ ಸಮೃದ್ಧಿಯನ್ನು ಸಾಧಿಸಿಕೊಂಡು ಬಂದಿರುವ ಅಪರೂಪದ ನೆಲ. ದೇಶದ ಇತರ ಪ್ರದೇಶಗಳಲ್ಲಿ ಕಾಣಸಿಗದಷ್ಟು ವೈವಿಧ್ಯಮಯವಾದ ಮತ್ತು ಬಹುಳತ್ವದಿಂದೊಡಗೂಡಿದ ಹಾಗೆಯೇ ವಿಭಿನ್ನ ಆಯಾಮಗಳನ್ನೊಳಗೊಂಡ ಜನಪದ ಸಾಹಿತ್ಯ, ಸಂಗೀತ, ಕಲೆಗಳಿವೆ. ಅದರಲ್ಲಿಯೂ ಪ್ರದರ್ಶನಕಲೆಗಳು, ಕ್ರೀಡೆಗಳು, ವೈದ್ಯಪದ್ಧತಿಗಳು, ಆಹಾರ ಕ್ರಮಗಳು, ವೇಷ–ಭೂಷಣಗಳು ಹಬ್ಬ, ಜಾತ್ರೆಗಳಂತಹ ಉತ್ಸವಗಳ ಸಂಭ್ರಮ, ಸಡಗರಗಳ ಹೆಗ್ಗಳಿಕೆಯನ್ನೊಳಗೊಂಡ ಜಾನಪದ ಸೊಗಡು, ಸೊಗಸಿಕೆಗಳು ಕನ್ನಡದ ಮಡಿಲು ತುಂಬಿಕೊಂಡಿವೆ. ಹಾಗಾಗಿ ಕನ್ನಡ ನೆಲದ ಜನಪದರೆಂದರೆ ಅವರು ಮಾರ್ಗಕಾರ ಹೇಳಿದಂತೆ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತ ಮತಿಗಳ್' ಎಂಬ ಮಾತು ಕುಮಾರವ್ಯಾಸನ ಭಾರತದ ಪದ್ಯಗಳು, ಲಕ್ಷೀಶನ ಕಾವ್ಯದ ನುಡಿಗಳು ರಾಮಾಯಣಕ್ಕೆ ಸಂಬಂಧಿಸಿದ ಇತರ ರಚನೆಗಳನ್ನು ಹಾಡಬಲ್ಲವರಾಗಿದ್ದರು ಎನ್ನುವುದಕ್ಕೆ ಮಾತ್ರ ಅನ್ವಯ ವಾಗುವುದಿಲ್ಲ. ಬದಲಿಗೆ ಇಲ್ಲಿನ ಪ್ರಯೋಗಮತಿಗಳ್ ಎನ್ನುವ ಪದ ಅವರು ರೂಪಿಸಿದ ಜನಪದ ಸಾಹಿತ್ಯದ ಬಹುಮುಖೀ ಪ್ರಕಾರಗಳಿಗೆ ಅನ್ವಯಿಸುತ್ತದೆ.

ತಮ್ಮ ಕೆಲಸದ ವೇಳೆಯಲ್ಲಿ ದಣಿವು ನೀಗಿಸಿಕೊಳ್ಳಲೆಂದು ಅಥವಾ ದಣಿವಾಗ ದಂತೆ ಮನಸ್ಸನ್ನು ಉಲ್ಲಾಸಗೊಳಿಸಿಕೊಂಡು ಕೆಲಸವನ್ನು ಚುರುಕಿನಿಂದ ನಿರ್ವಹಿಸಲೆಂದು ಅಲ್ಲದೆ ಬಿಡುವಿನ ವೇಳೆಯನ್ನು ಮಾತುಗಳನ್ನು ಹೊಸೆಯು

ವಿಕೆಯ ಮೂಲಕ ಮನರಂಜನೆಗೆಂಬಂತೆ ಬಳಸಿಕೊಳ್ಳುತ್ತಾ ಬರುತ್ತಿದ್ದ ಜನಪದರು ಕಟ್ಟುತ್ತಿದ್ದ ಮಾತಿನ ಮಂಟಪ ಇಂದಿನ ಅಂತಾಕ್ಷರಿ ಹಾಡುಗಳ ಹೆಣಿಗೆಗಳಿಗಿಂತ ಚುರುಕಾದ ಪದಚಮತ್ಕಾರಗಳಿಂದ ಕೂಡಿರುತ್ತಿದ್ದುದನ್ನು ನಾವು ಕಾಣುತ್ತೇವೆ. ವಿಶೇಷವಾಗಿ ಒಗಟು, ಒಡಪು, ಲೆಕ್ಕದ ಚಮತ್ಕಾರಗಳು, ಪದಗಳು, ಸವಾಲುರೂಪದ ಹಾಡುಗಳು, ಹೆಸರುಗಳನ್ನು ಪತ್ತೆಮಾಡುವ ಕಸರತ್ತುಗಳು ಇತ್ಯಾದಿ ವಿವಿಧಪ್ರಕಾರಗಳ ಮೂಲಕ ಗುರುತಿಸಬಹುದಾಗಿದೆ.

ಹೀಗೆ ಗುರುತಿಸಿಕೊಂಡು ನಾವು ನಮ್ಮ ಜನಪದರ ಭಾಷೆ, ಭಾಷೆಯ ಬಳಕೆಯ ಕ್ರಮ ಅಂದರೆ ಪದ ಬಳಕೆ, ಪದಗಳ ಜೋಡಣೆ, ಆ ಪದದ ಲಾಲಿತ್ಯ, ಅರ್ಥ, ಭಾವ, ಸಂದರ್ಭ ಇತ್ಯಾದಿ ಕುರಿತಂತೆ ಮೌಖಿಕ ಪರಂಪರೆಯ ಸಾಹಿತ್ಯ ರಚನೆಗಳಾದ ಪದ್ಯಗಳು ಅದರಲ್ಲಿ ತ್ರಿಪದಿ, ಚತುಷ್ಪದಿ, ಲಾವಣಿಗಳು, ಸವಾಲಿನ ಪದಗಳು, ಗಾದೆಗಳು, ಒಗಡು, ಒಡಪು ಮೊದಲಾದವುಗಳನ್ನು ದಾಖಲಿಸಿಕೊಂಡು ಅವರ ಭಾಷಿಕ ಪ್ರಯೋಗಗಳ ಚಮತ್ಕೃತಿ, ಶೈಲಿ, ತಂತ್ರ, ಭಾವಬಂಧುರತೆ, ಆರ್ದ್ರತೆ, ಗೇಯತೆ ಮೊದಲಾದ ಅಭಿವ್ಯಕ್ತಿಕೌಶಲಗಳನ್ನು ಗ್ರಹಿಸುವ ಕೆಲಸ ಮಾಡುತ್ತಿದ್ದೇವೆ. ಭಾಷಾ ವಿಜ್ಞಾನಿಗಳು ಇವುಗಳನ್ನು ಆಧರಿಸಿ ಭಾಷೆಯೊಂದರ ಉಗಮದ ಸಿದ್ಧಾಂತಗಳನ್ನು ಚರ್ಚಿಸಲು ಅವಕಾಶಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಈ ನಮ್ಮ ಜನಪದರಲ್ಲಿ ಹೆಸರುಗಳನ್ನು ಗುರುತಿಸುವಲ್ಲಿನ ಚಮತ್ಕೃತಿಯ ಉಕ್ತಿಗಳು ಅಚ್ಚರಿ ಹುಟ್ಟಿಸುವಂತಿವೆ. ಇವುಗಳನ್ನು ನಾವು ಮೂರು ರೀತಿಗಳಲ್ಲಿ ಗುರುತಿಸಬಹುದಾಗಿದೆ. ಮದುವೆ ಮಂಗಳಕಾರ್ಯಗಳಲ್ಲಿ ಬಳಕೆಗೊಳ್ಳುವ ಒಡಪುಗಳು, ಗಣಿತರೂಪದಲ್ಲಿ ಬೆಸುಗೆಗೊಂಡಿರುವ ಹೆಸರುಗಳು (ಲೆಕ್ಕದ ಮಾದರಿಗಳ ಹೆಸರುಗಳು) ಹಾಗೂ ವ್ಯಕ್ತಿ ಅಥವಾ ಪದವಿಶೇಷತೆಗಳೊಂದಿಗೆ ಗುರುತಿಸಲಾಗುವ ಹೆಸರುಗಳು.

ಮೊದಲೆರಡು ಪ್ರಕಾರಗಳಲ್ಲಿ ಕೆಲವು ಕಡೆ ಮದುವೆ ಮೊದಲಾದ ಮಂಗಳಕಾರ್ಯಗಳಲ್ಲಿ ಗಂಡ-ಹೆಂಡತಿಯರಿಂಗ ಪರಸ್ಪರ ಹೆಸರುಗಳನ್ನು ಹೇಳಿಸುವಾಗಿನ ಉಕ್ತಿ ಚಮತ್ಕೃತಿ ಒಂದು ತೆರನಾಗಿ ಒಡಪುಗಳಂತೆ ಕಂಡರೆ ಅಂಕೆಗಳ ರೂಪದಲ್ಲಿ ಹೆಣಿಗೆ ಮಾಡಿಕೊಂಡು ಗುರುತಿಸಿಕೊಳ್ಳುವ ಜಾಣ್ಮೆಯನ್ನು ಒಗಟಿನಂತೆ ಕಾಣುತ್ತೇವೆ. ಈ ಎರಡೂ ಆಗಿರದ ಬಗೆ ಎಂಬಂತೆ ತೋರುವ ವ್ಯಕ್ತಿ ಅಥವಾ ಪದ ವಿಶೇಷತೆಗಳೊಂದಿಗಿನ ಹೆಸರುಗಳನ್ನು ಕುರಿತಂತೆ ತಿಳಿಯಬೇಕಿದೆ. ಇದರಲ್ಲಿ ಕವಿಗಳು, ರಾಜರು, ಸಂತರು, ದಾರ್ಶನಿಕರು, ವಚನಕಾರರು, ಕೀರ್ತನೆಕಾರರು ಮೊದಲಾದವರ ಹೆಸರುಗಳೊಂದಿಗೆ ಪ್ರಾಣಿಗಳು, ನದಿಗಳು, ಊರುಗಳು ಮೊದಲಾದ ಯಾವುದೇ ರೀತಿಯ ಹೆಸರುಗಳು ಸಹ ಪೋಣಿಸಿ

ಕೊಂಡಂತಿರುತ್ತವೆ. ಹೀಗೆ ಪೋಣಿಸಿದ ಈ ಹೆಣಿಗೆಗಳೆಲ್ಲ ಅತ್ಯಂತ ಚಮತ್ಕಾರದಿಂದ ಕೂಡಿರುತ್ತವೆ. ಜೊತೆಗೆ ಅಕ್ಷರಸ್ಥ ಪಂಡಿತರಿಗೂ ಸಹ ತಟ್ಟನೆ ಉತ್ತರಗಳನ್ನು ಹೊಳೆಯಲು ಬಿಡದೆ ಸ್ವಲ್ಪ ಮಟ್ಟಿಗಿನ ಕಸರತ್ತುಗಳಿಗೆ ಮುಂದಾಗುವಂತೆ ಮಾಡುವ ಚಾಕಚಕ್ಯತೆಗಳು ಇಲ್ಲಿವೆ. ಇದು ಸವಾಲಿನ ರೀತಿ ಆರಂಭವಾಗುತ್ತದೆ.

ಹೆಸರು ಕಟ್ಟೋರು ಮುಂದಾಗ್ರಿ
ನೀವು ಕಟ್ಟಿದ್ದನ್ನು – ಕೆಸರಾಗಿನ ಕಮಲಾದಂಗ ನಾವು ಕಾಣಿಸ್ತೇವೆ.
ಸೋತವ್ರು ಹಿಂದಾಗ್ರಿ – ಬಿಡಸವ್ರು ಮತ್ತೆ ಮುಂದಾಗ್ರಿ

ಇಲ್ಲಿನ ಪ್ರತಿ ಪ್ರಯೋಗಗಳು ಸಹ ಆಟದ ರೂಪದಲ್ಲಿ ನಡೆಯುವಂಥವು ಗಳಾಗಿರುತ್ತವೆ. ಆದ್ದರಿಂದ ಪರಸ್ಪರ ಇದಿರು–ಬದಿರಾಗಿ ಕುಳಿತುಕೊಳ್ಳುವ ಎರಡು ಗುಂಪುಗಳಲ್ಲಿ ಒಂದು ಗುಂಪಿನವರು ಹೆಸರುಗಳನ್ನು ನಿಗೂಢವಾಗಿಟ್ಟು ಕೊಳ್ಳುವ ತಂತ್ರಗಳ ಮೂಲಕ ಹೇಳಿದ್ದನ್ನು ಇನ್ನೊಂದು ಗುಂಪಿನವರು ಕೇಳಿಸಿಕೊಂಡು ಆ ಗೂಢಾಕ್ಷರಗಳನ್ನು ಪತ್ತೆಮಾಡಿ ಹಾಗೆ ಕ್ರಮವಾಗಿ ಜೋಡಿಸಿಕೊಂಡು ಒಂದೊಂದಾಗಿ ಕೂಡಿಸುತ್ತಾ ಹೆಸರಿನ ಗೂಢತೆಯನ್ನು ಬಿಡಿಸುತ್ತಾ ಬರುತ್ತಾರೆ. ಆದರೆ ಇಲ್ಲಿ ಬರೆದುಕೊಳ್ಳುವುದರ ಮೂಲಕ ಪದಗಳನ್ನಾಗಲೀ, ಆಯಾ ಪದಗಳಲ್ಲಿನ ಅಕ್ಷರಗಳನ್ನಾಗಲೀ ಜೋಡಿಸಿಕೊಳ್ಳಲು ಅವಕಾಶವಿರುವುದಿಲ್ಲ. ಹಾಗೆಯೇ ಕಿವಿಗೊಟ್ಟು ಕೇಳಿದ್ದನ್ನು ಮನಸ್ಸಿಗೆ ತಂದುಕೊಂಡು ಹೇಳಬೇಕು, ಇನ್ನು ವಿಶೇಷ ನಿಬಂಧನೆ ಎಂದರೆ ಇಲ್ಲಿ ಒಮ್ಮೆ ಮಾಡಲಾದ ಆ ಹೆಸರು ಹಾಕುವ ಸವಾಲು ಅಥವಾ ಕೇಳಿರುವ ಪ್ರಶ್ನೆಗಳನ್ನು ಮತ್ತೊಮ್ಮೆ ಪುನರಾವರ್ತನೆ ಸಹ ಮಾಡಲಾಗುವುದಿಲ್ಲ. ಒಮ್ಮೆ ಗ್ರಹಿಸಿದ್ದನ್ನು ಆಧರಿಸಿಯೇ ಉತ್ತರಿಸಬೇಕಾಗಿರುತ್ತದೆ.

1. ನಾಲ್ಕಕ್ಷರ ಅವೆ, ಮೊದಲೆರಡು ಅಕ್ಷರ ಭೂಮಿ ಎಂದಾದ್ರೆ, ಕಡೆ ಎರಡು ಅಕ್ಷರ ಗಂಡ ಅಂತಾಗುತ್ತೆ, ಮೊದಲನೇದು ಕೊನೇದು ಸೇರಿದ್ರೆ ಬುದ್ಧಿ ಅಂತಾಗುತ್ತೆ. ಹೆಸರು ಏನ ಹೇಳುತ್ತೇ ಬಿಡಿಸಿ ಹೇಳ್ರಿ?

2. ಇಲ್ಲೊಂದು ಹೆಸ್ರು ಐದಕ್ಷರದ್ದು ಇದರಲ್ಲಿ ನಾಲ್ಕು – ಐದನೆಯ ಅಕ್ಷರಗಳು ಕೂಡಿದ್ರೆ ಪ್ರಾಣಿ, ಐದು–ಮೂರನೆಯ ಅಕ್ಷರ ಸೇರಿದ್ರೆ – ಕುದುರೆ, ಐದು–ಎರಡನೆಯ ಅಕ್ಷರ ಸೇರಿದ್ರೆ ಕಾಲ, ಎರಡು–ಮೂರನೆಯ ಅಕ್ಷರ –ಕರುಣೆ, ಒಂದು–ಎರಡು–ಮೂರನೆಯ ಅಕ್ಷರಗಳು ಜೊತೆಯಾದ್ರೆ ಹುಟ್ಟು ಅನ್ನೋ ಅರ್ಥ ಬರ್ತವೆ ಅದು ರಾಜನ ಹೆಸರು. ಆದರೆ ಆ ರಾಜ ಯಾರು?

3. ಇಲ್ಲೊಬ್ಬ ಐದು ಅಕ್ಷರದೆಸ್ರು ಇರೋವ್ರು ಇದಾರೆ, ಈ ಐದ್ರಲ್ಲಿ ಒಂದು, ಎರಡು ಹಾಗೂ ಮೂರನೆ ಅಕ್ಷರ ಸೇರ್ರಿದ್ರೆ ಬೀಸಣಿಗೆ ಆಗುತ್ತೆ. ನಾಲ್ಕು,

ಎರಡು ಮತ್ತು ಮೂರನೆ ಅಕ್ಷರ ಕೂಡಿಸಿದ್ರೆ ಯುದ್ಧ ಆಗ್ತೈತಿ. ಒಂದು ಮತ್ತೆ ಮೂರನೆ ಅಕ್ಷರ ಸೇರಿದ್ರೆ ದೂತ ಬರ್ತಾನೆ, ನಾಲ್ಕು ಮೂರನೇ ಅಕ್ಷರಗಳು ಸೇರಿದ್ರೆ ಹಾರ ಆಗ್ತೈತಿ, ಎರಡು ಮೂರನೆ ಅಕ್ಷರಗಳು ಭೂಮಿ ಮೇಲೆ ಬೆಳೆಯೋದನ್ನು ಕಾಣಿಸ್ತೈತೆ. ಆತ ಕವಿ ಹಾಗಾದರೆ ಆತನ ಹೆಸ್ರೇನು?

4. ಇನ್ನೊಬ್ಬ ಐದಕ್ಷರದ ಕವಿ. ಇದ್ರಾಗೆ ಎರಡು, ಐದನೇ ಅಕ್ಷರ ಕೂಡಿಸಿದ್ರೆ ತಿಂಗಳಾಗ್ತೈತಿ. ಐದು, ಮೂರು ಸೇರ್ಸಿದ್ರೆ ಹಾರ ಆಗ್ತೈತಿ. ಎರಡು ಮೂರನೇದಕ್ಕೆ ಕೂಡಿದ್ರೆ ಕಾಮ ಅಂತ ಹೇಳತೈತಿ. ನಾಲ್ಕು, ಐದು ಸೇರ್ಸಿದ್ರೆ ಒಬ್ಬ ಋಷಿ ಹೆಸ್ರು ಹೊರಡತೈತಿ. ಒಂದು, ಎರಡು ಮೂರನೆ ಅಕ್ಷರ ಸೇರಿಸಿದ್ರೆ ಮಗ ಅಂತಾಗ್ತೈತಿ ಆತ ಯಾರು?

5. ಇಲ್ಲೊಂದು ನಾಲ್ಕಕ್ಷರ ಅದಾವೆ. ಒಂದು ಎರಡನೇ ಅಕ್ಷರ ಬೊಮ್ಮ (ಬ್ರಹ್ಮ), ಒಂದು ನಾಲ್ಕು ಆಯುಧ, ಮೂರು ಎರಡು ಆನೆ, ನಾಲ್ಕು ಎರಡು ರಜೆ, ಎರಡು ಮೂರನೇ ಅಕ್ಷರಗಳು ಪ್ರಪಂಚ ಅನ್ನೋ ಅರ್ಥ ಬರುತ್ತೆ ಇದೇನಂತ ಹೇಳ್ರೀ?

6. ಇಲ್ಲಿ ನಾಲ್ಕಕ್ಷರ ಐದಾವೆ. ಇದರಲ್ಲಿ ಎರಡು ಮೂರನೆಯ ಅಕ್ಷರ ಕೂಡಿದ್ರೆ ನಾಣ್ಯ ಅಂತಾಗತೈತಿ, ಮೂರು ನಾಲ್ಕು ಸೇರಿದ್ರೆ ದೇವತೆ, ಎರಡು ನಾಲ್ಕರಲಿ ಒಂದು ರುಚಿ ಬರ್ತೈತಿ, ಒಂದು ನಾಲ್ಕು ಜೋಡಿಸಿದ್ರೆ ಕ್ಷಾಮ ಆಗತೈತಿ, ಎಲ್ಲವೂ ಸೇರಿದ್ರೆ ಅವ ರಾಕ್ಷಸ ಆಕ್ಕಾನ ಅವ್ವ ಯಾರು ಹೇಳ್ರಿ?

7. ಇಲ್ಲೂ ಸಹ ನಾಲ್ಕೇ ಅಕ್ಷರಗಳಿವೆ. ಒಂದಕ್ಕೆ ನಾಲ್ಕು ಸೇರಿದ್ರೆ ಸಮಾಧಿ, ಎರಡು ನಾಲ್ಕು ಕೂಡಿಸಿದ್ರೆ ರಸ್ತೆ, ಒಂದು ಮೂರು ಜೋಡ್ಸಿದ್ರೆ ಪಟ್ಟಣ ಮತ್ತೆ ಒಂದೂರು ಹೆಸರು ಬರುತ್ತೆ ಇದು ಒಂದು ನದಿ ಹೆಸ್ರು ಗುರುತಿಸ್ರಿ?

8. ನನ್ನಲ್ಲಿರೋದು ಮೂರು ಅಕ್ಷರ. ಒಂದು ಮೂರು ಸೇರಿದ್ರೆ ಕೋಗಿಲೆ ಬರತೈತಿ, ಮೂರಕ್ಕೆ ಒಂದು ತಾಗಿದ್ರೆ ಮಂಗ ಬರ್ತೈತಿ, ಎರಡಕ್ಕೆ ಮೂರು ಕೂಡಿದ್ರೆ ಸ್ವರ್ಗನೇ ಆಗ್ತೈತಿ ನಾನೊಂದು ಆಯುಧ ನನ್ನ ಹೆಸ್ರು ಹೇಳ್ತಿರಾ?

9. ಇಲ್ಲಿ ಕಾಣೋದು ನಾಲ್ಕಕ್ಷರ. ಒಂದಕ್ಕೆ ಎರಡನೇದು ಸೇರಿದ್ರೆ ಸೀಮೆ ಆಗ್ತದೆ, ಒಂದಕ್ಕೆ ಮೂರನೇದು ಕೂಡಿದ್ರೆ ಪುಣ್ಯಸ್ಥಳ ಕಾಣ್ತದೆ, ಒಂದು, ನಾಲ್ಕು ಮತ್ತು ಎರಡನೆಯದು ಸೇರಿದ್ರೆ ಕುಸ್ತಿ ಕಲಿಸ್ತದೆ, ಮೂರನೆಯದಕ್ಕೆ ಒಂದು ಸೇರಿದ್ರೆ ಹೋಮ ನಡೆಸ್ತೈತೆ, ಮೂರಕ್ಕೆ ಎರಡು ಕೂಡಿದ್ರೆ ನಮ್ಮನ್ನ ಲಂಬಾಣಿ ಜನ ಅಂತ ಹೇಳ್ತೈತಿ, ಈ ವಸ್ತು ಎಲ್ಲರ ಮನ್ಯಾಗೂ ಮತ್ತು ಕೈಯಾಗೂ ಇರತೈತಿ ಏನೂಂತ ಹೇಳ್ರೀ ?

10. ಆರಕ್ಕರದ ಅಕ್ಕರೆಯ ವ್ಯಕ್ತಿ ಈತ. ಒಂದಕ್ಕೆ ನಾಲ್ಕನೆ ಅಕ್ಷರ ಸೇರಿದ್ರೆ ಪಟ್ಟಣ, ಮೂರು ನಾಲ್ಕು ಸೇರಿದ್ರೆ ಬೆಲೆ, ಎರಡು ಮೂರು ನಾಲ್ಕನೇದನ್ನು ಕೂಡಿಸಿದ್ರೆ ಕಿಂಡಿ ಆಗುತ್ತೆ. ಹಾಗೇನೆ ಐದಕ್ಕೆ ಆರು ಹೊಂದಿಸಿದ್ರೆ ಸೇವಕ, ಆರಕ್ಕೆ ನಾಲ್ಕು ಪೋಣಿಸಿದ್ರೆ ಹಾರ, ಆರು, ನಾಲ್ಕು, ಐದು, ಎರಡು ಕೂಡಿದ್ರೆ ಶೂರ ಎಂದೂ, ಎರಡಕ್ಕೆ ಒಂದು ಬಂದ್ರೆ ಹೊಡೆದಾಟ ಅನ್ನೋ ರೂಪ ಬರುತ್ತೆ.

ಹಾಗಾದ್ರೆ ಆತನ ಹೆಸ್ರು ಹೇಳ್ತಿರಲಾ?

**ಉತ್ತರಗಳು:**

1. ಒಂದು, ಹಾಗೂ ಎರಡನೆಯ ಅಕ್ಷರ – ಮಹೀ (ಭೂಮಿ)
ಮೂರು ಮತ್ತು ನಾಲ್ಕನೆಯ ಅಕ್ಷರ – ಪತಿ
ಒಂದು ಮತ್ತು ನಾಲ್ಕನೆಯ ಅಕ್ಷರ – ಮತಿ (ಬುದ್ಧಿ)
ನಿಜವಾದ ಹೆಸರು: **ಮಹೀಪತಿ (ರಾಜ)**

2. ನಾಲ್ಕು–ಐದನೆಯ ಅಕ್ಷರ – ಸಿಂಹ
ಐದು–ಮೂರನೆಯ ಅಕ್ಷರ – ಹಯ
ಐದು–ಎರಡನೆಯ ಅಕ್ಷರ – ಹದ (ಕಾಲ)
ಎರಡು–ಮೂರನೆಯ ಅಕ್ಷರ – ದಯ
ಒಂದು–ಎರಡು–ಮೂರನೆಯ ಅಕ್ಷರ – ಉದಯ (ಹುಟ್ಟು)
ರಾಜನ ಹೆಸರು: **ಉದಯ ಸಿಂಹ**

3. ಒಂದು, ಎರಡು ಹಾಗೂ ಮೂರನೆ ಅಕ್ಷರ – ಚಾಮರ
ನಾಲ್ಕು, ಎರಡು ಮತ್ತು ಮೂರನೆ ಅಕ್ಷರ – ಸಮರ
ಒಂದು ಮತ್ತೆ ಮೂರನೆ ಅಕ್ಷರ – ಚಾರ
ನಾಲ್ಕು ಮೂರನೆ ಅಕ್ಷರ– ಸರ
ಎರಡು ಮೂರನೆ ಅಕ್ಷರ – ಮರ
ಕವಿಯ ಹೆಸರು: **ಚಾಮರಸ**

4. ಎರಡು, ಐದನೆಯ ಅಕ್ಷರ – ಮಾಸ (ತಿಂಗಳು)
ಐದು ಮೂರನೆಯ ಅಕ್ಷರ – ಸರ
ಎರಡು ಮೂರನೆಯ ಅಕ್ಷರ – ಮಾರ (ಮನ್ಮಥ, ಕಾಮ)
ನಾಲ್ಕು ಐದನೆಯ ಅಕ್ಷರ – ವ್ಯಾಸ

ಒಂದು, ಎರಡು ಮೂರನೆ ಅಕ್ಷರ – ಕುಮಾರ
ಕವಿಯ ಹೆಸರು: **ಕುಮಾರವ್ಯಾಸ**

5. ಒಂದು ಎರಡನೆಯ ಅಕ್ಷರ – ಅಜ (ಬ್ರಹ್ಮ)
ಒಂದು ನಾಲ್ಕನೆಯ ಅಕ್ಷರ – ಅರ (ಆಯುಧ)
ಮೂರು ಮತ್ತು ಎರಡನೆಯ ಅಕ್ಷರ – ಗಜ
ನಾಲ್ಕು ಎರಡನೆಯ ಅಕ್ಷರ – ರಜ
ಎರಡು ಮತ್ತು ಮೂರನೆಯ ಅಕ್ಷರ – ಜಗ
ಇಲ್ಲಿನ ಹೆಸರು: **ಅಜಗರ**

6. ಎರಡು ಮೂರನೆಯ ಅಕ್ಷರ – ಕಾಸು (ನಾಣ್ಯ)
ಮೂರು ನಾಲ್ಕನೆಯ ಅಕ್ಷರ – ಸುರ (ದೇವತೆ)
ಎರಡು ನಾಲ್ಕನೆಯ ಅಕ್ಷರ – ಕಾರ (ಖಾರ)
ಒಂದು ನಾಲ್ಕನೆಯ ಅಕ್ಷರ – ಬರ (ಕ್ಷಾಮ)
ಎಲ್ಲಾ ಅಕ್ಷರ ಕೂಡಿಸಿದ್ರೆ – **ಬಕಾಸುರ**

7. ಒಂದು ನಾಲ್ಕನೆಯ ಅಕ್ಷರ – ಗೋರಿ (ಸಮಾಧಿ)
ಎರಡು ನಾಲ್ಕನೆಯ ಅಕ್ಷರ – ದಾರಿ (ರಸ್ತೆ)
ಒಂದು ಮತ್ತೆ ಮೂರನೆ ಅಕ್ಷರ – ಗೋವಾ
ನದಿ : **ಗೋದಾವರಿ**

8. ಒಂದು ಮತ್ತೆ ಮೂರನೆ ಅಕ್ಷರ – ಪಿಕ
ಮೂರು ಮತ್ತು ಒಂದನೆ ಅಕ್ಷರ – ಕಪಿ
ಎರಡು ಮತ್ತು ಮೂರನೆಯ ಅಕ್ಷರ – ನಾಕ
ಆಯುಧ : ಪಿನಾಕ – **ತ್ರಿಶೂಲ**

9. ಒಂದು ಮತ್ತೆ ಮೂರನೆ ಅಕ್ಷರ – ಗಡಿ
ಒಂದು ನಾಲ್ಕು ಮತ್ತು ಎರಡನೆಯ ಅಕ್ಷರ – ಗರಡಿ
ಮೂರು ಮತ್ತು ಒಂದನೆಯ ಅಕ್ಷರ – ಗಯಾ
ಮೂರು ಮತ್ತು ಎರಡನೆಯ ಅಕ್ಷರ – ಯಾಡಿ
ವಸ್ತು: **ಗಡಿಯಾರ**

10. ಒಂದಕ್ಕೆ ನಾಲ್ಕನೆ ಅಕ್ಷರ – ಪುರ
ಮೂರಕ್ಕೆ ನಾಲ್ಕನೆಯ ಅಕ್ಷರ – ದರ
ಎರಡು, ಮೂರು, ನಾಲ್ಕನೆಯ ಅಕ್ಷರ – ರಂದರ (ರಂಧ್ರ)
ಐದು ಮತ್ತು ಆರನೇ ಅಕ್ಷರ – ದಾಸ
ಆರಕ್ಕೆ ನಾಲ್ಕನೆ ಅಕ್ಷರ – ಸರ
ಆರು, ನಾಲ್ಕು, ಐದು ಮತ್ತು ಎರಡನೇ ಅಕ್ಷರ – ಸರದಾರ
ಎರಡಕ್ಕೆ ಒಂದನೆಯ ಅಕ್ಷರ – ರಂಪು (ಹೊಡೆದಾಡ)
ವ್ಯಕ್ತಿ : **ಪುರಂದರದಾಸ**

☐

ಶರಣ ಸನ್ನಿಹಿತ ಐಕ್ಯವಹಲ್ಲಿ ಹರಿಬ್ರಹ್ಮಾದಿಗಳು ಮೊದಲಾದ
ತೆತ್ತೀಸಾದಿ ದೇವರ್ಕಳು ಉಘೆ ಉಘೆ ಎನುತ್ತಿರಲು
ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ ಎಂದಡೆ
ಅಂಗದ ಕಳೆಯಲ್ಲಿ ಬಲದಲ್ಲಿ ಬ್ರಹ್ಮನ ಸ್ಥಾನ,
ಎಡದಲ್ಲಿ ನಾರಾಯಣನ ಸ್ಥಾನ ಒಲ್ಲೆನಯ್ಯಾ !
ಕೊರಳು ಗರಳದ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ,
ನಾಸಿಕ ವಾಯುವಿನ ಸ್ಥಾನ, ಕಣ್ಗಳು ಅಗ್ನಿ ಸ್ಥಾನ,
ಜಡೆ ಗಂಗೆಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ,
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನಗಳು,
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ಕಪಾಲ ಖಟ್ವಾಂಗ ತ್ರಿಶೂಲ ಡಮರುಗ ಸ್ಥಾನ,
ದೇಹ ರುಂಡಮಾಲೆಯ ಸ್ಥಾನ, ಕರ್ಣ ನಾಗೇಂದ್ರನ ಸ್ಥಾನ,
ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ.
ಹೃದಯಕಮಲಮಧ್ಯದ ಅಂತರಾಳದ
ಏಕಪೀಠದ ಸಿಂಹಾಸನದ ತೆಱಹ ಕೊಡು
ಕೂಡಲಸಂಗಮದೇವಾ.

- ಬಸವಣ್ಣ

# ಸುತ್ತೂರು ಹೊಳಿದಂಡಿ ಸುತ್ತುಮಲ್ಲಿಗೆ ದಂಡಿ!

ಪ್ರೊ. ಜಿ.ಎಚ್. ಹನ್ನೆರಡುಮಠ

ಲಕ್ಷಕೋಟಿಯ ಪಕ್ಷಿ ಸುತ್ತೂರು ನಗೆಬಂಡಿ
ವೀರಭದ್ರನ ಚಂದ ಚಲುವ ಕಂಡೆ
ಮಾವು ಮಲ್ಲಿಗೆ ಕಂಡೆ ಜೇನು ಬಾಳೆಯ ಉಂಡೆ
ಸುತ್ತೂರು ರುದ್ರಾಕ್ಷಿ ಸುತ್ತಿ ಬಂದೆ

ಪಾತಾಳ ಗವಿಯಲ್ಲಿ ಪ್ರಾಚೀನ ತಳದಲ್ಲಿ
ಯಾತಾಳ ಶ್ರೀರುದ್ರ ಎದ್ದು ಬಂದ
ಸುತ್ತೂರು ಹೊಳಿದಂಡಿ ಸುತ್ತುಮಲ್ಲಿಗಿ ದಂಡಿ
ಕಡಲು ಕಾಡಿನ ಚಲುವು ಹೊತ್ತುತಂದ

ಢಮರು ಢಂಢಂ ಢಮಿಸಿ ಗೆಜ್ಜೆ ಝಿಂಝಿಂ ಕುಣಿಸಿ
ಅಂತರಾತ್ಮದ ಗಂಟೆ ಠಂಠಣಿಸಿದ
ಓಂಕಾರ ಸಾಕಾರ ನೆಲತುಂಬ ಝೇಂಕಾರ
ಜಗತುಂಬ ಯುಗತುಂಬ ಝುಂಝುಣಿಸಿದ

ಹತ್ತು ದಿಕ್ಕಿಗೆ ಹೋಗಿ ಕಾಲ ಕಲ್ಪಕೆ ಕೂಗಿ
ಬಾರಯ್ಯ ಓ ರುದ್ರ ಶರಣು ಶರಣೊ
ಕಡಲು ನಿನ್ನಯ ಪಾದ ಸೂರ್ಯ ಚಂದ್ರರೆ ಪುಷ್ಪ
ನಕ್ಷತ್ರ ಹೂಮಾಲೆ ನೂರು ಶರಣೊ
ಸುತ್ತೂರು ಶ್ರೀಮಠಕೆ ಕೋಟಿ ಶರಣೊsss
ಕೋಟಿ ಶರಣೊsss ಕೋಟಿ ಶರಣೋsss

□

## ವಾರ್ತಾವಿಹಾರ

### ರಾಷ್ಟ್ರಕ್ಕೆ ಸಿದ್ಧಗಂಗಾ ಶ್ರೀಗಳ ಕೊಡುಗೆ ಅಪಾರ

ದಿನಾಂಕ 1.4.2019 ರಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದಲ್ಲಿ ಲಿಂ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 112ನೇ ಜಯಂತಿ ಹಾಗೂ ಗುರುವಂದನೆ ಕಾರ್ಯಕ್ರಮ ಪರಮಪೂಜ್ಯ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಶಿವಕುಮಾರ ಶ್ರೀಗಳು ಸಿದ್ಧಗಂಗೆಯನ್ನು ಜಗತ್ತಿನ ಭೂಪಟದಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡಿದವರು. ನಾಡಿಗೆ ಮೂವರು ವ್ಯಕ್ತಿಗಳ ಕೊಡುಗೆ ಅಪಾರವಾದುದು. ಸಾಹಿತ್ಯಕ್ಷೇತ್ರದಲ್ಲಿ ಕುವೆಂಪು, ಕಲಾಕ್ಷೇತ್ರದಲ್ಲಿ ಡಾ. ರಾಜ್‌ಕುಮಾರ್, ಧಾರ್ಮಿಕ ಕ್ಷೇತ್ರದಲ್ಲಿ ಸಿದ್ಧಗಂಗಾ ಶ್ರೀಗಳು. ಪೂಜ್ಯರ ಪ್ರತಿಯೊಂದು ನಡೆ-ನುಡಿಗಳು ಎಲ್ಲರಿಗೂ ಮಾದರಿ ಎಂದು ಶಿವಕುಮಾರ ಶ್ರೀಗಳ ಕೊಡುಗೆಗಳನ್ನು ಪರಮಪೂಜ್ಯ ಜಗದ್ಗುರುಗಳವರು ಸ್ಮರಿಸಿದರು.

ಮೈಸೂರು ರಾಜವಂಶಸ್ಥ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಶ್ರೀಗಳ ಕಾಯಕ ನಮಗೆ ಮಾರ್ಗದರ್ಶಿ, ಜೀವನದಲ್ಲಿ ಹೇಗೆ ಬದುಕಬೇಕು ಎಂಬುದಕ್ಕೆ ಅವರ ಜೀವನ ನಮಗೆ ಆದರ್ಶ ಎಂದರು.

ಕಾರ್ಯಕ್ರಮದಲ್ಲಿ ಚಿತ್ರದುರ್ಗ ಮುರುಘಾಮಠದ ಶರಣರು, ಸಿದ್ಧಗಂಗಾ ಮಠದ ಶ್ರೀಗಳು ಸೇರಿದಂತೆ ನಾಡಿನ ವಿವಿಧ ಮಠಾಧೀಶರುಗಳು ಪಾಲ್ಗೊಂಡಿದ್ದರು.

### ಮನಸ್ಸಿನ ನೆಮ್ಮದಿಗೆ ಪ್ರಕೃತಿಯ ಮಡಿಲು ಜೀವತಾಣ

ದಿನಾಂಕ 17.4.2019 ರಂದು ಊಟಿಯ ತೀಟಕಲ್ಲಿನ ಜೆಎಸ್‌ಎಸ್ ಅಂತಾರಾಷ್ಟ್ರೀಯ ಶಾಲೆ ಆವರಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಜೀವನೋತ್ಸಾಹ ಶಿಬಿರದ ಸಮಾರೋಪ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಸಾವಿರಾರು ವರ್ಷಗಳ ಹಿಂದೆ ಅರಣ್ಯದಲ್ಲಿ ಋಷಿಮುನಿಗಳು ಪ್ರಕೃತಿಯ ಮಡಿಲಲ್ಲಿ ಪಕ್ಷಿಗಳ ನಾದವನ್ನು ಆಲಿಸುತ್ತಾ ವಾಸಿಸುತ್ತಿದ್ದರು. ಪ್ರಕೃತಿಯ ಮಡಿಲಲ್ಲಿ

ವಾಸವಿದ್ದರೆ ನೆಮ್ಮದಿಯ ಭಾವನೆಗಳು ಹುಟ್ಟುತ್ತವೆ. ಸತ್ಯಂ ಶಿವಂ, ಸುಂದರಂ ಎಂಬಂತೆ ಜೀವನ ನಡೆಸಬೇಕು. ಬದುಕಿರುವವರೆಗೂ ನೆಮ್ಮದಿ, ಸಂತೋಷಗಳಿಂದ ಜೀವನ ಸಾಗಿಸಬೇಕು ಎಂದು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಜೀವನದಲ್ಲಿ ಬರುವ ಕಷ್ಟನಷ್ಟಗಳನ್ನು ಸಮಾನ ಮನಸ್ಸಿನಿಂದ ಸ್ವೀಕರಿಸಬೇಕು. ಆಗ ಮಾತ್ರ ಜೀವನ ಸಂತೋಷದಾಯಕವಾಗಿರುತ್ತದೆ. ಭಗವಂತನನ್ನು ಪ್ರೀತಿಯಿಂದ ಪ್ರಾರ್ಥಿಸಿದರೆ ಎಲ್ಲವನ್ನು ಕೊಡುತ್ತಾನೆ. ಮನುಷ್ಯ ವೈಯಕ್ತಿಕ ನಿರೀಕ್ಷೆಗಳನ್ನು ಬಿಟ್ಟು ಸಮಾಜಸೇವಾಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ತಮ್ಮ ಸಂದೇಶದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಗೊ.ರು. ಚನ್ನಬಸಪ್ಪ, ಡಾ. ಕೆ.ಆರ್. ವಸಂತಕುಮಾರ್, ಡಾ. ಎಸ್.ಪಿ. ಧನಬಾಲ್ ಮುಂತಾದವರು ಉಪಸ್ಥಿತರಿದ್ದರು.

**ಅಧ್ಯಾತ್ಮದ ತವರೂರು ಭಾರತ**

ದಿನಾಂಕ 26.4.2019 ರಂದು ಟಿ. ನರಸೀಪುರ ತಾಲ್ಲೂಕಿನ ಕೇತಹಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಶ್ರೀ ಗುರುಮಲ್ಲೇಶ್ವರ ದಾಸೋಹಮಠದ ಪ್ರಾರಂಭೋತ್ಸವ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನೆರವೇರಿತು.

ಜಗತ್ತಿನಲ್ಲಿ ಅಧ್ಯಾತ್ಮಿಕವಾಗಿ ಅತಿ ಹೆಚ್ಚು ಶ್ರೀಮಂತವಾಗಿರುವ ದೇಶ ಭಾರತ ಮಾತ್ರ. ಜಗತ್ತಿನಲ್ಲಿ ಎಲ್ಲ ರಾಷ್ಟ್ರಗಳು ವೈಜ್ಞಾನಿಕವಾಗಿ ಸಾಕಷ್ಟು ಅಭಿವೃದ್ಧಿ ಹೊಂದುತ್ತಿದ್ದು, ಹೊಸ ಹೊಸ ಆವಿಷ್ಕಾರಗಳು, ಸಂಶೋಧನೆಗಳಿಂದ ಕ್ಷಿಪ್ರಗತಿಯಲ್ಲಿ ಅಭಿವೃದ್ಧಿಹೊಂದಿ ಕೀರ್ತಿ ಗಳಿಸುತ್ತಿವೆಯೇ ಹೊರತು, ಭಾರತದಲ್ಲಿರುವಂತೆ ಶಾಂತಿ ಮತ್ತು ನೆಮ್ಮದಿಯನ್ನು ಪಡೆಯಲು ಯಾವ ರಾಷ್ಟ್ರಗಳಿಗೂ ಸಾಧ್ಯವಾಗುತ್ತಿಲ್ಲ ಎಂದರು.

ತಾನು ಹಸಿವಿನಿಂದಿದ್ದರು ಇನ್ನೊಬ್ಬರ ಹಸಿವಿಗೆ ಸ್ಪಂದಿಸುವ ವಿಶಾಲ ಗುಣ ಹೊಂದಿರುವುದು ಭಾರತೀಯರಿಗೆ ರಕ್ತಗತವಾಗಿ ಬಂದಿರುವ ಸಂಸ್ಕೃತಿ. ಸಾಧುಸಂತರು, ಶರಣರು ತೋರಿದ ಮಾರ್ಗದಲ್ಲಿ ಬೆಳೆದುಬಂದಿರುವ ದೇಶ ನಮ್ಮದು. ಹೀಗಾಗಿ ಈ ಸತ್ಕಾರದ ಗುಣ ಭಾರತೀಯರಲ್ಲಿ ಬಿಟ್ಟು ಇತರರಲ್ಲಿ ಕಾಣಲು ಸಾಧ್ಯವಿಲ್ಲ. ಶರಣ ಗುರುಮಲ್ಲೇಶ್ವರರ ಕೊಡುಗೆ ಅಪಾರವಾದುದು. ಅವರ ಕಾಯಕಜೀವನದ ಸಂದೇಶವನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂತಹ ಶರಣರ ಹೆಸರಿನಲ್ಲಿ ದಾಸೋಹ ಮಠ ನಿರ್ಮಿಸಿರುವುದು ಉತ್ತಮವಾದ ಕೆಲಸ ಎಂದು ಆಶೀರ್ವಚನದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ವಾಟಾಳು, ಮಾದ್ರಹಳ್ಳಿ, ಆಲಹಳ್ಳಿ, ಪರಿಣಾಮಿಪುರ, ಬೆನಕನಹಳ್ಳಿ ಮಠದ ಶ್ರೀಗಳವರು ಉಪಸ್ಥಿತರಿದ್ದರು.

**ಚಿಂತನೆಗಳು ಉತ್ತಮವಾಗಿದ್ದರೆ ಜೀವನದಲ್ಲಿ ಯಶಸ್ಸು ಕಾಣಬಹುದು**

ದಿನಾಂಕ 26.4.2019 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿನ ಜೆಎಸ್‌ಎಸ್ ಹಿರಿಯರ ಮನೆಯ ನಿವಾಸಿಯಾಗಿರುವ ಶ್ರೀ ಕೆ.ಎಂ. ತಮ್ಮಯ್ಯನವರ 100ನೇ ವರ್ಷದ ಜನ್ಮದಿನದ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಹಾಗೂ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ನೆರವೇರಿತು.

ಮನುಷ್ಯರು ಇತ್ತೀಚೆಗೆ ಯೌವ್ವನದಲ್ಲಿ ತಮ್ಮ ಹೆತ್ತವರನ್ನು ಕಡೆಗಣಿಸುತ್ತಿದ್ದಾರೆ. ತಂದೆ-ತಾಯಿಗಳು ಇಳಿವಯಸ್ಸಿನಲ್ಲಿ ಮಕ್ಕಳು ತಮ್ಮ ಸೇವೆಯನ್ನು ಮಾಡಲಿ ಎಂದು ಬಯಸುತ್ತಿರುತ್ತಾರೆ. ಆದರೆ ಅದು ಇಂದು ಸಾಧ್ಯವಾಗುತ್ತಿಲ್ಲ. ಹೀಗಾಗಿ ಇರುವಲ್ಲಿಯೇ ಸಂತೋಷ ಕಾಣುವುದು ಸುಂದರ ಬದುಕಿನ ಗುಟ್ಟು ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯರ ಮನೆಯ ಎಲ್ಲ ಸದಸ್ಯರುಗಳು ಉಪಸ್ಥಿತರಿದ್ದರು.

**ಶರಣರ ತತ್ತ್ವಾದರ್ಶಗಳು ಪ್ರತಿಯೊಬ್ಬರಿಗೂ ಮಾದರಿ**

ದಿನಾಂಕ 28.4.2019 ರಂದು ತಮಿಳುನಾಡಿನ ನೀಲಗಿರಿಯ ಕೆ. ಪಾಲಾಡದ ಶ್ರೀ ಗುರು ಬಸವ ಶಾಂತಿನಿಕೇತನ ಮಠದಲ್ಲಿ ಬಸವ ಜಯಂತಿ ಹಾಗೂ ಶ್ರೀ ಬಸವರಾಜ ಮಹಾಸ್ವಾಮಿಗಳವರ 100ನೇ ವರ್ಷದ ಜಯಂತಿ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ಬಸವಾದಿ ಶರಣರು ಕಾಯಕಜೀವಿಗಳು. ನಡೆ ನುಡಿ ಎರಡು ಒಂದಾಗಿದ್ದವರು. ಸಮಾಜದ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ಅವರ ತತ್ತ್ವಾದರ್ಶಗಳು ಪ್ರತಿಯೊಬ್ಬರಿಗೂ ಮಾದರಿ. ಅವುಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಬಾಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ನುಡಿದರು.

ಕಾರ್ಯಕ್ರಮದಲ್ಲಿ ಕನಕಪುರದ ದೇಗುಲಮಠ, ಮರಿಯಾಲ, ಚಾಮರಾಜನಗರದ ವಿರಕ್ತಮಠ ಹಾಗೂ ರಾವಂದೂರು ಮಠದ ಶ್ರೀಗಳು ಉಪಸ್ಥಿತರಿದ್ದರು.

**ಕೈವಲ್ಯ ಸಾಹಿತ್ಯದಿಂದ ಜೀವನದ ಗುರಿ ಸಾಧನೆಗೆ ಮಾರ್ಗದರ್ಶನ**

ಏಪ್ರಿಲ್ 29 ಮತ್ತು 30 ರಂದು ಮೈಸೂರು-ಚಾಮರಾಜನಗರ ಜಿಲ್ಲಾ ಮಠಾಧೀಶರ ಗೋಷ್ಠಿ ವತಿಯಿಂದ ಗುಂಡ್ಲುಪೇಟೆಯ ಪಡಗೂರು ಶ್ರೀ ಅಡವಿಮಠದ

ಶ್ರೀ ಮದ್ದಾನೇಶ್ವರ ಮಹಾಮನೆಯಲ್ಲಿ 'ಕೈವಲ್ಯ ಸಾಹಿತ್ಯ' ವಿಚಾರಸಂಕಿರಣ ಜರುಗಿತು.

ಕೈವಲ್ಯ ಸಾಹಿತ್ಯ ಬಹಳ ವಿಸ್ತಾರವಾಗಿದ್ದು ಜೀವನದ ಗುರಿ ತಲುಪುವ ಬಗ್ಗೆ ಅದು ಮಾರ್ಗದರ್ಶನ ನೀಡುತ್ತದೆ. ಸ್ವಚ್ಛ ಸುಂದರ ಜೀವನಕ್ಕೆ ಇದು ಸಹಕಾರಿ. ನಾಡಿನಾದ್ಯಂತ ಮಹಾನ್ ಸಾಧಕರು ಇದನ್ನು ಸಾಧಿಸುವ ಮೂಲಕ ಸಮಾಜಕ್ಕೆ ಸ್ಫೂರ್ತಿದಾಯಕರಾಗಿದ್ದಾರೆ ಎಂದು ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಿಳಿಸಿದರು.

ಕಳೆದ 40 ವರ್ಷಗಳಿಂದ ನಡೆಯುತ್ತಿರುವ ವಿಚಾರಗೋಷ್ಠಿಯು ಸಮಾಜದ ಸಮಾನತೆಗೆ ಹಲವಾರು ಚಟುವಟಿಕೆಗಳನ್ನು ನಡೆಸುತ್ತಿದೆ. ಎಲ್ಲಾ ಮಠಾಧೀಶರನ್ನು ಸೇರಿಸಿ ಕಾಲಕಾಲಕ್ಕೆ ವಿಚಾರಸಂಕಿರಣಗಳ ಮೂಲಕ ವಚನ ಸಾಹಿತ್ಯದ ಸಂಗ್ರಹ, ಕೃತಿ ರಚನೆ ಮಾಡುತ್ತಾ ಮೌಲ್ಯವನ್ನು ಹೆಚ್ಚಿಸುತ್ತಿದೆ ಎಂದು ಪರಮಪೂಜ್ಯ ಜಗದ್ಗುರು ಗಳವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನಕಪುರ ಶ್ರೀ ದೇಗುಲ ಮಠ, ಪಡಗೂರು ಶ್ರೀ ಅಡವಿ ಮಠ, ಶ್ರೀ ಕುಂದೂರು ಮಠ ಹಾಗೂ ನಾಡಿನ ವಿವಿಧ ಮಠಗಳ ಮಠಾಧೀಶರು ಭಾಗವಹಿಸಿದ್ದರು.

**ಬಸವಣ್ಣನವರ ಮಾನವತಾವಾದ ಶ್ರೇಷ್ಠವಾದುದು**

ದಿನಾಂಕ 7.5.2019 ರಂದು ಮೈಸೂರಿನ ಕಲಾಮಂದಿರದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ, ವೀರಶೈವ ಲಿಂಗಾಯತ ಸಂಘಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದಿಂದ ಬಸವ ಜಯಂತಿ ಸಮಾರಂಭ ನೆರವೇರಿತು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಾ. ಎಂ.ಎನ್. ವೆಂಕಟಾಚಲಯ್ಯ, ಬಸವಣ್ಣ ಮಹಾನ್ ಮಾನವತಾವಾದಿ. 12ನೇ ಶತಮಾನದಲ್ಲೇ ಜಾತಿ, ವರ್ಗ, ಲಿಂಗ ತಾರತಮ್ಯವನ್ನು ವಿರೋಧಿಸಿ ತಮ್ಮ ವಚನಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುತ್ತಾ ಮಾನವ ಧರ್ಮದ ಪ್ರತಿಪಾದಕರಾದರು. ಆದರೆ ಇಂದು ಧರ್ಮ-ಧರ್ಮಗಳ ನಡುವೆ ಸಂಘರ್ಷ ಏರ್ಪಡುವ ಸನ್ನಿವೇಶ ನಿರ್ಮಾಣವಾಗಿದೆ. ಇದರ ನಡುವೆಯು ಬಸವಣ್ಣನವರ ಮಾನವತಾವಾದ ತನ್ನ ಶ್ರೇಷ್ಠತೆಯನ್ನು ಎತ್ತಿಹಿಡಿದಿದೆ ಎಂದರು.

ಆಶಯ ನುಡಿಗಳನ್ನಾಡಿದ ಇತಿಹಾಸ ತಜ್ಞ ಡಾ. ಷ. ಶೆಟ್ಟರ್ ಬಸವಣ್ಣನವರ ಚಿಂತನೆಗಳಿಗೆ ಅವರ ಅನುಯಾಯಿಗಳಿಂದ ಮಾತ್ರವಲ್ಲದೆ ಸಂಶೋಧಕರಿಂದಲೂ ಅನ್ಯಾಯವಾಗಿದೆ. ಅವರ ತತ್ವಾದರ್ಶಗಳನ್ನು ಸಂಶೋಧಿಸಿ ಅರ್ಥೈಸುವ ವೇಳೆ ಗೊಂದಲಗಳನ್ನು ಸೃಷ್ಟಿ ಮಾಡಲಾಗಿದೆ. ಹೀಗಾಗಿ ಈ ಹಿಂದಿನ ಸಂಶೋಧನೆಗಳು ಎಷ್ಟೇ ಇದ್ದರೂ ಇಂದಿನ ಪೀಳಿಗೆಯ ಸಂಶೋಧಕರು ಅವುಗಳನ್ನು ಅರಗಿಸಿ ಅರ್ಥೈಸಿಕೊಳ್ಳುವ

ಜೊತೆಗೆ ಮೂಲದಿಂದ ಅಧ್ಯಯನ ನಡೆಸಲು ಮುಂದಾಗಬೇಕು. ಎಲ್ಲಾ ಧರ್ಮಗಳಲ್ಲೂ ಉದ್ಭವಾಗುವ ಭಿನ್ನಾಭಿಪ್ರಾಯಗಳು ನಮ್ಮ ಧರ್ಮದಲ್ಲೂ ಆಗಿದೆ. ಅದನ್ನು ಪ್ರಜ್ಞಾಪೂರ್ವಕ ಹಾಗೂ ಶಾಂತಿಯುತ ರೀತಿಯಲ್ಲಿ ಬಗೆಹರಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮಕ್ಕೂ ಮೊದಲು ಬಸವ ಪುತ್ತಳಿಗೆ ಮಾಲಾರ್ಪಣೆ ಮಾಡಿ, ಬಸವೇಶ್ವರ ಪುತ್ತಳಿ, ಕಲಾತಂಡಗಳು ಹಾಗೂ ಸ್ತಬ್ಧ ಚಿತ್ರಗಳ ಮೆರವಣಿಗೆ ನೆರವೇರಿತು.

ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು, ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಶಿವಗಂಗಾ ಕ್ಷೇತ್ರದ ಶ್ರೀ ಮೇಲಣ ಗವಿಮಠದ ಶ್ರೀಗಳು, ಮೈಸೂರು ನಗರ ಪೊಲೀಸ್ ಆಯುಕ್ತ ಶ್ರೀ ಕೆ.ಟಿ. ಬಾಲಕೃಷ್ಣ, ಅಖಿಲ ಭಾರತ ವೀರಶೈವ ಮಹಾಸಭಾ ಮೈಸೂರು ಘಟಕದ ಅಧ್ಯಕ್ಷ ಶ್ರೀ ಎಸ್. ಶಿವಮೂರ್ತಿ ಕಾನ್ಯ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಜಯಾಗೌಡ ಮತ್ತಿತರರು ಉಪಸ್ಥಿತರಿದ್ದರು.

### ಸಾಧನೆಗೆ ಆತ್ಮವಿಶ್ವಾಸ ಮುಖ್ಯ

ದಿನಾಂಕ 11.5.2019 ರಂದು ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ನಡೆದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರ ಅಭಿನಂದನಾ ಕಾರ್ಯಕ್ರಮ ನೆರವೇರಿತು.

ಡಾ. ಹೇಮಂತಕುಮಾರ್‌ರವರು ಶೈಕ್ಷಣಿಕ ಮತ್ತು ಆಡಳಿತ ಎರಡೂ ಕ್ಷೇತ್ರಗಳಲ್ಲಿ ಅತ್ಯಂತ ನಿಪುಣರಾಗಿದ್ದು, ದಿನದ 24 ಗಂಟೆಯೂ ವಿಶ್ವವಿದ್ಯಾನಿಲಯದ ಬಗ್ಗೆ ಯೋಚಿಸುವ ಮೂಲಕ ಪೂರ್ಣಾವಧಿ ಕುಲಪತಿಗಳಾಗಿದ್ದಾರೆ. ಅವರ ಆಡಳಿತಾವಧಿಯಲ್ಲಿ ವಿಶ್ವವಿದ್ಯಾನಿಲಯ ಉತ್ತಮವಾಗಿ ಪ್ರಗತಿ ಹೊಂದಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ಹಾರೈಸಿದರು.

ಸಮಾಜದಲ್ಲಿ ಪ್ರತಿಯೊಬ್ಬರು ಅತಿ ಎತ್ತರದ ಕನಸು ಕಾಣಬೇಕು. ಅಂತಹ ಕನಸನ್ನು ನನಸು ಮಾಡಿಕೊಳ್ಳುವ ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳಬೇಕು. ಈ ಎರಡು ಕೆಲಸಗಳನ್ನು ಸಾಧಿಸುವ ಮೂಲಕ ಜೀವನದಲ್ಲಿ ಯಶಸ್ಸು ಸಾಧಿಸಬೇಕು ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ಆರ್. ಶ್ರೀನಿವಾಸನ್, ಪ್ರೊ. ಬಸವರಾಜು ಎಸ್. ಅನಾಮಿ ಮುಂತಾದವರು ಉಪಸ್ಥಿತರಿದ್ದರು.

### ಬಸವಣ್ಣನವರ ವಿಚಾರಧಾರೆಗಳು ಎಂದೆಂದಿಗೂ ಪ್ರಸ್ತುತ

ದಿನಾಂಕ 11.5.2019 ರಂದು ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರದ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ ನೆರವೇರಿತು.

ಕೇವಲ ಪೀಠ, ಅಧ್ಯಯನ ಕೇಂದ್ರಗಳ ಸ್ಥಾಪನೆ ಮುಖ್ಯವಲ್ಲ, ಯಾರ ಹೆಸರಿನಲ್ಲಿ ಅವುಗಳನ್ನು ಸ್ಥಾಪಿಸಲಾಗಿರುತ್ತದೆಯೋ ಅವರ ಸಂದೇಶ ವ್ಯಕ್ತಿತ್ವಗಳನ್ನು ಯುವಜನರಿಗೆ ಎಷ್ಟರಮಟ್ಟಿಗೆ ತಲುಪಿಸುತ್ತೇವೆ ಎಂಬುದು ಮುಖ್ಯವಾಗುತ್ತದೆ. ಬಸವಣ್ಣನವರ ವಿಚಾರಧಾರೆಗಳ ಕುರಿತು ಇಂದಿಗೂ ಎಲ್ಲೆಡೆ ಚರ್ಚೆಯಾಗುತ್ತಿದೆ. ಅವರದು ಅಪರೂಪದ ವ್ಯಕ್ತಿತ್ವವಾಗಿದ್ದು, ಸಮಾಜದ ಎಲ್ಲ ಸ್ತರಗಳಲ್ಲಿ ಹೇಗೆ ಯಶಸ್ಸು ಸಾಧಿಸಬಹುದು ಎಂದು ತೋರಿಸಿಕೊಟ್ಟವರು ಬಸವಣ್ಣನವರು ಎಂದು ಪರಮಪೂಜ್ಯರು ನುಡಿದರು.

ಮಾಡುವ ಮನಸ್ಸು ಕೈ ಸ್ವಚ್ಛವಾಗಿದ್ದರೆ ಮಾಡುವ ಕಾರ್ಯ ಹಾಗೂ ಜ್ಞಾನಕ್ಕೆ ಬೆಲೆ ಬರುತ್ತದೆ. ಬಸವಣ್ಣನವರು ಇದಕ್ಕೆ ಸಾಕ್ಷಿಯಾಗಿದ್ದರು. ಅವರ ತತ್ವ, ವಿಚಾರಧಾರೆಗಳು ಎಲ್ಲೆಡೆ ಪಸರಿಸಬೇಕು ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್, ಕುಲಸಚಿವರಾದ ಪ್ರೊ. ಲಿಂಗರಾಜ ಗಾಂಧಿ, ಡಾ. ಚಂದ್ರಶೇಖರಯ್ಯ ಮುಂತಾದವರು ಉಪಸ್ಥಿತರಿದ್ದರು.

**ಇಂದಿನ ರಾಜಕಾರಣಿಗಳಿಗೆ ಶ್ರೀ ತೋಂಟದಾರ್ಯರು ಆದರ್ಶ ವ್ಯಕ್ತಿ**

ದಿನಾಂಕ 14.5.2019 ರಂದು ಮೈಸೂರು ನಗರದ ಖಾಸಗಿ ಕಲ್ಯಾಣಮಂಟಪದಲ್ಲಿ ಶ್ರೀ ತೋಂಟದಾರ್ಯ ಅಭಿನಂದನಾ ಸಮಿತಿ ವತಿಯಿಂದ ಆಯೋಜಿಸಿದ್ದ ತೋಂಟದಾರ್ಯ ಅಭಿನಂದನೆ ಮತ್ತು ಕೃತಿ ಲೋಕಾರ್ಪಣೆ ಕಾರ್ಯಕ್ರಮ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಹಿರಿಯ ಪ್ರಚಾರಕ ಶ್ರೀ ಸು. ರಾಮಣ್ಣ ಮಾತನಾಡಿ, ಶ್ರೀ ತೋಂಟದಾರ್ಯರು ಜೆಎಸ್‌ಎಸ್ ಸೇರಿದಂತೆ ಹಲವು ಸಂಸ್ಥೆಗಳ ಸಾಂಸ್ಕೃತಿಕ ರಾಯಭಾರಿಯಾಗಿದ್ದಾರೆ. ಅವರು ವಿಶಾಲವಾದ ರಾಜಕೀಯ ಜೀವನದಲ್ಲಿ ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಗುರು ಎಸ್. ಬಳೆರವರ 'ಶಕ್ತಿವಿಶಿಷ್ಟಾದ್ವೈತ ಹಾಗೂ ಪಂಚಪೀಠಗಳ ಪರಂಪರೆ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ, ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮೀಜಿ, ಶ್ರೀ ಗೊ.ರು. ಚನ್ನಬಸಪ್ಪ, ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಮಾಜಿ ವಿಧಾನಪರಿಷತ್ ಸದಸ್ಯ ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಗೊ.ರು. ಪರಮೇಶ್ವರಪ್ಪ ಮುಂತಾದವರು ಉಪಸ್ಥಿತರಿದ್ದರು.

**ಮೈಸೂರು ಮಹಾರಾಜ ಸಂಸ್ಕೃತ ಪಾಠಶಾಲೆ ವಿದ್ವಾಂಸರ ಗಣಿ**

ದಿನಾಂಕ 15.5.2019 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವತಿಯಿಂದ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ವಿದ್ಯಾರ್ಥಿನಿಲಯ ಮತ್ತು ಶೈವ ಸಂಶೋಧನ ಸಂಸ್ಥೆಯ ನೂತನ ಕಟ್ಟಡಗಳ ಶಂಕುಸ್ಥಾಪನೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಮೈಸೂರು ಮಹಾರಾಜರು ಸ್ಥಾಪಿಸಿದ ಮಹಾರಾಜ ಸಂಸ್ಕೃತ ಪಾಠಶಾಲೆ ಎಂದರೆ ಯಾವಾಗಲೂ ವಿದ್ವಾಂಸರ ಗಣಿ ಎಂಬ ಮಾತು ಮತ್ತು ಗೌರವ ಈ ಸಂಸ್ಥೆಗಿದೆ. ಇಂತಹ ಸಂಸ್ಥೆಯಲ್ಲಿ ಶೈವ ಸಂಶೋಧನ ಕೇಂದ್ರ ಪ್ರಾರಂಭವಾಗಿ ನೂತನ ಕಟ್ಟಡ ನಿರ್ಮಾಣವಾಗುತ್ತಿರುವುದರಿಂದ ಸಂಶೋಧನೆಗೆ ಹೆಚ್ಚು ಅವಕಾಶಗಳು ದೊರೆಯಲಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ನುಡಿದರು.

ದೇಶದ ಸಂಸ್ಕೃತಿ, ಪರಂಪರೆ ಸಂಸ್ಕೃತ ಭಾಷೆಯಲ್ಲಿ ಅಡಕವಾಗಿದೆ. ಅದು ಉತ್ಕೃಷ್ಟವಾದ ಭಾಷೆ. ಸಂಸ್ಕೃತ ಭಾಷೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಮಹಾಕವಿಗಳು, ಜ್ಞಾನಿಗಳು, ಶ್ರೇಷ್ಠ ಅಧ್ಯಾತ್ಮಿಕ ಚಿಂತಕರು ಈ ಭಾಷೆಯನ್ನು ಬಳಸಿ ಶ್ರೀಮಂತಗೊಳಿಸಿದ್ದಾರೆ ಎಂದು ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥಾನಂದ ಸ್ವಾಮೀಜಿ, ಕುಲಪತಿಗಳಾದ ಪ್ರೊ. ಪದ್ಮಾಶೇಖರ್, ಕುಲಸಚಿವರಾದ ಶ್ರೀಮತಿ ಎಂ. ಶಿಲ್ಪ, ಹಣಕಾಸು ಅಧಿಕಾರಿ ಡಾ. ಪ್ರಕಾಶ್ ಆರ್. ಪಾಗೋಜಿ, ನಿರ್ದೇಶಕರಾದ ಡಾ. ಶರತ್‌ಚಂದ್ರ ಸ್ವಾಮಿ, ಪ್ರಾಚಾರ್ಯರಾದ ಪ್ರೊ. ಕೆ.ಎಂ. ಮಹದೇವಯ್ಯ ಮುಂತಾದವರು ಉಪಸ್ಥಿತರಿದ್ದರು.

**ತಾತ್ವಿಕ ಚಿಂತನೆಗಳ ಅಧ್ಯಯನ ಅಗತ್ಯ**

ದಿನಾಂಕ 16.5.2019 ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಅಧ್ಯಾತ್ಮಿಕ ಜಿಜ್ಞಾಸುಗಳಿಗೆ ಆಯೋಜಿಸಿದ್ದ ಅಧ್ಯಯನ ಶಿಬಿರದ ಸಮಾರೋಪ ಸಮಾರಂಭವು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನೆರವೇರಿತು.

ತಾತ್ವಿಕ ಸಂಗತಿಗಳನ್ನು ಮನನ ಮಾಡಿಕೊಂಡು ಬದುಕಿದರೆ ಲೌಖಿಕ ಜೀವನದಿಂದ ಅಧ್ಯಾತ್ಮದೆಡೆಗೆ ಬರಲು ಸಾಧ್ಯ. ತಾತ್ವಿಕ ಚಿಂತನೆಗಳ ಅಧ್ಯಯನ, ಶ್ರವಣ ಮತ್ತು ಮನನ ಮಾಡುವುದರಿಂದ ಅಧ್ಯಾತ್ಮದ ಒಲವು ಬೆಳೆಯುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಇಂತಹ ಅಧ್ಯಯನ ಶಿಬಿರಗಳಲ್ಲಿ ಜ್ಞಾನಿಗಳ ಮಾತನ್ನು ಕೇಳುತ್ತಾ ಅದರಲ್ಲಿರುವ ಅರ್ಥರಸವನ್ನು ಆಸ್ವಾದಿಸಬೇಕು. ಜ್ಞಾನದ ಊಟವನ್ನು ಮಾಡಿ ಅದೇ ಭಾವದಲ್ಲಿ ಪಡೆದ ಜ್ಞಾನದ ಸೌರಭವನ್ನು ನಾಡಿನ ತುಂಬೆಲ್ಲ ಪಸರಿಸಬೇಕೆಂದು ನುಡಿದರು.

ನಾನತ್ವದ ಕಲ್ಪನೆಯೊಳು ತಾನಿರದೆ ಆಚೆಯೊಳು ಏನೊಂದುಳಿಯುವನೋ ಅದನ್ನೇ ನೀನೆಂದು ತಿಳಿ. ಅನಾತ್ಮವಾದ ಅಹಂಕಾರದಲ್ಲಿ ಆತ್ಮನೆಂಬ ಭಾವನೆ, ಅಹಂಕಾರವಲ್ಲದ ಆತ್ಮನಲ್ಲಿ ಅಹಂಕಾರವೆಂಬ ಭಾವವೆ ಇದುವೇ ಅನ್ಯೋನ್ಯ ಧ್ಯಾನವಾಗಿರುತ್ತದೆ ಎಂದು ಮಹಾಲಿಂಗಪುರದ ಶ್ರೀ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಶ್ರೀ ಸಹಜಾನಂದ ಸ್ವಾಮೀಜಿಯವರು ತಿಳಿಸಿದರು. ಪ್ರೊ. ಕೆ. ಅನಂತರಾಮುರವರು ಉಪನ್ಯಾಸ ನೀಡಿದರು.

**ಅಧ್ಯಾತ್ಮದ ಶಕ್ತಿಕೇಂದ್ರ ನಂಜನಗೂಡು ಶ್ರೀಕ್ಷೇತ್ರ**

ದಿನಾಂಕ 17.5.2019 ರಂದು ನಂಜನಗೂಡಿನ ಶ್ರೀ ಹೊನ್ನಲಗೆರೆ ಮಠದ ನೂತನ ಗುರು ಪಟ್ಟಾಧಿಕಾರ ಮಹೋತ್ಸವ ಹಾಗೂ ಧಾರ್ಮಿಕ ಸಭೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿತು.

ನಂಜನಗೂಡು ಧಾರ್ಮಿಕವಾಗಿ ಅತ್ಯಂತ ಪವಿತ್ರವಾದ ಕ್ಷೇತ್ರ. ಈ ಕ್ಷೇತ್ರದ ಹೊನ್ನಲಗೆರೆ ಹಾಗೂ ಕೆಂಡಗಣ್ಣಸ್ವಾಮಿ ಮಠಗಳು ತುಂಬ ಪ್ರಾಚೀನವಾದ ಮಠಗಳಾಗಿದ್ದು, ಶ್ರೀಕಂಠೇಶ್ವರಸ್ವಾಮಿಯ ಸಾನ್ನಿಧ್ಯದಿಂದ ದೇಶಾದ್ಯಂತ ಭಕ್ತರನ್ನು ಹೊಂದಿದೆ. ಅಲ್ಲದೆ ರಾಘವೇಂದ್ರಸ್ವಾಮಿಗಳ ಮೂಲ ಮಠ ಇಲ್ಲಿಯೇ ಇದ್ದು, ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ನಂಜನಗೂಡಿನವರನ್ನೇ ಸ್ವಾಮಿಗಳನ್ನಾಗಿ ನೇಮಿಸುವ ಪರಂಪರೆಯಿದೆ. ಹೀಗಾಗಿ ಈ ಊರು ಅಧ್ಯಾತ್ಮದ ಶಕ್ತಿ ಕೇಂದ್ರವಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನಕಪುರ ಶ್ರೀ ಮರಳೆಗವಿ ಮಠದ ಶ್ರೀಗಳು, ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ಶ್ರೀಗಳು, ಶ್ರೀ ಮಲ್ಲನಮೂಲೆ ಮಠದ ಶ್ರೀಗಳು, ಮಾಜಿ ಸಚಿವೆ ಶ್ರೀಮತಿ ಗೀತಾ ಮಹದೇವಪ್ರಸಾದ್, ಪುರಸಭಾ ಮಾಜಿ ಅಧ್ಯಕ್ಷ ಶ್ರೀ ಆರ್.ವಿ. ಮಹದೇವಸ್ವಾಮಿ, ಡಾ. ನಂದೀಶ್ ಹಂಚೆ ಮುಂತಾದವರು ಉಪಸ್ಥಿತರಿದ್ದರು.

**ಜೀವನ ಮುನ್ನಡೆಸಲು ಸಂಸ್ಕೃತಿ ಮಾರ್ಗದರ್ಶಿ**

ದಿನಾಂಕ 21.5.2019 ರಂದು ಧಾರವಾಡದ ಸಂಪಿಗೆ ನಗರದಲ್ಲಿನ ಶ್ರೀ ಬಿ.ಡಿ. ಪಾಟೀಲ ಸಮಾವೇಶ ಭವನದ ಉದ್ಘಾಟನೆ ನೆರವೇರಿತು.

ಭಾರತೀಯ ಸಂಸ್ಕೃತಿ ಜೀವನವನ್ನು ಹೇಗೆ ನಡೆಸಬೇಕು ಎಂದು ತಿಳಿಸುತ್ತದೆ. ಆದರೆ ಇಂದಿನ ದಿನಗಳಲ್ಲಿ ವಿದೇಶಿ ಸಂಸ್ಕೃತಿಗೆ ಮಾರುಹೋಗುವುದು ಹೆಚ್ಚಾಗಿದೆ. ಹೀಗಾಗಿ ನಮ್ಮಲ್ಲಿ ವಿವೇಕಪ್ರಜ್ಞೆ ಜಾಗೃತಗೊಳ್ಳಬೇಕು. ತಮ್ಮ ಸಾಂಸ್ಕೃತಿಕ ಕಾಳಜಿ ಮತ್ತು ಸಾಮಾಜಿಕ ಕಾರ್ಯಗಳಿಂದ ಜನರ ಪ್ರೀತಿ, ವಿಶ್ವಾಸ ಗಳಿಸಿರುವ ಶ್ರೀ ಬಿ.ಡಿ. ಪಾಟೀಲರವರು ಸುಸಜ್ಜಿತವಾದ ಭವನ ನಿರ್ಮಿಸಿದ್ದಾರೆ. ಈ ಭವನವನ್ನು ಜನರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪರಮಪೂಜ್ಯರು ತಿಳಿಸಿದರು.

ಮನುಷ್ಯನಿಗೆ ಶಕ್ತಿ, ಮಾತಿನ ಸಾಮರ್ಥ್ಯ, ಮಧುರ ಹೃದಯ ಹೀಗೆ ಎಲ್ಲವನ್ನೂ ದೇವರು ನೀಡಿದ್ದಾನೆ. ಅವೆಲ್ಲವನ್ನು ಸರಿಯಾಗಿ ಬಳಸಿಕೊಂಡು ಇತರರಿಗೆ ಒಳ್ಳೆಯದನ್ನು ಬಯಸಿ ಮುನ್ನಡೆಯಬೇಕು. ಜೀವನದಲ್ಲಿ ಹಣ ಸಂಪಾದನೆ ಮುಖ್ಯವಲ್ಲ, ಸಂಪಾದನೆ ಮಾಡಿದ ಹಣವನ್ನು ಯಾವ ರೀತಿಯಲ್ಲಿ ಸದ್ಬಳಕೆ ಮಾಡುತ್ತೇವೆ ಎನ್ನುವುದು ಮುಖ್ಯ ಎಂದು ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಹೇಳಿದರು.

ಕಾರ್ಯಕ್ರಮದಲ್ಲಿ ಕೊಲ್ಹಾಪುರದ ಕನ್ಹೇರಿ ಶ್ರೀ ಸಿದ್ಧಗಿರಿ ಮಹಾಸಂಸ್ಥಾನ ಮಠ, ಧಾರವಾಡದ ಶ್ರೀ ಮುರುಘಾ ಮಠದ ಶ್ರೀಗಳವರು, ಶ್ರೀ ಕೈವಲ್ಯಾನಂದ ಸ್ವಾಮಿಗಳು, ಡಾ. ಗುರುಲಿಂಗ ಕಾಪಸೆ, ಪ್ರೊ. ಐ.ಜಿ. ಸನದಿ, ಶ್ರೀ ವೀರಣ್ಣ ಮತ್ತಿಕಟ್ಟಿ, ಶ್ರೀ ಬಸವರಾಜ ಹೊರಟ್ಟಿ, ಶ್ರೀ ಚಂದ್ರಕಾಂತ ಬೆಲ್ಲದ್, ಶ್ರೀ ಅರವಿಂದ ಬೆಲ್ಲದ್ ಮುಂತಾದವರು ಉಪಸ್ಥಿತರಿದ್ದರು.

**ಬಸವಣ್ಣನವರು ಜಗತ್ತು ಕಂಡ ಶ್ರೇಷ್ಠ ಸಂತರು**

ಬಸವಣ್ಣನವರು ಜಗತ್ತು ಕಂಡ ಶ್ರೇಷ್ಠ ಸಂತರು. ಅನುಭವ ಮಂಟಪದ ಪರಿಕಲ್ಪನೆಯನ್ನು ಜಾರಿಗೆ ತರುವ ಮೂಲಕ ಸಾಮಾಜಿಕ ಬದಲಾವಣೆಗೆ ಮುನ್ನುಡಿ ಬರೆದರು ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಪೂಜ್ಯರು ಮೇ 21 ರಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ ಬಸವೇಶ್ವರ ಪೀಠದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಸವಣ್ಣನವರು ತಮ್ಮ ವಚನಗಳ ಮೂಲಕ ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿ ಸಮಾಜದಲ್ಲಿ ಸಮಾನತೆಯನ್ನು ಪ್ರತಿಪಾದಿಸಿದರು. ಬುದ್ಧನ ನಂತರ ಬಸವಣ್ಣನವರಿಗೆ ಸಾಮಾಜಿಕ ಬದಲಾವಣೆಯ ಹರಿಕಾರ ಎಂಬ ಕೀರ್ತಿ ಸಲ್ಲುತ್ತದೆ ಎಂದರು.

ಪ್ರೊ. ಶಿವಕುಮಾರ ಬಳಿಗಾರ ಅವರ 'ಸಾರ್ಥಕ ಬದುಕಿಗೆ ಬಸವದೀಪ್ತಿ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಬಸವಣ್ಣನವರ ಚಿಂತನೆಗಳು ಅಗಾಧವಾದವು. ಅವರು ವಚನಗಳ

ಮೂಲಕ ಜೀವನಶೈಲಿಯನ್ನು ಹೇಳಿದ ಮಹಾನುಭಾವರು. ಇಂದು ನಾವೆಲ್ಲರೂ ಒಂದು ಇತಿಮಿತಿಯಲ್ಲಿ ಸಿಕ್ಕಿಹಾಕಿಕೊಂಡು ಜಂಜಾಟದಲ್ಲಿದ್ದೇವೆ. ಆದರೆ ಅಂದಿನ ಕಾಲದಲ್ಲಿ ಯಾವುದೇ ಪರಿಮಿತಿ ಇರಲಿಲ್ಲ. ಹೀಗಾಗಿ ಅವರ ಅನೇಕ ಚಿಂತನೆಗಳು ವಚನಗಳ ಮೂಲಕ ಪ್ರಕಟವಾದವು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೊಲ್ಹಾಪುರದ ಶ್ರೀ ಸಿದ್ಧಗಿರಿ ಮಹಾಸಂಸ್ಥಾನ ಮಠ ಮತ್ತು ಧಾರವಾಡ ಶ್ರೀ ಮುರುಘಾಮಠದ ಶ್ರೀಗಳು, ಕುಲಪತಿಗಳಾದ ಪ್ರೊ. ಪ್ರಮೋದ ಬಿ. ಗಾಯಿ, ಕುಲಸಚಿವರುಗಳಾದ ಪ್ರೊ. ಎಂ.ಎನ್. ಸಾಲಿ, ಡಾ. ಹೊನ್ನುಸಿದ್ಧಾರ್ಥ, ಹಣಕಾಸು ಅಧಿಕಾರಿಗಳಾದ ಪ್ರೊ. ಆರ್.ಎಲ್. ಹೈದ್ರಾಬಾದಿ, ಡಾ. ಸಿ.ಎಂ. ಕುಂದಗೋಳ, ಶ್ರೀ ಚಂದ್ರಕಾಂತ ಬೆಲ್ಲದ, ಶ್ರೀ ಐ.ಜಿ. ಸನದಿ, ಶ್ರೀ ಮೋಹನ ಲಿಂಬಿಕಾಯಿ ಮುಂತಾದವರು ಉಪಸ್ಥಿತರಿದ್ದರು.

**ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ**

ದಿನಾಂಕ 20.5.2019 ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ - 9 ಮತ್ತು ಕೃತಿ ಲೋಕಾರ್ಪಣೆ ನೆರವೇರಿತು.

ಜಾಗತೀಕರಣದಿಂದಾಗಿ ದೇಶದಲ್ಲಿ ಬಡತನದ ಪ್ರಮಾಣ ಕಡಿಮೆಯಾಗಿದೆ. ಹೆಚ್ಚಿನ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗಿದ್ದು, ಜನರ ಜೀವನಮಟ್ಟ ಸುಧಾರಣೆಯಾಗಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಂಶೋಧನಾ ವಿಭಾಗದ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್ ಹೇಳಿದರು. ಆದರೆ ಇತ್ತೀಚೆಗೆ ಜಾಗತೀಕರಣಕ್ಕೂ ವಿರೋಧ ವ್ಯಕ್ತವಾಗಿದ್ದು, ಸಂಪತ್ತು ಕೆಲವರ ಬಳಿ ಮಾತ್ರ ಕ್ರೋಡೀಕೃತವಾಗಿದ್ದು, ಶ್ರೀಮಂತರು ಮತ್ತು ಬಡವರ ನಡುವೆ ಅಂತರ ಹೆಚ್ಚಾಗಿ ಆರ್ಥಿಕ ಅಸಮಾನತೆಗೆ ಕಾರಣವಾಗಿದೆ ಎಂಬ ಆರೋಪ ಕೇಳಿಬರುತ್ತಿದೆ. 90ರ ದಶಕಕ್ಕೆ ಹೋಲಿಸಿದರೆ ಭಾರತ ಈಗ ಆರ್ಥಿಕವಾಗಿ ಸದೃಢವಾಗಿದೆ. ಅಂತಾರಾಷ್ಟ್ರೀಯ ವ್ಯಾಪಾರ ವ್ಯವಹಾರದಿಂದ ಸಾಕಷ್ಟು ಲಾಭವಿದ್ದು ಎರಡು ದೇಶಗಳ ನಡುವೆ ಬಾಂಧವ್ಯ ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳವರು ಮಾತನಾಡಿ, ವೈಯಕ್ತಿಕ ಸಾಧನೆ, ಶಿಸ್ತು ನಮ್ಮನ್ನು ಎಷ್ಟು ಎತ್ತರಕ್ಕೆ ಬೇಕಾದರೂ ಕೊಂಡೊಯ್ಯುತ್ತದೆ. ನಮ್ಮ ದೇಶದ ಪ್ರತಿಭಾವಂತರು ಶ್ರಮಪಟ್ಟರೆ ವಿಶ್ವದ ಯಾವುದೇ ಉನ್ನತ ಸ್ಥಾನಮಾನಗಳಿಗೆ ಏರಲು ಸಾಧ್ಯ ಎಂಬುದನ್ನು ಡಾ. ಗೀತಾ ಗೋಪಿನಾಥ್ ಸಾಧಿಸಿ ತೋರಿಸಿದ್ದಾರೆ. ಇಂದಿನ ಯುವ ಸಮುದಾಯಕ್ಕೆ ಇವರು ಸ್ಫೂರ್ತಿ ಎಂದರು.

ಚಾರ್ಟರ್ಡ್ ಅಕೌಂಟೆಂಟ್ ಮತ್ತು 'ತುಘಲಕ್' ಪತ್ರಿಕೆ ಸಂಪಾದಕರಾದ ಶ್ರೀ ಎಸ್. ಗುರುಮೂರ್ತಿಯವರ 'ಭಾರತ್-ಗ್ಲೋಬಲ್ ಆ್ಯಂಬಿಷನ್ಸ್ ಅಂಡ್ ಲೋಕಲ್ ಚಾಲೆಂಜಸ್' ಕೃತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ.ಆರ್. ವೇಣುಗೋಪಾಲ್‌ರವರು ಬಿಡುಗಡೆ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ.ವಿ. ಗೋಪಿನಾಥ್ ಮತ್ತು ಶ್ರೀಮತಿ ವಿ.ಸಿ. ವಿಜಯಲಕ್ಷ್ಮೀ, ವಿಧಾನಪರಿಷತ್ ಮಾಜಿ ಸದಸ್ಯರಾದ ಶ್ರೀ ತೋಂಟದಾರ್ಯ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಕುರುಬೂರು ಶಾಂತಕುಮಾರ್, ಡಾ. ಸಿ.ಜಿ. ಬೆಟಸೂರಮಠ, ಪ್ರೊ. ಕೆ.ಎಸ್. ಸುರೇಶ್, ಪ್ರೊ. ಆರ್.ಎಂ. ಚಿಂತಾಮಣಿ ಮುಂತಾದವರು ಉಪಸ್ಥಿತರಿದ್ದರು.

**ಮಠಗಳ ದಾಸೋಹಸೇವೆಗೆ ಮಹತ್ವದ ಸ್ಥಾನವಿದೆ**

ದಿನಾಂಕ 27.5.2019 ರಂದು ಟಿ. ನರಸೀಪುರ ತಾಲ್ಲೂಕಿನ ತಲಕಾಡು ಹೋಬಳಿಯ ಶ್ರೀ ಮೇದಿನ ಮಠದಲ್ಲಿ ನೂತನ ಗುರು ಪಟ್ಟಾಧಿಕಾರ ಮಹೋತ್ಸವವು ಜರುಗಿತು.

ಜಗತ್ತಿನಲ್ಲಿ ದಾಸೋಹಕ್ಕೆ ಬಹಳ ಮಹತ್ವದ ಸ್ಥಾನವಿದೆ. ಪ್ರಪಂಚದ ಕೆಲವು ದೇಶಗಳಲ್ಲಿ ತಿನ್ನಲು ಆಹಾರವಿಲ್ಲದೆ ಜನರು ಪರದಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಆಹಾರದ ಮಹತ್ವವನ್ನು ಅರಿತು ಅವಶ್ಯಕತೆಗೆ ತಕ್ಕಂತೆ ಮಿತವಾಗಿ ಬಳಸಬೇಕು. ಇತ್ತೀಚೆಗೆ ಆಹಾರವನ್ನು ಅಪವ್ಯಯ ಮಾಡುವುದೇ ಒಂದು ಸಂಸ್ಕೃತಿಯಾಗುತ್ತಿದೆ. ಇದೇ ರೀತಿ ಮುಂದುವರಿದರೆ ಮುಂದೆ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಎಚ್ಚರಿಸಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು, ವಿಶ್ವಮಟ್ಟದಲ್ಲಿ ಭಾರತೀಯ ಮಠಮಾನ್ಯಗಳ ಕಾರ್ಯವೈಖರಿಯನ್ನು ಶ್ಲಾಘಿಸಲಾಗುತ್ತಿದೆ. ಕಾರಣ ನಮ್ಮಲ್ಲಿರುವ ಬದ್ಧತೆ. ಸಮಾಜವು ಧಾರ್ಮಿಕವಾಗಿ ಮಠಮಾನ್ಯಗಳನ್ನು ಅವಲಂಬಿಸಬೇಕು. ಮಠಗಳು ಸಮಾಜ ಸುಧಾರಣೆಯ ಕಾಯಕದಲ್ಲಿ ತೊಡಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರೀ ಬೇಲಿಮಠ ಹಾಗೂ ಶ್ರೀ ದೇಗುಲಮಠದ ಶ್ರೀಗಳು, ಮಾಜಿ ಶಾಸಕರಾದ ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಡಾ. ಎಂ. ಶಿವಕುಮಾರಸ್ವಾಮಿ, ಶ್ರೀ ಪ್ರೀತಂ ನಾಗಪ್ಪ ಉಪಸ್ಥಿತರಿದ್ದರು.

## ಬಸವಣ್ಣನವರು ಜೀವನವನ್ನೇ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡವರು

ಅಸಮಾನತೆಯನ್ನು ನಿವಾರಿಸುವ ಸಲುವಾಗಿ ಬಸವಣ್ಣನವರು ತಮ್ಮ ಜೀವನವನ್ನೇ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡ ಮಹಾನ್ ಮಾನವತಾವಾದಿ ಎಂದು ಪರಮಪೂಜ್ಯ ಜಗದ್ಗುರುಗಳು ದಿನಾಂಕ 1.6.2019 ರಂದು ಹೆಚ್.ಡಿ. ಕೋಟೆಯ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಂಗಳಮಂಟಪದಲ್ಲಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ವತಿಯಿಂದ ಏರ್ಪಡಿಸಿದ್ದ ಬಸವ ಜಯಂತಿಯಲ್ಲಿ ನುಡಿದರು.

ಕಾಯಕ ಮತ್ತು ದಾಸೋಹ ಎರಡರ ಮೂಲಕ ಅಸಮಾನತೆಯನ್ನು ತೊಡೆದುಹಾಕಿ, ಹಸಿದವರಿಗೆ ಅನ್ನ ನೀಡುವ ವ್ಯವಸ್ಥೆಯಿಂದ ಸಮಾಜದಲ್ಲಿದ್ದ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದು ಬಸವಣ್ಣನವರ ಗುರಿಯಾಗಿತ್ತು. ಇಂದಿನ ರಾಜಕಾರಣಿಗಳು, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂಬ ವಚನದ ಸಾರವನ್ನು ಅರ್ಥಮಾಡಿಕೊಳ್ಳದೆ ಅದರ ವಿರುದ್ಧವಾಗಿ ನಡೆದುಕೊಳ್ಳುವ ಮೂಲಕ ಅವರಿವರನ್ನು ತೆಗಳುತ್ತಾ, ತಮ್ಮನ್ನು ತಾವುಗಳೇ ಹೊಗಳಿಕೊಳ್ಳುತ್ತಿದ್ದಾರೆ. ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ಶ್ರೇಷ್ಠವಾದ ಮನುಷ್ಯಜನ್ಮದಲ್ಲಿ ಬದುಕುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಶಾಸಕರಾದ ಶ್ರೀ ಬಿ. ಹರ್ಷವರ್ಧನ ಮಾತನಾಡಿ, ಅಸ್ಪೃಶ್ಯತೆ, ಅಸಮಾನತೆ ಹೋಗಲಾಡಿಸುವಲ್ಲಿ ಬಸವಣ್ಣ, ಬುದ್ಧ, ಅಂಬೇಡ್ಕರ್‌ರವರು ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ಸಮಾಜದ ಅನಿಷ್ಟ ಪದ್ಧತಿಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ಶಕ್ತಿ ಇರುವುದು ಮಠ-ಮಾನ್ಯಗಳಿಗೆ ಮಾತ್ರ ಎಂದರು. ಡಾ. ನಂದೀಶ್ ಹಂಚೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕನಕಪುರ ಶ್ರೀ ದೇಗುಲಮಠ, ಶ್ರೀ ದೇವನೂರು ಮಠ, ಶ್ರೀ ಕುದೇರು ಮಠ, ದಡದಹಳ್ಳಿ, ಪಡಗಲು, ಮಾದಾಪುರ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ಮಾಜಿ ಸಚಿವರಾದ ಶ್ರೀ ಎಂ. ಶಿವಣ್ಣ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪರಿಮಳ ಶ್ಯಾಮ್, ಉಪಾಧ್ಯಕ್ಷರಾದ ಶ್ರೀಮತಿ ಗೌರಮ್ಮ ಸೋಮಶೇಖರ್ ಉಪಸ್ಥಿತರಿದ್ದರು.

## ಮಹನೀಯರ ಜಯಂತಿಗಳು ಕೇವಲ ಆಚರಣೆಗೆ ಸೀಮಿತವಾಗಬಾರದು

ಮಹನೀಯರ ಜಯಂತಿಗಳು ಕೇವಲ ಆಚರಣೆಗೆ ಸೀಮಿತವಾಗದೆ ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕೆಂದು ಪರಮಪೂಜ್ಯ ಜಗದ್ಗುರುಗಳು ನಂಜನಗೂಡಿನ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾ, ವಿವಿಧ ವೀರಶೈವ ಸಂಘಟನೆಗಳ ಸಹಯೋಗದೊಂದಿಗೆ ದಿನಾಂಕ 2.6.2019 ರಂದು ಏರ್ಪಡಿಸಿದ್ದ ವಿಶ್ವಗುರು ಬಸವಣ್ಣ

ಹಾಗೂ ಲಿಂ. ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಜಯಂತ್ಯೋತ್ಸವದಲ್ಲಿ ಹೇಳಿದರು. ಪರಮಪೂಜ್ಯರು, ಮಹಾಪುರುಷರ ಜಯಂತಿಯನ್ನು ಆಚರಿಸುವುದು ಕೇವಲ ಆತ್ಮಸಂತೋಷಕ್ಕಾಗಿ ಅಲ್ಲ, ಅವರು ತಮ್ಮ ಜೀವಿತಾವಧಿಯಲ್ಲಿ ಕೊಟ್ಟಂತಹ ಅದ್ಭುತ ಕೊಡುಗೆ, ಮಾಡಿದ ಸಾಧನೆ, ಅನುಸರಿಸಿದ ತತ್ವಗಳನ್ನು ಅರಿತುಕೊಂಡು ಮನುಷ್ಯ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸುಖ, ಸಂತೋಷ, ನೆಮ್ಮದಿಯಿಂದ ಬದುಕಿ ದೈವತ್ವವನ್ನು ಪಡೆದುಕೊಳ್ಳಬೇಕು. ಯಾವುದೇ ಜಯಂತಿ ಕಾರ್ಯಕ್ರಮ ತೋರಿಕೆಯಾಗದೆ ಅದರೊಳಗಿರುವ ಅಂತರಾತ್ಮವನ್ನು ಅರ್ಥ ಮಾಡಿಕೊಳ್ಳುವಂತಾಗಬೇಕು ಎಂದು ಪರಮಪೂಜ್ಯರು ತಿಳಿ ಹೇಳಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷರಾದ ಶ್ರೀ ಎನ್. ತಿಪ್ಪಣ್ಣ ನವರು ಬಸವಣ್ಣ ಮತ್ತು ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ತತ್ವಸಿದ್ಧಾಂತ ಗಳನ್ನು ಪಾಲಿಸಲು ನಾವು ಹಿಂದೆ ಬೀಳುತ್ತಿದ್ದೇವೆ. ನಮ್ಮ ಜೀವನ ಸಾರ್ಥಕವಾಗಬೇಕಾದರೆ ಅವರ ಮಾರ್ಗಗಳಲ್ಲಿ ನಾವು ಸಾಗಬೇಕು. ಆಗ ಅವರ ಜಯಂತಿಗಳ ಆಚರಣೆಗೆ ಅರ್ಥ ಬರುತ್ತದೆ ಎಂದು ಹೇಳಿದರು.

ಹೈದರಾಬಾದ್‌ನ ಭಾವೈಕ್ಯ ಮತ್ತು ಶಾಂತಿ ಪ್ರವಚನಕಾರ ಪಂ. ಮೌಲಾನಾ ಸಯ್ಯದ್ ಭಾಷಾರವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಕನಕಪುರ ಶ್ರೀ ದೇಗುಲಮಠ, ಶ್ರೀ ದೇವನೂರು ಮಠ, ಮಲ್ಲನಮೂಲೆ ಮಠಗಳ ಶ್ರೀಗಳವರು ಉಪಸ್ಥಿತರಿದ್ದರು.

**ಸುತ್ತೂರು ಮಠ ನನಗೆ ತವರಿದ್ದಂತೆ**

ದಿನಾಂಕ 2.6.2019 ರಂದು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠಕ್ಕೆ ಈಶಾ ಫೌಂಡೇಶನ್‌ನ ಸಂಸ್ಥಾಪಕರಾದ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರು ಭೇಟಿ ನೀಡಿದ್ದರು.

ಪತ್ರಕರ್ತರು ಭೇಟಿ ಮಾಡಿದಾಗ ಸುತ್ತೂರು ಮಠ ನನಗೆ ತಾಯಿಮನೆ ಇದ್ದಂತೆ. ಸಮಾಜಕ್ಕೆ ಸುತ್ತೂರು ಮಠದ ಕೊಡುಗೆ ಅಮೋಘವಾದುದು ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರನ್ನು ಮಂತ್ರಘೋಷ, ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಉಪಸ್ಥಿತರಿದ್ದರು.

**ಸಾಹಿತ್ಯ ಕೃಷಿಕ ಡಿ.ಎ. ಶಂಕರ್ ಬದುಕು-ಬರಹ ಕೃತಿ ಲೋಕಾರ್ಪಣೆ**

ಡಿ.ಎ. ಶಂಕರ್‌ರವರನ್ನು ಸಾಹಿತ್ಯ ಕೃಷಿಕ ಎಂದು ಕರೆದದ್ದು ಔಚಿತ್ಯಪೂರ್ಣವಾಗಿದೆ. ವರ್ಷಪೂರ್ತಿ ಒಬ್ಬ ಕೃಷಿಕ ತನ್ನ ಕಾಯಕದಲ್ಲಿ ತೊಡಗುವ ಹಾಗೆ ಶಂಕರ್‌ರವರು ಸಾಹಿತ್ಯ ಕೃಷಿ ಮಾಡಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರಿನಲ್ಲಿ ಸಂವಹನ ಪ್ರಕಾಶನದ ವತಿಯಿಂದ ದಿನಾಂಕ 3.6.2019ರಂದು ಆಯೋಜಿಸಿದ್ದ ಶ್ರೀ ವಿ.ಎಲ್. ಪ್ರಕಾಶ್ ರಚಿಸಿರುವ 'ಸಾಹಿತ್ಯ ಕೃಷಿಕ ಡಿ.ಎ. ಶಂಕರ್ ಬದುಕು - ಬರಹ' ಕೃತಿ ಲೋಕಾರ್ಪಣೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಹೇಳಿದರು.

ಶಂಕರ್‌ರವರ ಸಾಹಿತ್ಯ ಮತ್ತು ಬದುಕನ್ನು ಅಧ್ಯಯನ ಮಾಡಿ, ಹಲವು ಸ್ವಾರಸ್ಯಕರ ಸಂಗತಿಗಳನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸಮಾನ ಪಾಂಡಿತ್ಯ ಹೊಂದಿರುವ ಇವರ ಅನೇಕ ಅನುಭವಗಳನ್ನು ಸಂಕ್ಷಿಪ್ತವಾಗಿ ಇದರಲ್ಲಿ ಕಟ್ಟಿಕೊಡಲಾಗಿದೆ. ಶಂಕರ್‌ರವರು ಸದಾ ಸಾಹಿತ್ಯಲೋಕದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ನಡುವೆ ಸೇತುವೆಯಾಗಿ ಕೃಷಿ ಮಾಡಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ಶುಭ ಹಾರೈಸಿದರು.

ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಎಸ್. ತಾರಾನಾಥರವರು ಅನುವಾದಗೊಳ್ಳುವ ಉತ್ತಮ ಪುಸ್ತಕಗಳು ಭಾಷೆಯ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣ ಮಾಡುತ್ತವೆ. ಅನುವಾದದಿಂದ ಭಾಷೆಯ ದಿಕ್ಕನ್ನು ಮತ್ತಷ್ಟು ವಿಸ್ತರಿಸಬಹುದು. ಯಾವುದೇ ಭಾಷೆ ಬೆಳವಣಿಗೆ ಹೊಂದಲು ಅನುವಾದವು ಅನುಕೂಲಕರ. ಡಿ.ಎ. ಶಂಕರ್‌ರವರು ಅನುವಾದದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆದರೆ ಅನುವಾದಕರನ್ನು ಗುರುತಿಸುವುದಿಲ್ಲವೆಂಬ ಕೊರಗು ಅವರನ್ನು ಕಾಡುತ್ತಿದೆ. ಆದರೆ, ಮಾಡುವ ಕೆಲಸದಲ್ಲಿ ಕ್ರಿಯಾಶೀಲತೆ ಹಾಗೂ ಬದ್ಧತೆ ಇದ್ದರೆ ಜನರು ಗುರುತಿಸಿ ಗೌರವಿಸುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಡಾ. ಡಿ.ಎ. ಶಂಕರ್, ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಎ.ಎಲ್. ಪ್ರಕಾಶ್, ಡಾ. ಎ.ವಿ. ನರಸಿಂಹಮೂರ್ತಿಯವರು ಉಪಸ್ಥಿತರಿದ್ದರು.

**ಪ್ರತಿಭಾವಂತ ಮಕ್ಕಳೇ ದೇಶದ ಆಸ್ತಿ**

ಅಮೆರಿಕದ ಹಿಂದಿನ ಅಧ್ಯಕ್ಷರು ಭಾರತೀಯರಿಗೆ ವೀಸಾ ಕೊಡುವ ನಿಯಮಗಳಿಗೆ ತಿದ್ದುಪಡಿ ತಂದಿದ್ದರು. ಆದರೆ ಕೇವಲ 24 ಗಂಟೆಗಳಲ್ಲಿ ಅದನ್ನು ವಾಪಸ್ಸು ಪಡೆದರು. ಏಕೆಂದರೆ ಭಾರತೀಯರು ಇಲ್ಲದೇ ದೇಶವನ್ನು ಮುನ್ನಡೆಸುವುದು ಕಷ್ಟ ಎನ್ನುವುದು ಅವರಿಗೆ ತಿಳಿಯಿತು ಎಂದು ಪರಮಪೂಜ್ಯ ಜಗದ್ಗುರುಗಳು ದಿನಾಂಕ 5.6.2019

ರಂದು ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್‌ನ 60ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಬ್ಯಾಂಕಿನ ಸದಸ್ಯರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಹೇಳಿದರು. ನಮ್ಮ ದೇಶದ ಮಕ್ಕಳು ಕಷ್ಟಸಹಿಷ್ಣುಗಳು, ಹಗಲಿರುಳು ಎನ್ನದೇ ದುಡಿಯುತ್ತಾರೆ. ಇದು ಭಾರತೀಯ ಸಂಸ್ಕೃತಿಯ ಪ್ರತಿಫಲನ. ಪ್ರತಿಭಾವಂತ ಮಕ್ಕಳೇ ದೇಶದ ಆಸ್ತಿ. ಇಂತಹ ಮಕ್ಕಳಿಗೆ ಪ್ರೋತ್ಸಾಹ ನೀಡುವ ವೇದಿಕೆಗಳು ಹೆಚ್ಚಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರು, ಶಿಕ್ಷಣ ಸಂಸ್ಥೆಗಳು ಪ್ರತಿಭಾವಂತ ಮಕ್ಕಳನ್ನು ಪ್ರೋತ್ಸಾಹಿಸಬೇಕು, ಕಾರ್ಯಕ್ರಮ ರೂಪಿಸಿ ಚಾಲ್ತಿಗೆ ತರಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ. ಎಂ. ಕೃಷ್ಣೇಗೌಡ, ಎಂಎಂಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಎ. ಪ್ರಭುಪ್ರಸಾದ್, ಶ್ರೀ ಆರ್. ಆನಂದ್‌ರವರು ಉಪಸ್ಥಿತರಿದ್ದರು.

**ಸಮಾಜದ ಒಳಿತಿಗಾಗಿ ದುಡಿವವರನ್ನು ಸ್ಮರಿಸುವುದು ಪುಣ್ಯದ ಕೆಲಸ**

ಸಮಾಜದಲ್ಲಿ ಅಜ್ಞಾನ, ಅನಕ್ಷರತೆ ಹೋಗಲಾಡಿಸಲು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಸೇವೆ ಅಪಾರವಾದುದು. ಅವರು ಶ್ರೀ ಬಸವೇಶ್ವರರ ಮಾರ್ಗದಲ್ಲಿ ಮುನ್ನಡೆದ ಮಹಾನುಭಾವರು ಎಂದು ಪರಮಪೂಜ್ಯ ಜಗದ್ಗುರುಗಳವರು ತಿಳಿಸಿದರು.

ದಿನಾಂಕ 8.6.2019 ರಂದು ಟಿ. ನರಸೀಪುರದ ಎ.ಪಿ.ಎಂ.ಸಿ. ಆವರಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಮತ್ತು ಶ್ರೀ ಡಾ. ಶಿವಕುಮಾರಸ್ವಾಮಿಗಳವರ ಜಯಂತ್ಯುತ್ಸವದಲ್ಲಿ ಭಾಗವಹಿಸಿದ ಪರಮಪೂಜ್ಯರು, ಇಬ್ಬರೂ ಶ್ರೀಗಳು ಸಮಕಾಲೀನ ಚಿಂತನೆಗಳನ್ನು ಹೊಂದಿದ್ದರು, ಅಜ್ಞಾನವನ್ನು ಹೋಗಲಾಡಿಸಿ ಸಮಾಜಕ್ಕೆ ಜ್ಞಾನವನ್ನು ತುಂಬಿದರು, ತಮ್ಮ ಸೇವೆಯ ಮೂಲಕವೇ ಜನಮಾನಸದಲ್ಲಿ ಉಳಿದರು. ಇಂತಹವರನ್ನು ಸ್ಮರಿಸುತ್ತಿರುವುದು ಪುಣ್ಯದ ಕೆಲಸ ಎಂದರು.

ವಿಶೇಷ ಉಪನ್ಯಾಸ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎಸ್. ಸ್ವಾಮಿಯವರು ವ್ಯಕ್ತಿತ್ವ ವಿಕಸನಕ್ಕೆ ಬಸವಣ್ಣನವರೇ ಗುರು. ಅವರ ಚಿಂತನೆಗಳು, ವಚನಗಳು ಎಂದಿಗೂ ಸಾರ್ವಕಾಲಿಕವಾಗಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಾಟಾಳು ಶ್ರೀಗಳು, ಶ್ರೀ ಶಿವಮೂರ್ತಿ ಕಾನ್ಯ, ಶ್ರೀ ತೊಟ್ಟವಾಡಿ ಮಹದೇವಸ್ವಾಮಿಯವರು ಉಪಸ್ಥಿತರಿದ್ದರು.

**ಆರೋಗ್ಯದಿಂದಿರಲು ಉತ್ತಮ ಆಹಾರಪದ್ಧತಿ ರೂಢಿಸಿಕೊಳ್ಳಿ**

ಮನುಷ್ಯನಿಗೆ ಆರೋಗ್ಯ ಮುಖ್ಯ. ಉತ್ಸಾಹದಿಂದ ಸಾಧನೆ ಮಾಡಲು ಆರೋಗ್ಯದ ಪಾತ್ರ ಬಹಳ ಮಹತ್ವವಾದುದು ಎಂದು ಪರಮಪೂಜ್ಯ ಜಗದ್ಗುರುಗಳು ದಿನಾಂಕ 17.6.2019ರಂದು ಮೈಸೂರಿನ ಜೆ.ಪಿ. ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕಾಮಾಕ್ಷಿ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಹೇಳಿದರು.

ಇಂದಿನ ದಿನಮಾನಗಳಲ್ಲಿ ಜನರು ರಸ್ತೆಬದಿಯ ಆಹಾರಗಳಿಗೆ ಮಾರುಹೋಗಿದ್ದಾರೆ. ಅದರಿಂದ ಆರೋಗ್ಯ ಹದಗೆಡುತ್ತದೆ. ಇದನ್ನು ತಪ್ಪಿಸಲು ಉತ್ತಮ ಆಹಾರಪದ್ಧತಿಯನ್ನು ರೂಢಿಸಿಕೊಳ್ಳಬೇಕು. ಮಾಧವ ಶೆಣೈ ಅವರ ಕುಟುಂಬ ದಾನ-ಧರ್ಮಕ್ಕೆ ಹೆಸರುವಾಸಿಯಾಗಿದೆ. ಶ್ರೀಮತಿ ಸುಲೋಚನಾಬಾಯಿ ಅವರ ಆಶಯದಿಂದ ಸ್ಥಾಪನೆಯಾದ ಕಾಮಾಕ್ಷಿ ಆಸ್ಪತ್ರೆ ಉತ್ತಮ ಸೇವೆ ನೀಡುತ್ತಿದೆ. ಅವರ ಕುಟುಂಬದವರು ಈ ಸತ್ಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತೋಷದ ಸಂಗತಿ ಎಂದರು.

ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ ವೈದ್ಯರನ್ನು ಉಪಬ್ರಹ್ಮ ಎನ್ನುತ್ತಾರೆ. ರೋಗಿಗಳನ್ನೂ ಆರೋಗ್ಯವಂತರನ್ನಾಗಿ ಮಾಡಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತಾರೆ. ಅವರ ಸೇವೆ ಅಪಾರವಾದುದು ಆದರೆ ಇಂದು ವೈದ್ಯರ ಮೇಲೆ ಹಲ್ಲೆಗಳು ನಡೆಯುತ್ತಿರುವುದು ಸರಿಯಲ್ಲ ಸರ್ಕಾರ ಇದರತ್ತ ಗಮನಹರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಸಕರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ಎ. ರಾಮದಾಸ್, ಮಾಜಿ ಶಾಸಕ ಶ್ರೀ ವಾಸು, ಕಾಮಾಕ್ಷಿ ಆಸ್ಪತ್ರೆಯ ಟ್ರಸ್ಟಿನ ಶ್ರೀ ಮಹೇಶ್ ಶೆಣೈ, ಡಾ. ಕೆ.ಆರ್. ಕಾಮತ್ ಉಪಸ್ಥಿತರಿದ್ದರು.

**ಅಂತರ್ಜಲ ಮಟ್ಟ ಹೆಚ್ಚಿಸದಿದ್ದರೆ ಜೀವಸಂಕುಲಕ್ಕೆ ಅಪಾಯ**

ಮನುಷ್ಯ ತನ್ನ ಹಿತಕ್ಕಾಗಿ ಕಿಂಚಿತ್ತೂ ಭಯವಿಲ್ಲದೆ ಪ್ರಾಕೃತಿಕ ಸಂಪತ್ತನ್ನು ನಾಶ ಮಾಡುತ್ತಿರುವುದರಿಂದ ಭೂಮಿಯ ಮೇಲೆ ನೀರಿನ ಅಭಾವ ಉಂಟಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳು ದಿನಾಂಕ 18.6.2019ರಂದು ಪಿರಿಯಾಪಟ್ಟಣ ತಾಲ್ಲೂಕಿನ ಶ್ರೀ ಬೆಟ್ಟದಪುರ ಮಠದಲ್ಲಿ ಶ್ರೀ ಚಿಕ್ಕವೀರ ದೇಶಿಕೇಂದ್ರ ಸ್ವಾಮಿಗಳು ಮತ್ತು ಶ್ರೀ ಚನ್ನವೀರ ದೇಶಿಕೇಂದ್ರ ಸ್ವಾಮಿಗಳ ಗಣಾರಾಧನೆ ಮತ್ತು ಶ್ರೀ ಕನ್ನಡ ಮಠದ 210ನೇ

ವರ್ಷಾಚರಣೆ ಕಾರ್ಯಕ್ರಮದಲ್ಲಿ ಹೇಳಿದರು.

ಪ್ರಕೃತಿಯಿಂದ ಬರುವ ಮಳೆಯ ನೀರನ್ನು ಸಂಗ್ರಹಿಸಿ ಅಂತರ್ಜಲ ಮಟ್ಟವನ್ನು ಹೆಚ್ಚಿಸದಿದ್ದರೆ ಮನುಷ್ಯ ಮತ್ತು ಜೀವಸಂಕುಲಕ್ಕೆ ಅಪಾಯ ಕಟ್ಟಿಟ್ಟ ಬುತ್ತಿ. ಮುಂದಿನ ಪೀಳಿಗೆ ನೀರಿಗಾಗಿ ಪರದಾಡುವ ಪರಿಸ್ಥಿತಿ ಬರಬಹುದು ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಧಾರವಾಡದ ಶ್ರೀ ಮುರುಘಾಮಠ, ಕನಕಪುರ ಶ್ರೀ ದೇಗುಲ ಮಠ, ಬೆಟ್ಟದಪುರ, ಮಾದಳ್ಳಿ, ತೇಜೂರು, ವಿರಾಜಪೇಟೆ ಮಠಗಳ ಶ್ರೀಗಳು, ಶ್ರೀ ಆರ್.ಡಿ. ಸತೀಶ್, ಶ್ರೀ ಊಯಿಗೌಡನಹಳ್ಳಿ ತೇಜಸ್, ಶ್ರೀ ಶಿವಮೂರ್ತಿ ಕಾನ್ಯ, ಶ್ರೀ ಕೆ.ಪಿ. ಚಂದ್ರಶೇಖರಯ್ಯ ಉಪಸ್ಥಿತರಿದ್ದರು.

**ಶ್ರೀ ಗುರುಮಲ್ಲೇಶ್ವರರು ಮಹಿಮಾಪುರುಷರು**

ಸಮಾಜದಲ್ಲಿ ಪ್ರತಿಯೊಂದಕ್ಕೂ ಒಂದು ಕೊನೆಯಿದೆ. ಆದರೆ ಶ್ರೀ ಗುರುಮಲ್ಲೇಶ್ವರರ ಮಹಿಮಾನ್ವಿತ ಚರಿತ್ರೆಗೆ ಕೊನೆಯಿಲ್ಲ ಎಂದು ಪರಮಪೂಜ್ಯ ಜಗದ್ಗುರುಗಳು ದಿನಾಂಕ 20.6.2019 ರಂದು ದೇವನೂರು ಶ್ರೀ ಗುರುಮಲ್ಲೇಶ್ವರ ಮಠದ ದಾಸೋಹ ಭವನವನ್ನು ಉದ್ಘಾಟಿಸಿ ಮಾತನಾಡಿದರು. ಶ್ರೀ ಗುರುಮಲ್ಲೇಶ್ವರರು ಮಹಿಮಾಪುರುಷರು, ತಪಸ್ವಿಗಳು ಲೋಕಕಲ್ಯಾಣಕ್ಕಾಗಿ ಶ್ರಮಿಸಿದವರು. ದಾಸೋಹಕ್ಕೆ ಹೆಸರಾದ ದೇವನೂರು ಮಠದ ಭವ್ಯವಾದ ಈ ದಾಸೋಹ ಭವನ ಹಿರಿಯ ನಾಗರಿಕರ ಪ್ರಾಮಾಣಿಕತೆಯ ಪ್ರತೀಕವಾಗಿದೆ. ಭಕ್ತರು ನೀಡಿದ ಒಂದೊಂದು ರೂಪಾಯಿಗಳನ್ನು ಸೇರಿಸಿ ಈ ಭವನ ನಿರ್ಮಿಸಲಾಗಿದೆ ಇಂತಹ ಪವಿತ್ರವಾದ ಕಾರ್ಯಗಳಿಗೆ ಯಾರು ಎಷ್ಟು ಕೊಟ್ಟರು ಎನ್ನುವುದುಕ್ಕಿಂತ ಯಾವ ಮನಸ್ಸಿನಿಂದ ನೀಡಿದರು ಎನ್ನುವುದೇ ಮುಖ್ಯ ಎಂದರು.

'ದಾಸೋಹ ಸಿರಿ' ಗ್ರಂಥವನ್ನು ಲೋಕಾರ್ಪಣೆಗೊಳಿಸಿದ ಕನಕಪುರ ಶ್ರೀ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು, ಶತಮಾನಗಳ ಹಿಂದೆ ಪ್ರಮುಖ ಗ್ರಾಮಗಳಲ್ಲಿ ಕಂತೆ ಭಿಕ್ಷೆ ರೂಪಕವಾದ ಮಠಗಳನ್ನು ಸ್ಥಾಪಿಸಿ ದಾರಿಹೋಕರಿಗೆ, ಬಳಲಿದವರಿಗೆ, ಹಸಿದವರಿಗೆ ಪ್ರಸಾದ ನೀಡುವ ಕಾಯಕವನ್ನು ಗುರುಮಲ್ಲೇಶ್ವರರು ಕೈಗೊಂಡರು. ಹೀಗಾಗಿಯೇ ಇಂದಿಗೂ ಅವರು ಚಿರಸ್ಥಾಯಿಯಾಗಿದ್ದಾರೆ ಎಂದರು. ಸಾಹಿತಿ ಶ್ರೀ ಮಲೆಯೂರು ಗುರುಸ್ವಾಮಿಯವರು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ದೇವನೂರು, ಸೋಮಹಳ್ಳಿ, ವಾಟಾಳು, ಬರಡನಪುರ, ದಡದಹಳ್ಳಿ, ಮಾದಳ್ಳಿ ಮತ್ತು ಶ್ರೀ ಹೊಸಮಠದ ಪೂಜ್ಯರುಗಳು ಉಪಸ್ಥಿತರಿದ್ದರು.

☐

## ಲೇಖಕರ ವಿಳಾಸ

**ಪ್ರೊ. ಶಿವಕುಮಾರ ಎಸ್. ಬಳಿಗಾರ**
ಕೋ. ಡಾ. ಎಸ್. ಶಿವರಾಜಪ್ಪ
'ನಾಗಮಲ್ಲೆ' 8ನೇ ಮುಖ್ಯರಸ್ತೆ
ಸರಸ್ವತಿಪುರಂ
ಮೈಸೂರು

**ಶ್ರೀ ವೆಂಕಟೇಶ ಕೆ. ಜನಾದ್ರಿ**
ಲೆಕ್ಕಪತ್ರ ಅಧೀಕ್ಷಕ ಈ ಕರಸಾ. ಸಂಸ್ಥೆ
ಕೇಂದ್ರ ಕಛೇರಿ
ಕಲಬುರಗಿ 585 102

**ಪ್ರೊ. ಮೊರಬದ ಮಲ್ಲಿಕಾರ್ಜುನ**
ನಿರ್ದೇಶಕರು
ಪ್ರಕಟಣ ವಿಭಾಗ
ಜೆಎಸ್‌ಎಸ್ ಮಹಾವಿದ್ಯಾಪೀಠ
ಮೈಸೂರು 570 004

**ಡಾ. ಕೆ.ಎಸ್. ಮಲ್ಲೇಶ್**
ನಂ. 100, 24ನೇ ಮುಖ್ಯರಸ್ತೆ
'ಬಿ' ಬಡಾವಣೆ, ವಿಜಯನಗರ 3ನೇ ಹಂತ
ಮೈಸೂರು 57 0 017

**ಡಾ. ಎನ್. ಎಮ್. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜೆಎಸ್‌ಎಸ್ ಕಾಲೇಜು, ಗುಂಡ್ಲುಪೇಟೆ

**ಪ್ರೊ. ಜಿ.ಎಚ್. ಹನ್ನೆರಡುಮಠ**
ನಂ. 5, "ಮಾವು ಮಲ್ಲಿಗೆ"
ಇಂದ್ರಪ್ರಸ್ಥ ಕಾಲನಿ
ಗೊಟ್ಟಿಗೆರೆ ಅಂಚೆ
ಬೆಂಗಳೂರು 560 083



ನವದೆಹಲಿಯಲ್ಲಿ ರಾಷ್ಟ್ರಪತಿಗಳಾದ ಶ್ರೀ ರಾಮನಾಥ್ ಕೋವಿಂದ್‌ರವರನ್ನು ಪರಮಪೂಜ್ಯ ಜಗದ್ಗುರುಗಳವರು ಗೌರವಿಸಿ ಸನ್ಮಾನಿಸುತ್ತಿರುವುದು. ಚಿತ್ರದಲ್ಲಿ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದಗೌಡ, ಡಾ. ಬಿ. ಸುರೇಶ್‌ರವರು (13.6.2019)




ಊಟಿಯಲ್ಲಿ ನಡೆದ ಜೀವನೋತ್ಸಾಹ ಶಿಬಿರದಲ್ಲಿ ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು ಪ್ರವಚನ ನೀಡುತ್ತಿರುವುದು. ಚಿತ್ರದಲ್ಲಿ ಡಾ. ಗೊ.ರು. ಚೆನ್ನಬಸಪ್ಪ, ಪರಮಪೂಜ್ಯ ಜಗದ್ಗುರುಗಳವರು ಮತ್ತು ಊಟಿಯ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್.ಪಿ. ಧನಪಾಲ್‌ರವರು (12.5.2019)



ಮೈಸೂರಿನ ಶ್ರೀ ಸುತ್ತೂರು ಮಠಕ್ಕೆ ಭೇಟಿ ನೀಡಿದ ಈಶಾ ಫೌಂಡೇಷನ್‌ನ ಸಂಸ್ಥಾಪಕರಾದ ಸದ್ಗುರು ಶ್ರೀ ಜಗ್ಗಿ ವಾಸುದೇವ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಗೌರವಿಸುತ್ತಿರುವುದು (2.6.2019)




ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ದತ್ತಿ ಉಪನ್ಯಾಸ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಂಶೋಧನಾ ವಿಭಾಗದ ನಿರ್ದೇಶಕರಾದ ಡಾ. ಗೀತಾ ಗೋಪಿನಾಥ್‌ರವರು ಉಪನ್ಯಾಸ ನೀಡುತ್ತಿರುವುದು. ಚಿತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ.ಆರ್. ವೇಣುಗೋಪಾಲ್‌ರವರು (20.5.2019)